# ಕೊಡಗು ಸಂಗಾತಿ

ಸೆಪ್ಟೆಂಬರ್, 16 ರಿಂದ 30, 2000 ಪಾಕ್ಷಿಕ ಪತ್ರಿಕೆ (ಸೋಣ 31,ನಿರ್ನಾಲ್ 1-14 )

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 ಸಂಪುಟ : 4 ಸಂಚಿಕೆ : 18 ಪುಟಗಳು : 24 ಬೆಲೆ ರೂ. : 6-00




ಲೇಖನ : ಒಳಪುಟಗಳಲ್ಲಿ

## ಶಿಕ್ಷಕರ ದಿನಾಚರಣೆ ಮತ್ತು ಡಾ|| ಸರ್ವೆಪಳ್ಳಿರಾಧಕೃಷ್ಣನ್ (1888-1974)

**ನಾಡಿನ ಓದುಗರಿಗೆ ಮಹಾಲಯ ಅಮವಾಸ್ಯೆಯ ಶುಭಾಶಯಗಳು.**

## ಪ್ರಥಮ ಹುಟ್ಟು ಹಬ್ಬದ ಶುಭಾಶಯಗಳು



ಚೆರಿಯಮನೆ ಸಂಮ್ಮುದ್ಧಿ ಲೋಕೇಶ್

ಅಮೇರಿಕಾ ಕ್ಯಾಲಿಪೋರ್ನಿಯಾದ ಸ್ಯಾನೋಸೆ ನಗರದಲ್ಲಿ ತನ್ನ ಪ್ರೀತಿಯ ಮಾತಾ ಪಿತೃಗಳಾದ ಲೀಲಾವತಿ ಹಾಗೂ ಲೋಕೇಶ್‌ರವರ ಜೊತೆ ಬೆಳೆಯುತ್ತಿರುವ ಮುದ್ದಿನ ಕಣ್ಮಣಿಗೆ ತಾರೀಖು 23-09-2000ದಂದು ಪ್ರಥಮ ವರ್ಷದ ಹುಟ್ಟು ಹಬ್ಬದ ನಮ್ಮೆಲ್ಲರ ಶುಭಾಶಯ ಹಾಗೂ ಆರ್ಶೀರ್ವಾದಗಳು.

*ರಿಂದ,*

ಅಜ್ಜಿ : ಚೆರಿಯಮನೆ ಶ್ರೀಮತಿ ಪ್ರೇಮ ಶಿವರಾಮು, ಬೆಂಗಳೂರು.
ತಾತ : ಬೈತಡ್ಕ ಎ. ಜೋಯಪ್ಪ, ಡಿ.ಎಸ್.ಪಿ., ಬೆಂಗಳೂರು
ಅಜ್ಜಿ : ಡಾ. ಎಂ. ಎನ್. ಬೋಜಮ್ಮ, ಸರ್ಜನ್,
ಫಿಜಿಷಿಯನ್ ಮತ್ತು ಹೃದ್ರೋಗ ತಜ್ಞರು, ಬೆಂಗಳೂರು.
ಚಿಕ್ಕಮ್ಮ : ಬಿ. ಜೆ. ಲಕ್ಷ್ಮಿ (ಎಂ. ಬಿ.ಬಿ.ಎಸ್)
ಮಾವ : ಬಿ.ಜೆ.ಲೋಹಿತ್, (ಬಿ.ಇ.)

---

## ವಿಜಯನಗರ 4ನೇ ಹಂತದ ನಿವೇಶನದಾರರ ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಮೈಸೂರು

# 2063, 2ನೇ ಘಟ್ಟ, 4ನೇ ಹಂತ, ವಿಜಯನಗರ ಬಡಾವಣೆ, ಮೈಸೂರು -17.

ಮಾನ್ಯರೇ,

ಈ ಮೂಲಕ ತಿಳಿಸಲ್ಪಡುವುದೇನೆಂದರೆ ದಿನಾಂಕ 1-10-2000 ದ ಆದಿತ್ಯವಾರ ಬೆಳಗ್ಗೆ 11ಘಂಟೆಗೆ ಮೇಲ್ಕಂಡ ಸಂಘವು ವಿಜಯನಗರ ನಾಲ್ಕನೇ ಹಂತದ ಎಲ್ಲಾ ನಿವೇಶನದಾರರ ಕುಂದು-ಕೊರತೆಗಳ ಜೊತೆಗೆ ಹಲವು ನಿವೇಶನಗಳು ಅದಲು ಬದಲಾಗಿರುವ ಬಗ್ಗೆ ಚರ್ಚಿಸಲು, ತಾವುಗಳು ತಪ್ಪದೇ ಈ ಸಭೆಗೆ ಹಾಜರಾಗಬೇಕಾಗಿ ವಿನಂತಿಸುತ್ತೇವೆ.

*ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ.*

**ಸ್ಥಳ : ಡಾ|| ಸರಸ್ವತಿ**
# 2063, 2ನೇ ಘಟ್ಟ, 4ನೇ ಹಂತ, ವಿಜಯನಗರ ಬಡಾವಣೆ, ಮೈಸೂರು
[ಬೋಗಾದಿ ರಸ್ತೆಯ ಮುಖಾಂತರ ಬಂದು, ದೀಪಾನಗರದ ಬಲಭಾಗದಲ್ಲಿರುವ ಡಾಂಬರು ರಸ್ತೆಯಲ್ಲಿ ತಿರುಗುವುದು]
*ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :* ✆ : 341165, 515056, 567796

---

## ಮೊದ್ಮೆಗಾರ್ಯಗ

ಬೆಟ್ಟತ್ತೂರು ಗ್ರಾಮದ ಹಾಲಿ ಮೈಸೂರು ನಿವಾಸಿ ಚೆರಿಯಮನೆ ರಾಮಚಂದ್ರನವರ ಪುತ್ರಿ ಸ್ಮಿತಾಗೂ ಮತ್ತೆ ಬೆಂಗಳೂರು ನಿವಾಸಿ ವಕೀಲ ಪೊಕ್ಕುಲಂಡ್ರ ಅಪ್ಪಾಜಿಯವರ ಮಂಙ್ಣ ಪ್ರಹಾದ್‌ಗೂ 20-8-2000 ರ್‍ಲಿ ಮಡಿಕೇರಿಯ ಕೆಳಗಿನ ಗೌಡಕಲ್ಯಾಣ ಮಂಟಪಲಿ ಮೊದ್ಮೆ ಬಹಳ ಲಾಯ್ಕಾಗಿ ಕಳ್ತ್ ಗಡ.

* * *

ಮದೆನಾಡಿನ ಬೈನೆರವನ ಮೊಣ್ಣಪ್ಪನವರ್ರ ಮಗ್ಳು ಚಂದ್ರ ಕಲಾಂಗೂ ಮತ್ತೆ ಹೊಸ ಪಟ್ಟಣ ಗ್ರಾಮದ ಕರ್ಣಯ್ಯನ ಕೃಷ್ಣಪ್ಪನವ್ರ ಮಂಙ್ಣ ಮೋಹನ್ (ಜರಿ)ಗೂ ಮಡಿಕೇರಿಯ ಮ್ಯಾಲೇನ ಗೌಡಸಮಾಜಲಿ ಮೊದ್ಮೆ ತಾರೀಖ್ 8-9-2000 ರ್‍ಲಿ ಬಾರಿ ಗೌಜ್‌ಲಿ ಕಳ್ತ್ ಗಡ.

---

## ತಿದ್ದುಪಡಿ

ಸಂಪುಟ 4 ಸಂಚಿಕೆ 16ರ ಪುಟ 17 ರಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡಮಿಯಿಂದ ವಿವಿಧ ಸ್ಪರ್ಧೆಗಳು,ಇದರಡಿಯಲ್ಲಿ ಬರುವ ಮಹಿಳೆಯರ ವಿಭಾಗದ ಶೋಬಾನೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಯಾಲದಾಳು ಪೂವಮ್ಮ ತಿಮ್ಮಯ್ಯ ಅನ್ನುವ ಬದಲಿಗೆ ಪಾಣತ್ತಲೆ ಜಾನಕ್ಕಿ ಬಿದ್ದಪ್ಪ ಅಂತ ಸರಿಯಾಗಿ ಓದುವುದು.

— ಸಂ.

# 2000, ಆಗಸ್ಟ್ 16 ರಿಂದ 31 ರ ತನಕ

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಮಾಯವಾಗುತ್ತಿರುವ ಗೌಡರ ತಿಂಡಿ ತಿನಿಸುಗಳು | - ಸಂಪಾದಕೀಯ | 02 |
| ಜನಾಂಗದ ಭಾಷೆಯಾಗಿ ಅರೆಭಾಷೆಯ ಸ್ಥಾನಮಾನ | - ಚಾಂಗನ ಸಿ. ಪೂವಯ್ಯ | 02 |
| ಹೊಸೋಕ್ಲು ಚಿಣ್ಣಪ್ಪನವರ ಸಾಧನೆಗಳು | - ಹೊಸೋಕ್ಲು ಟಿ. ಗೋಪಾಲ (ರಾಜ) | 05 |
| ಸರ್ಪಗಂಧ - ಧಾರವಾಹಿ - 37 | - ಕೌಂಡಿನ್ಯ | 06 |
| ನಡೆದು ನೋಡಿ ಕೊಡಗಿನ ಬೆಡಗ | - ಶಿವಾನಂದ ಹೆಚ್. ಎಂ. | 07 |
| ಸಂಗಾತಿ ಭವಿಷ್ಯ | - ಜ್ಯೋತಿಷ್ಯ ಗಿರೀಶ್‌ಕುಮಾರ್ | 12 |
| ಗೌಡ ಸಮಾಜದ ಮಕ್ಕಳ ಬಾಲ್ಯ ವಿಧಿಗಳು | - ಶ್ರೀ ಎಂ. ಗಂಗಾಧರ | 13 |
| ಕುಶಾಲನಗರದಲ್ಲಿ ಅಭಿನಂದನಾ ಕಾರ್ಯಕ್ರಮ | - ಕುಂಭಗೌಡನ ಸೋಮಣ್ಣ | 14 |
| ಡಾ. ಸರ್ವೆಪಳ್ಳಿ ರಾಧಕೃಷ್ಣನ್ ಮತ್ತು ಶಿಕ್ಷಕರ ದಿನಾಚರಣೆ | - | 5 |
| ಕೈಲ್ ಪೋಳ್ದ್ | - ಕುಂಟುಪುಣಿ ರಾಮಕೃಷ್ಣ | 19 |
| ಸುಳ್ಯದಲ್ಲಿ ಗೌಡ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ಹಾಗೂ ಜನಪ್ರತಿ ನಿಧಿಗಳಿಗೆ ಅಭಿನಂದನಾ ಸಮಾರಂಭ | - ಎಂ. ಆರ್. ಗೋಪಾಲ್ | 20 |
| ಕೂಡು ಬೇಟೆ | - ಬಾರಯಿಂಡ ಜೋಯಪ್ಪ | 16 |
| **ಅರೆಭಾಷಿಕ ವಿಭಾಗ** | | |
| ಅರೆಭಾಷೆಯ ಒಂದು ಸಾಮಾನ್ಯ ಮಾತುಕತೆ | - ಬೈತಡ್ಕ ಜಾನಕಿ | 08 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 18 | - ಶಂಕರನ ಬಸಪ್ಪ | 09 |


| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಮಾಯವಾಗುತ್ತಿರುವ ಗೌಡರ ತಿಂಡಿ ತಿನಿಸುಗಳು

ಮಾಯವಾಗುತ್ತಿರುವ ಗೌಡರ ತಿಂಡಿ ತಿನಿಸುಗಳು ಪಾಶ್ಚಾತ್ಯ ನಾಗರೀಕತೆಯ ಅನುಕರಣೆಯಿಂದಾಗಿ ನೈಸರ್ಗಿಕವಲ್ಲದ "ಫಾಸ್ಟ್ ಪುಡ್" "ರೆಡಿಮೇಡ್ ಪುಡ್‌ನ ಹಾವಳಿಯಿಂದಾಗಿ ಯುವಪೀಳಿಗೆ ಮನೆಯಲ್ಲಿಯೇ ರುಚಿಯಾದ ಶುಚಿಯಾದ ನೈಸರ್ಗಿಕ ಮೂಲದ ಆಹಾರ ಪದಾರ್ಥಗಳನ್ನು ಉಪಯೋಗಿಸುವುದನ್ನು ಬಿಡುತ್ತಾ ಬರುತ್ತಿದ್ದಾರೆ. ಅಡಿಗೆ ಮನೆಯಲ್ಲಿ ಸೌದೆಯ ಹೊಗೆಯನ್ನು ತಾಳಲಾರದೆಯೇ ಅಥವಾ ಮೈ ಮುರಿದು ಬೆಂಕಿಯ ಮುಂದೆ ಕುಳಿತು ಬೆವರು ಸುರಿಸಿ ಕಷ್ಟಪಡಬೇಕಾಗುತ್ತದೆ ಎಂಬ ಸೋಮಾರಿತನದಿಂದ ಮನೆಯಲ್ಲಿ ಅಡಿಗೆಯನ್ನೇ ಮಾಡದೆ ರೆಡಿಮೇಡ್ ಆಹಾರಗಳನ್ನು ತಂದು ತಿನ್ನುತ್ತಿದ್ದಾರೆ. ಮ್ಯಾಗಿ ನೂಡಲ್ಸ್, ಚೈನಿಸ್ ನೂಡಲ್ಸ್, ಅಮೇರಿಕಾದಲ್ಲಿಯೋ, ಆಸ್ಟ್ರೇಲಿಯಾದಲ್ಲಿಯೋ ತಯಾರಿಸಿದ ಮೀಸಿನ, ಹಂದಿಮಾಂಸದ ಕೀಮ, ಕೈಮ ಇವುಗಳನ್ನು ತಿನ್ನುತ್ತಿ ದ್ದಾರೆ. ಇವುಗಳನ್ನು ಎಷ್ಟು ದಿನದ ಹಿಂದೆ ತಯಾರಿಸಿದ್ದಾರೋ ದೇವರಿಗೆ ಗೊತ್ತು. ಮನೆಗೆ ತಂದ ಮೇಲೆ ಫ್ರಿಡ್ಜ್‌ನಲ್ಲಿಟ್ಟು ಯಾವಾಗ ಬೇಕಾದರೂ ತಿನ್ನಬಹುದೆಂಬ ಅಭಿಪ್ರಾಯದಿಂದ ನೈಸರ್ಗಿಕವಾದ ತಾಜಾ ತಿಂಡಿ ತಿನಿಸುಗಳನ್ನು ತಯಾರಿಸುವುದನ್ನೇ ಬಿಟ್ಟು ಬಿಟ್ಟಿದ್ದಾರೆ.

ಕೊಡಗಿನ ಗೌಡ ಮಹಿಳೆಯರು ಹಿಂದೆ ತಯಾರಿಸುತ್ತಿದ್ದ, ಹಲಸಿನ ಹಣ್ಣಿನ, ಬಾಳೆಹಣ್ಣಿನ, ಬೆಲ್ಲದ ಖಜ್ಜಾಯ, ಹಲಸಿನಹಣ್ಣಿನ ಕೂಗಲೆ ಹಿಟ್ಟು, ಹಲಸಿನಕಾಯಿಯ ಹಪ್ಪಳ, ಕುಚ್ಚೆಸಾರು, ಹಲಸಿನ ಬೀಜದ ಚಟ್ನಿ, ಹೊರೆದ ಹಲಸಿನ ಬೀಜದ ಸಿಹಿಪುಡಿ, ಮರಕೆಸುವಿನ ಎಲೆಯ ಪಕೋಡ, ಹುರಿದ ಅಕ್ಕಿಯ ಮುದ್ದೆ ಹಿಟ್ಟು, ಕೆಂಡದ ಹಿಟ್ಟು, ಚೆಟ್ಟೆಟ್ಟು, ತೆಂಗಿನ ಕಾಯಿ ತುರಿ ಮಿಶ್ರಣದ ಬೆಲ್ಲದ ರೊಟ್ಟಿ, ಅಕ್ಕಿ ಹಿಟ್ಟಿನ ಖಜ್ಜಾಯ, ಅಕ್ಕಿಯ ಪಾಪಿಟ್ಟು, ಕಡಬು, ಹಲಸಿನ ಹಣ್ಣಿನ ಬಾಳೆ ಹಣ್ಣಿನ ದೋಸೆ, ಹೆಸರು ಪಾಯಸ,ಆಟಿ ಸೊಪ್ಪು ಪಾಯಸ, ಕಯ್ಯುಳಿ ಚಟ್ನಿ, ಮಾವಿನಕಾಯಿ ಅಂಬಟೆಕಾಯಿ, ಹೇರಳೆ ಕಾಯಿಯ ಉಪ್ಪಿನಕಾಯಿ ವಿವಿಧ ಹಣ್ಣಿನ ಶರಬತ್ತು ಇವೆಲ್ಲ ಮಾಯವಾಗುತ್ತಾ ನಮ್ಮ ಆರೋಗ್ಯವನ್ನುಕಾಪಾಡುವ ತಾಜಾ ನೈಸರ್ಗಿಕ ವಸ್ತುಗಳನ್ನು ಉಪಯೋಗಿಸುವ ನಮ್ಮ ಸಂಸ್ಕೃತಿಯ ಆಹಾರ ಪದಾರ್ಥಗಳ ಸೇವನೆ ಮರೆತೇ ಹೋಗಿದೆ. ನಮ್ಮ ಅಜ್ಜಿಯರು ತಯಾರಿಸುತ್ತಿದ್ದ ನಾಟಿ ಔಷಧಿಗಳನ್ನುಮರೆಯುತ್ತಾ ಹೋಗುತ್ತಿದ್ದೇವೆ. ಇವುಗಳ ಅಭಿವೃದ್ಧಿಗೆ ನಮ್ಮವರಿಂದ ಸಾಧ್ಯವಿಲ್ಲವೇ ಎಂದು ಸಂಗಾತಿಯ ಪ್ರಶ್ನೆ.

---

## ಜನಾಂಗದ ಭಾಷೆಯಾಗಿ ಅರೆಭಾಷೆಯ ಸ್ಥಾನಮಾನ

ಕೆಲವು ದಿನಗಳ ಹಿಂದೆ ನಮ್ಮ ಹತ್ತಿರದ ಬಂಧುವೊಬ್ಬರನ್ನು ಮಡಿಕೇರಿಯಲ್ಲಿ ಭೇಟಿಯಾಗಿದ್ದೆ. ಬಹಳ ವರ್ಷಗಳ ನಂತರದ ಅಪರೂಪದ ಭೇಟಿಯಾಗಿದ್ದರಿಂದ ಗಂಟೆಗಟ್ಟಲೆ ನಮ್ಮ ಮಾತುಕತೆ ಸಾಗಿತ್ತು. ಇಷ್ಟಾದರೂ ತೃಪ್ತರಾಗದೆ ಬಲವಂತದಿಂದ ನನ್ನನ್ನು ಅವರ ಮನೆಗೂ ಕರೆದೊಯ್ದರು. ಬಸ್ಸಿನಿಂದ ಇಳಿದು ಎರಡು ಮೂರು ಕಿ.ಮೀ. ಕಾಲು ದಾರಿಯಲ್ಲಿ ನಡೆದು ಅವರ ಮನೆ ಸೇರಿದೆವು.

ಮನೆಯವರಿಂದ ಉಪಚರಿಸಲ್ಪಟ್ಟು, ತಿಂಡಿ ಕಾಫಿಯ ಸೇವನೆ ಮುಗಿಸುವಷ್ಟರಲ್ಲಿ ಪರ್ವತಾರೋಹಿಗಳು ಹೊರುವ ಲಗ್ಗೇಜಿನಂತೆ ಬೆನ್ನ ಮೇಲೆ ಪುಸ್ತಕದ ಚೀಲವನ್ನು ಹೇರಿಕೊಂಡ ಪುಟಾಣಿಗಳಿಬ್ಬರು ಓಡೋಡುತ್ತಾ ಬಂದು ಮನೆಯನ್ನು ಪ್ರವೇಶಿಸಿದರು. ಎದುರಿಗೆ ಅಪರಿಚಿತ ವ್ಯಕ್ತಿಯಾದ ನನ್ನ ಮುಖ ದರ್ಶನವಾದ ಕೂಡಲೆ ಅವರ ಕಾಲುಗಳು ತಟಸ್ಥವಾದವು. ಒಡನೆಯೇ ಅವರ ತಂದೆ ಮಕ್ಕಳಿಗೆ ನನ್ನನ್ನು ಪರಿಚಯಿಸಿ, ಮಾಮನಿಗೆ ನಮಸ್ತೆ ಹೇಳಿ, ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರಾ ಎಂದು ಕೇಳಿ ಮುಂತಾಗಿ ಕನ್ನಡಲ್ಲಿ ಹೇಳತೊಡಗಿದರು. ಇದುವರೆಗೂ ನನ್ನೊಂದಿಗೆ ಅರೆಭಾಷೆಯಲ್ಲಿ ಮಾತನಾಡುತ್ತಿದ್ದ ಅವರು ಮಕ್ಕಳೊಡನೆ ಮಾತನಾಡುವಾಗ ಕನ್ನಡವನ್ನು ಬಳಸುವುದನ್ನು ಕಂಡು ನನ್ನಲ್ಲಿ ಕುತೂಹಲ ಮೂಡಿತು.

ಸಾಮಾನ್ಯವಾಗಿ ಪಟ್ಟಣ ಪ್ರದೇಶಗಳಲ್ಲಿ ನೆಲೆಸಿರುವ ಹಲವು ಜನರು ಒಂದು ಬಗೆಯ ಒಣ ಪ್ರತಿಷ್ಟೆಯನ್ನು ಬೆಳೆಸಿ ಕೊಂಡು ತಮ್ಮ ಮಕ್ಕಳಿಗೆ ಅರೆಭಾಷೆಯನ್ನು ಕಲಿಸದಿರುವುದು ನೋಡಿದ್ದೆ. ಸುತ್ತಮುತ್ತಲ ಪರಿಸರದಲ್ಲಿ ಇತರ ಜನಾಂಗದವರು ನೆಲೆಸಿರುವುದರಿಂದ ಅವರ ನಡುವೆ ನಮ್ಮ ಭಾಷೆಯನ್ನು ಬಳಸಲು ಅವರಿಗಿರುವ ಹಿಂಜರಿಕೆ ಇದಕ್ಕೆ ಕಾರಣವಾಗಿರಬಹುದು. ಆದರೆ ಈ ಹಳ್ಳಿಯ ಪರಿಸರದಲ್ಲಿ, ಎಲ್ಲೆಡೆ ಅರೆಭಾಷೆ ಮಾತಾಡುವವರು ತುಂಬಿರುವೆಡೆಯಲ್ಲಿ ಮಕ್ಕಳನ್ನು ತಮ್ಮ ಭಾಷೆಯಿಂದ ದೂರವಿಡುವ ಕ್ರಮವನ್ನು ಕಂಡು ಆಶ್ಚರ್ಯವಾಯಿತು. ಈ ಬಗ್ಗೆ ನನ್ನ ಅನುಮಾನವನ್ನು ವ್ಯಕ್ತಪಡಿಸಿದಾಗ, ಅರ್ಥವಿಲ್ಲದ ನೀರಸ ಪ್ರತಿಕ್ರಿಯೆ ಅವರಿಂದ ಬಂದಿತು.

ಮನೆಯಲ್ಲಿ ಅರೆಭಾಷೆ ಮಾತನಾಡಿ ರೂಢಿಯಾಗಿರುವ ಮಕ್ಕಳು ಶಾಲೆಯಲ್ಲಿ ಮಾತನಾಡುವಾಗ ಕನ್ನಡದೊಂದಿಗೆ ಅರೆ ಭಾಷೆಯ ಪದಗಳು ಬೆರೆತು ಒಂದು ಬಗೆಯ ಗೊಂದಲ ವುಂಟಾಗುತ್ತದೆ. ಇದರಿಂದಾಗಿ ಇತರ ಮಕ್ಕಳು ಇವರನ್ನು ಪರಿಹಾಸ್ಯ ಮಾಡಬಹುದು. ಇತ್ತೀಚಿನ ದಿನಗಳಲ್ಲಂತೂ ನಮ್ಮ ಜನಾಂಗದವರ ಮಕ್ಕಳಲ್ಲಿ ಹೆಚ್ಚಿನವರು ಕನ್ನಡದಲ್ಲಿಯೇ ಮಾತನಾಡುತ್ತಿರುತ್ತಾರೆ. ಅಂತಹವರು ಅರೆಭಾಷೆ ಮಾತನಾಡುವವರನ್ನು ಕೀಳರಿಮೆಯಿಂದ ನೋಡುತ್ತಾರೆ ಮುಂತಾಗಿ ಹೇಳತೊಡಗಿದರು.

---

**ಹತ್ತು ಸುಳ್ಳು ಹೇಳುವಾಗ ಒಂದರಲ್ಲಾದರೂ ಸಿಕ್ಕಿ ಬೀಳದಿರನು**

ಒಬ್ಬ ವ್ಯಕ್ತಿಯ ಬುದ್ಧಿವಂತಿಕೆಯನ್ನು ಅಳೆಯಲು ಅಥವಾ ಆತನ ಪ್ರತಿಷ್ಠೆಯನ್ನು ಗುರುತಿಸಲು ಆತನು ಬಳಸುವ ಭಾಷೆ ಮಾನದಂಡವಾಗುತ್ತದೆ ಎಂಬ ಅಭಿಪ್ರಾಯ ಅವರ ಮಾತಿನಲ್ಲಿ ಹುದುಗಿರುವುದು ತಿಳಿಯಿತು. ಇದು ಅವರ ಸಂಕುಚಿತ ಮನಸ್ಸಿನ ಪರಿಧಿಯೊಳಗೆ ಸೃಷ್ಟಿಗೊಂಡ ತಪ್ಪು ಕಲ್ಪನೆ. ನಮ್ಮಲ್ಲಿ ಬಹಳಷ್ಟು ಮಂದಿ ಸಾಮಾನ್ಯವಾಗಿ ಇದೇ ರೀತಿಯ ಮನೋಭಾವನೆಯನ್ನು ಬೆಳೆಸಿಕೊಂಡಿರುವುದು ಕಂಡುಬರುತ್ತದೆ. ತಮ್ಮ ಭಾಷೆಯ ಬಗೆಗೆ ಅಭಿಮಾನವಿಟ್ಟುಕೊಳ್ಳುವುದಕ್ಕೆ ಬದಲಾಗಿ ಇಂತಹ ಕೀಳರಿಮೆ ಬೆಳೆಸಿಕೊಳ್ಳುವುದು ಅವರ ಮಾನಸಿಕ ದೌರ್ಬಲ್ಯವೆಂದೇ ಹೇಳಬೇಕಾಗುತ್ತದೆ. ಈ ವಿಚಾರದಲ್ಲಿ ವಾಸ್ತವತೆಯ ಪರಿಚಯ ಮಾಡಿಸಿ ಭಾಷೆಯ ಬಗೆಗೆ ಅವರಲ್ಲಿ ಕವಿದಿದ್ದ ಅಸಡ್ಡೆಯ ತೆರೆಯನ್ನು ತೆರವು ಮಾಡಲು ಯತ್ನಿಸಿದೆ.

ಭಾಷೆ ಎನ್ನುವುದು ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಬಳಸುವಂತಹ ಮಾಧ್ಯಮ, ಜಗತ್ತಿನೆಲ್ಲೆಡೆಯಲ್ಲಿಯೂ ಜನರು ತಮ್ಮ ಗುಂಪು, ಸಮುದಾಯ ಅಥವಾ ಜನಾಂಗಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ತಮ್ಮದೇ ಆದ ಭಾಷೆಯನ್ನು ರೂಢಿಸಿಕೊಂಡು ಸಂಪರ್ಕ ಮಾಧ್ಯಮವಾಗಿ ಬಳಸುತ್ತಾ ಬಂದಿದ್ದಾರೆ. ಸಹಜವಾಗಿಯೇ ತಮ್ಮ ಭಾಷೆಯ ಬಗೆಗೆ ಅಭಿಮಾನ ಹೊಂದಿರುವ ಅವರನ್ನು ಅವರ ಭಾಷೆ ಹತ್ತಿರಕ್ಕೆ ತಂದು ಅವರ ನಡುವೆ ಪರಸ್ಪರ ಸ್ನೇಹ ಸೌಹಾರ್ದ, ಸಹಕಾರ ಮನೋಭಾವ, ಒಗ್ಗಟ್ಟು ಮುಂತಾದ ಉತ್ತಮ ಗುಣಗಳು ಬೆಳೆಯಲು ಅವಕಾಶ ಮಾಡಿಕೊಡುತ್ತದೆ. ಹೀಗೆ ಪ್ರತಿಯೊಂದು ಭಾಷೆಗೂ ತನ್ನದೇ ಆದ ಮಹತ್ವ, ಪ್ರಾಮುಖ್ಯತೆ ಮುಂತಾದ ಗುಣಗಳಿರುವುದರಿಂದ ಯಾವ ಒಂದು ಭಾಷೆಯನ್ನು ಕೀಳು ಅಥವಾ ಮೇಲು ಎಂದು ಪರಿಗಣಿಸುವುದು ತಪ್ಪಾಗುತ್ತದೆ. ನಾವು ಬಳಸುತ್ತಿರುವ ಅರೆಭಾಷೆಯು ನಡುಕನ್ನಡದಿಂದ ಹುಟ್ಟಿಕೊಂಡ ಒಂದು ಉಪಭಾಷೆಯಾದರೂ ಅದಕ್ಕೂ ಒಂದು ಪ್ರತ್ಯೇಕವಾದ ಅಸ್ತಿತ್ವವಿದೆ. ಮೇಲಾಗಿ ನಮ್ಮ ಜನಾಂಗದವರಲ್ಲಿ ಪರಸ್ಪರ ಆತ್ಮೀಯತೆಯನ್ನು ಮೂಡಿಸುವ, ಬಾಂಧವ್ಯವನ್ನು ಬೆಸೆಯುವಂತಹ ಗುಣಗಳನ್ನು ಅದು ಹೊಂದಿದೆ. ದೂರದ ಪ್ರದೇಶಗಳಲ್ಲಿ ವಿರಳವಾಗಿ ನೆಲೆಸಿರುವಂತಹ ನಮ್ಮ ಜನಾಂಗ ಬಾಂಧವರಿಗೆ ಈ ವಿಚಾರ ಬಹಳ ಚೆನ್ನಾಗಿ ಮನದಟ್ಟಾಗಿರುತ್ತದೆ. ಇಂತಹ ಕಡೆಗಳಲ್ಲಿ ಗುರುತು ಪರಿಯಚವಿಲ್ಲದಿರುವವರು ಕೂಡ ಅರೆಭಾಷೆ ಮಾತನಾಡುವವರು ತಮ್ಮ ಸಮೀಪದಲ್ಲಿ ಇರುವ ವಿಷಯ ತಿಳಿದರೆ ಸಾಕು ಒಡನೆಯೇ ಅವರನ್ನು ಸಂಪರ್ಕಿಸಲು ಹಾತೊರೆಯುತ್ತಾರೆ. ಅವರನ್ನು ಭೇಟಿಯಾದ ನಂತರ ಬಹಳ ಬೇಗನೆ ಆತ್ಮೀಯರಾಗಿ ಬಿಡುತ್ತಾರೆ. ಇದಕ್ಕೆಲ್ಲ ಕಾರಣವಾಗುವುದು ಅವರು ಬಳಸುವಂತಹ ಅರೆಭಾಷೆಯೆ. ಇಷ್ಟೊಂದು ಮಹತ್ವವನ್ನು ಪಡೆದಿರುವ ನಮ್ಮ ಭಾಷೆಯ ಬಗೆಗೆ ನಾವು ಹೆಮ್ಮೆ ಪಟ್ಟುಕೊಳ್ಳಬೇಕೇ ಹೊರತು ಅದನ್ನು ಬಳಸಲು ಹಿಂಜರಿಯುವಂತಹ ಮನೋಭಾವವನ್ನು ತೊರೆಯಬೇಕು, ಮುಂತಾಗಿ ನನ್ನಿಂದ ಸಾಧ್ಯವಾದಷ್ಟು ತಿಳಿಯ ಹೇಳಿದೆನು. ಇದರ ಪರಿಣಾಮ ಅವರ ಮೇಲೆ ಎಷ್ಟರ ಮಟ್ಟಿಗೆ ಆಯಿತೋ ಹೇಳಲಾರೆ.

ಈ ಮೇಲಿನ ಪ್ರಸಂಗವನ್ನು ಒಂದು ಉದಾಹರಣೆಯಾಗಿ ಮಾತ್ರ ಇಲ್ಲಿ ಪ್ರಸ್ತಾಪಿಸಿದ್ದೇನೆ. ಬಹುಪಾಲು ಜನರು ತಮ್ಮ ಮಕ್ಕಳಿಗೆ ಅರೆಭಾಷೆ ಕಲಿಸುವ ಆಸಕ್ತಿ ತೋರದಿರುವುದು ಸಾಮಾನ್ಯವಾಗಿ ಎಲ್ಲ ಕಡೆ ಕಂಡು ಬರುತ್ತಿದೆ. ಮನೆಯಲ್ಲಿ ಹಿರಿಯರು ಅರೆಭಾಷೆ ಮಾತನಾಡುತ್ತಿದ್ದರೂ ಮಕ್ಕಳೊಂದಿಗೆ ಮಾತ್ರ ಈ ಭಾಷೆಯನ್ನು ಬಳಸುವುದಿಲ್ಲ. ಇದೊಂದು ಅನಾರೋಗ್ಯಕರವಾದ ಬೆಳವಣಿಗೆ. ಇದೇ ರೀತಿಯ ಮನೋಭಾವನೆ ಸಾಂಕ್ರಾಮಿಕ ರೋಗದಂತೆ ಹಳ್ಳಿಗಳ ಕಡೆಗೂ ಕಾಲು ಚಾಚಿರುವುದು ಕಳವಳಕಾರಿಯಾದ ವಿಚಾರವಾಗಿದೆ. ಅರೆಭಾಷೆಯನ್ನು ಬಳಸಲು ಅಡ್ಡಿಯಾಗುವಂತಹ ಯಾವುದೇ ಕಾರಣಗಳಿಲ್ಲದಿದ್ದರೂ ಹಳ್ಳಿಗಳಲ್ಲಿ ನೆಲೆಸಿರುವ ಕೆಲವರು ಇದನ್ನೊಂದು ಪ್ರತಿಷ್ಠೆಯ ವಿಷಯವನ್ನಾಗಿ ಕಲ್ಪಿಸಿಕೊಂಡು ತಮ್ಮ ಮಕ್ಕಳನ್ನು ಅರೆಭಾಷೆಯಿಂದ ದೂರವಿಡುವಲ್ಲಿ ನಿರತರಾಗಿದ್ದಾರೆ, ವಿವೇಚನಾರಹಿತವಾದ ಇಂತಹ ಕ್ರಮವನ್ನು ಅಕ್ಷಮ್ಯ ಅಪರಾಧವೆಂದೇ ಪರಿಗಣಿಸಬೇಕಾಗುತ್ತದೆ.

**ಎಳೆಯ ಮಕ್ಕಳ ಮನಸ್ಸು ಹಸಿಯ ಮಣ್ಣಿನಂತೆ ಇರುವುದು. ಅದನ್ನು ತಿದ್ದಿ, ತೀಡಿ, ಉತ್ತಮವಾದ ಆಕಾರವನ್ನು ಕೊಟ್ಟಾಗ ಅದೊಂದು ಸುಂದರವಾದ ಮೂರ್ತಿಯಾಗಿ ರೂಪು ತಳೆಯುತ್ತದೆ. ಈ ಹಂತದಲ್ಲಿ ಮಕ್ಕಳಿಗೆ ನಮ್ಮ ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳ ಬಗೆಗೆ ಸೂಕ್ತ ರೀತಿಯ ತಿಳುವಳಿಕೆ ನೀಡಿದರೆ ಮುಂದೆ ಇವುಗಳ ಬಗ್ಗೆ ಅವರಲ್ಲಿ ಆದರಾಭಿಮಾನಗಳು ಬೆಳೆಯಲು ಅವಕಾಶವಾಗುತ್ತದೆ. ಇದಕ್ಕೆ ಬದಲಾಗಿ ಎಳೆಯ ಮನಸ್ಸಿನ ಮೇಲೆ ಭಾಷೆಯ ವಿಚಾರದಲ್ಲಿ ಸಲ್ಲದ ಕೀಳರಿಮೆ, ಅಸಡ್ಡೆ ಮುಂತಾದ ಅವಿವೇಕದ ಅಭಿಪ್ರಾಯಗಳು ಬೆಳೆಯಲು ಅವಕಾಶ ಮಾಡಿಕೊಡುವುದು ಸರಿಯಲ್ಲ.**

ನಮ್ಮ ಜನಾಂಗದ ಯಾವುದೇ ಖಾಸಗಿ ಅಥವಾ ಸಾರ್ವಜನಿಕ ಸಮಾರಂಭಗಳಿಗೆ ಭೇಟಿ ನೀಡಿದಾಗ ಅಲ್ಲಿ ಸಮಾನ್ಯವಾಗಿ ಹಿರಿಯರಲ್ಲಿ ಹೆಚ್ಚಿನವರು ಅರೆಭಾಷೆಯಲ್ಲಿ ಮಾತನಾಡುವುದನ್ನು ಕಾಣಬಹುದು. ಆದರೆ ಮಕ್ಕಳ ಗುಂಪಿನಲ್ಲಿ ಈ ಭಾಷೆ ಮಾತನಾಡುವವರನ್ನು ಗುರುತಿಸುವುದು ಕಷ್ಟ. ಅರೆಭಾಷೆಯ ಬಗೆಗೆ ಜನರು ತೋರುತ್ತಿರುವ ನಿರಾಸಕ್ತಿಯಿಂದಾಗಿ ಇಂತಹ ವಾತಾವರಣ ನಿರ್ಮಾಣವಾಗಿದೆಯೆಂಬುದು ಬೇಸರದ ಸಂಗತಿಯಾಗಿದೆ. ಇದೇ ತರಹದ ಪರಿಸ್ಥಿತಿ ಮುಂದುವರಿದಲ್ಲಿ ಕೆಲವೇ ವರ್ಷಗಳಲ್ಲಿ ನಮ್ಮ ಭಾಷೆಯ ಬಳಕೆಯಿಂದ ಕಣ್ಮರೆಯಾಗುವ ಖಂಡಿತ ಅಪಾಯವುಂಟು.

ಪ್ರಜ್ಞಾವಂತರಾದ ನಮ್ಮ ಯುವ ಜನಾಂಗ ಇಂದು ಅರೆಭಾಷೆಗೆ ಒದಗಿರುವ ಸ್ಥಿತಿಯನ್ನರಿತು ಅದರ ಸುಧಾರಣೆಯತ್ತ ಗಮನ ಹರಿಸಿದರೆ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಈ ಬಗ್ಗೆ ನಾನು ಇಲ್ಲಿ ಒಂದು ವಿಚಾರವನ್ನು ನೆನಪಿಸಿಕೊಳ್ಳಲು ಇಚ್ಚಿಸುತ್ತೇನೆ. ಬೆಂಗಳೂರಿನಲ್ಲಿ ನೆಲೆಸಿರುವ ನಮ್ಮ ಜನಾಂಗದ ಯುವಕರು ಯುವಕ ಸಂಘವೊಂದನ್ನು ಸ್ಥಾಪಿಸಿಕೊಂಡಿರುವರು. ಇವರ ಕಾರ್ಯ ಚಟುವಟಿಕೆಗಳಲ್ಲೆಲ್ಲ ಅತ್ಯಂತ ಮೆಚ್ಚುಗೆಯ ಸಾಧನೆಯೆಂದರೆ, ಅರೆಭಾಷೆಯ ಬಗೆಗೆ ಅವರು ತೋರುತ್ತಿರುವ ವಿಶೇಷವಾದ ಕಾಳಜಿ, ಅಭಿಮಾನ, ಮನೆಯಲ್ಲಿ ಅರೆಭಾಷೆ

ಸತ್ಯ ಹೇಳುವವನಿಗೆ ಒಂದು ನಾಲಿಗೆ, ಸುಳ್ಳು ಹೇಳುವವನಿಗೆ ಹಲವು ನಾಲಿಗೆ

ಮಾತನಾಡುವ ಅವಕಾಶದಿಂದ ವಂಚಿತರಾಗಿದ್ದವರು ಕೂಡ ಈ ಸಂಘದ ಸಂಪರ್ಕವಾದ ನಂತರ ಸರಾಗವಾಗಿ ಅರೆಭಾಷೆಯಲ್ಲಿ ಮಾತನಾಡುವುದನ್ನು ರೂಢಿಸಿಕೊಂಡಿದ್ದಾರೆ.

ಒಮ್ಮೆ ಈ ಯುವಕ ಸಂಘದವರು ಕರೆದಿದ್ದ ಸಭೆಗೆ ಹಾಜರಾಗುವ ಅವಕಾಶವೊದಗಿತ್ತು. ನಮ್ಮ ಸಮಾಜದ ಹಿರಿಯರ ಆಶೀರ್ವಾದ, ಮಾರ್ಗದರ್ಶನ ದೊರಕಿದರೆ ಇನ್ನೂ ಉತ್ತಮವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನಕೂಲ ವಾಗಬಹುದೆಂಬ ಉದ್ದೇಶದಿಂದ ಕರೆದ ಸಭೆ ಅದಾಗಿತ್ತು. ಅಂದಿನ ಸಭೆಯಲ್ಲಿ ತಮ್ಮ ಆಹ್ವಾನವನ್ನು ಮನ್ನಿಸಿ ಬಂದಿದ್ದ ಹಿರಿಯರಿಗೆ ಮಾತನಾಡುವ ಪೂರ್ಣ ಅವಕಾಶವನ್ನು ಕಲ್ಪಿಸಿ ಕೊಟ್ಟು ಸಂಘದ ಸದಸ್ಯರೆಲ್ಲ ಬದಿಗೆ ಸರಿದಿದ್ದರು.

ಅಂದಿನ ಕಾರ್ಯಕ್ರಮವು ಅರೆಭಾಷೆಯಿಂದಲೇ ಆರಂಭಗೊಂಡರೂ ಮುಂದೆ ಕನ್ನಡದತ್ತ ಹೆಜ್ಜೆಯಿಟ್ಟು ನಂತರ ಇಂಗ್ಲೀಷಿನ ಮೆಟ್ಟಲನ್ನೇರಿ ಕುಳಿತಿತು. ಮುಂದೆ ಎಲ್ಲವೂ ಇಂಗ್ಲೀಷ್ ಮಯ. ಅಂದಿನ ಮಾತುಗಾರರಿಗೆ ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದಿಡುವುದಕ್ಕಿಂತ ಹೆಚ್ಚಿನ ಆಸಕ್ತಿ ಇಂಗ್ಲೀಷ್ ಭಾಷೆಯ ಬಗೆಗೆ ತಮಗಿರುವ ಹಿಡಿತವನ್ನು ತೋರ್ಪಡಿಸುವುದರಲ್ಲಿದ್ದಂತೆ ಕಂಡುಬರುತ್ತಿತ್ತು. ಅಲ್ಲಿ ನೆರೆದಿದ್ದವರು ಈ ಬಗ್ಗೆ ಪ್ರತಿಕ್ರಿಯಿಸಲೂ ಆಗದೆ, ಇದನ್ನು ಸಹಿಸಿಕೊಳ್ಳಲೂ ಸಾಧ್ಯವಾಗದ ಸ್ಥಿತಿಯಲ್ಲಿದ್ದರು. ಕೊನೆಗೂ ಸಂಘದ ಸದಸ್ಯನೊಬ್ಬ ಎದ್ದು ನಿಂತು, "ಇದುವರೆಗೂ ನಡೀತಿದ್ದಂತಹ ಈ ನಮ್ಮ ಯುವಕ ಸಂಘದ ಸಭೆಗಳ್‌ಲಿ ನಾವು ಹೈದಂಗ ಮತ್ತೆ ಗೂಡೆಗ ಮಾತ್ರ ಇರ್‍ತಿದ್ದೊ. ಆಗ ಸುರೂಂದ ಕಡೇವರೆಗೂ ಪ್ರತಿಯೊಂದು ಕಾರ್ಯಕ್ರಮನೂ ಅರೆಭಾಷೆಲೇ ನಡೀತಿತ್, ಆದರೆ ಇಂದ್‌ನ ಸಭೆಲಿ ನಮ್ಮ ಭಾಷೆಗೆ ಎಡೆಯು ಇಲ್ಲದಾವುಟು" ಎಂದು ತನ್ನ ಅಸಮಧಾನವನ್ನು ಸೂಚಿಸಿದರು. ಆತನ ಕಳಕಳಿಯ ಬಗ್ಗೆ ಯಾರೂ ಆಸಕ್ತಿ ತೋರದಿದ್ದುದರಿಂದ ಆ ಧ್ವನಿಯೂ ತಣ್ಣಗಾಯಿತು.

ನಾನು ನೋಡಿರುವ ಪ್ರಕಾರ ನಮ್ಮ ಸಮಾಜಗಳ ಸಭೆ ಸಮಾರಂಭಗಳಲ್ಲಿ ಈ ರೀತಿಯ ವ್ಯವಸ್ಥೆ ಸಾಮಾನ್ಯವಾಗಿರುತ್ತದೆ. ಇಂತಹ ಕಡೆಗಳಲ್ಲಿ ಅರೆಭಾಷೆಗೆ ವೇದಿಕೆಯನ್ನೇರುವ ಅವಕಾಶವಂತೂ ಇರುವುದಿಲ್ಲ. ಅದೇನಿದ್ದರೂ ಹರಟೆಯಲ್ಲಿ ತೊಡಗಿರುವವರ ನಡುವೆ ಮಾತ್ರ ಬಳಕೆಯಾಗುತ್ತಿರುತ್ತದೆ. ಇದಕ್ಕೆ ಕಾರಣವೇನೆಂದು ಸಭೆಯ ಸಂಘಟಕರನ್ನು ವಿಚಾರಿಸಿದರೆ, ಅವರಿಂದ ಬರುವ ಉತ್ತರ, ಅರೆಭಾಷೆಯನ್ನು ಬಳಸಿದರೆ ಸಭೆಯಲ್ಲಿ ನೆರೆದವರೆಲ್ಲರಿಗೂ ಅರ್ಥವಾಗುವುದಿಲ್ಲ ಎಂದು. ಇದೊಂದು ಕರ್ತವ್ಯಲೋಪದ ಹೊಣೆಗೇಡಿತನದ ಹೇಳಿಕೆಯಾಗುತ್ತದೆಯಷ್ಟೆ. ಏಕೆಂದರೆ ಜನಾಂಗದ ಬಗ್ಗೆ ಅಭಿಮಾನವಿಟ್ಟು ಸಭೆಗೆ ಬರುವವರಿಗೆ ತಮ್ಮ ಭಾಷೆಯ ಬಗೆಗೂ ಅದೇ ರೀತಿಯ ಒಲವು ಇರಬೇಕಾಗುತ್ತದೆ. ಅರೆಭಾಷೆಯ ಬಗ್ಗೆ ನಿರ್ಲಕ್ಷ್ಯತೋರಿ ಅದನ್ನು ಕಲಿಯದಿರುವುದು ಅವರ ತಪ್ಪು. ಇಂತಹ ಕೆಲವೇ ಮಂದಿಯ ಸಲುವಾಗಿ ಇಡೀ ಸಭೆಯಿಂದಲೇ ನಮ್ಮ ಭಾಷೆಯನ್ನು ಹೊರದೂಡುವುದು ಸರಿಯಲ್ಲ. ಬದಲಾಗಿ ಅಲ್ಲಿ ಪೂರ್ಣ ಪ್ರಮಾಣದಲ್ಲಿ ಅರೆ ಭಾಷೆಯ ಬಳಕೆಯಾದರೆ, ಭಾಷೆ ತಿಳಿಯದವರಿಗೂ ಅದರ ಬಗ್ಗೆ ಆಸಕ್ತಿ ಮೂಡುವ ಸಾಧ್ಯತೆಯಿರುತ್ತದೆ. ಈ ಹಿಂದೆ ಹೇಳಿದಂತೆ ಜನರ ನಡುವೆ ಪ್ರೀತಿ ವಿಶ್ವಾಸಗಳನ್ನು ಹೆಚ್ಚಿಸಿ, ಒಗ್ಗಟ್ಟು, ಸಹಕಾರ ಮನೋಭಾವ ಮುಂತಾದ ಉತ್ತಮ ಗುಣಗಳನ್ನು ಬೆಳೆಸುವಲ್ಲಿ ನಮ್ಮ ಭಾಷೆ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇಷ್ಟು ಮಹತ್ವವನ್ನು ಹೊಂದಿರುವ ಅರೆಭಾಷೆ ನಮ್ಮ ಜನಾಂಗದ ಸಭೆ ಸಮಾರಂಭಗಳಲ್ಲಿ ಯಶಸ್ವಿಯಾಗಿ ಬಳಸಲ್ಪಟ್ಟಾಗ ಅದರಿಂದ ಜನರ ಮೇಲೆ ಉತ್ತಮವಾದ ಪರಿಣಾಮ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಅರೆಭಾಷೆಯ ಬಗೆಗೆ ನಮ್ಮಲ್ಲಿರುವ ಕೀಳರಿಮೆ, ಹಿಂಜರಿಕೆ ಮುಂತಾದ ಮಾನಸಿಕ ದೌರ್ಬಲ್ಯಗಳನ್ನು ಬದಿಗೊತ್ತಿ ಮುಕ್ತ ಮನಸ್ಸಿನಿಂದ ಧೈರ್ಯದಿಂದ ಅದನ್ನು ಎಲ್ಲೆಡೆಯೂ ಬಳಸು ವಂತಾಗಬೇಕು. ಇದರ ಬಗ್ಗೆ ನಿರಾಸಕ್ತಿ ತೋರಿ ಬಳಕೆಯಿಂದ ಕೈ ಬಿಟ್ಟಿರುವವರು ಎಲ್ಲರೂ ತಮ್ಮ ಸಂಕುಚಿತ ಮನೋಭಾವವನ್ನು ತೊರೆದು ಅರೆಭಾಷೆಯನ್ನು ಬಳಸುವುದು ತಮ್ಮ ಅಭಿಮಾನದ ಸಂಕೇತದ ಉಳಿಯು ಎಂದು ಇದನ್ನು ಪುನೆಮಾತಾಗಿ ಸ್ವೀಕರಿಸಿದಾಗ ಇದಕ್ಕೊಂದು ಶಾಶ್ವತವಾದ ನೆಲೆ ದೊರಕಲು ಸಾಧ್ಯ. ಜೊತೆಗೆ ಜನಾಂಗದ ಸಭೆ- ಸಮಾರಂಭಗಳಲ್ಲಿ ನಮ್ಮ ಭಾಷೆಗೆ ಮೊದಲ ಆದ್ಯತೆ ದೊರೆಯಬೇಕು. ಒಟ್ಟಿನಲ್ಲಿ ಅರೆಭಾಷೆಯ ಉಳಿವು ನಮ್ಮೆಲ್ಲರ ಕರ್ತವ್ಯವೆಂದು ತಿಳಿದು ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕ್ರಿಯಾಶೀಲರಾಗಬೇಕಾಗಿದೆ.

**- ಚಾಂಗನ ಸಿ. ಪೂವಯ್ಯ, ಮೊಣ್ಣಂಗೇರಿ**

---

## ರಸಪ್ರಶ್ನೆ

1. ಜಾಗತಿಕ ಬಿಲಿಯರ್ಡ್ಸ್ ಪ್ರಶಸ್ತಿಯನ್ನು ಗಳಿಸಿದ ಪ್ರಥಮ ಭಾರತೀಯ ಯಾರು?
2. ಭಾರತದ ಬ್ಯಾಡ್ಮಿಂಟನ್ ರಂಗದ ಅನಭಿಷಕ್ತ ದೊರೆ ಎಂದು ಹೆಸರು ಗಳಿಸಿದ್ದವರು ಯಾರು?
3. ಪ್ರಪಂಚದಲ್ಲೇ ಅತ್ಯಂತ ಅಗಲವಾದ ನದಿ ಯಾವುದು?
4. ಬಾಂಗ್ಲಾದೇಶದ ಪ್ರಥಮ ಪ್ರಧಾನ ಮಂತ್ರಿ ಯಾರು?
5. ಸೊಳ್ಳೆಯಿಲ್ಲದ ದೇಶ ಯಾವುದು?
6. ಜಗತ್ತಿನಲ್ಲಿಯೇ ಅತಿ ಹೆಚ್ಚು ಕಾಫಿ ಉತ್ಪಾದಿಸುವ ರಾಷ್ಟ್ರ
7. ಪ್ರಪಂಚದ ಅತೀ ದೊಡ್ಡ ಹಕ್ಕಿ ಯಾವುದು?
8. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಯಾರು?
9. ಚಂದ್ರಲೋಕದಲ್ಲಿ ಹೆಜ್ಜೆಯಿಟ್ಟ ಮೊತ್ತ ಮೊದಲ ಮಾನವ ಯಾರು?
10. ಅಕ್ಬರ್ ಚಕ್ರವರ್ತಿಯ ಆಸ್ಥಾನದಲ್ಲಿದ್ದ ನವರತ್ನ ಕವಿಗಳಲ್ಲಿ 'ಕವಿಪ್ರಿಯ' ಎಂದು ಕರೆಯಲ್ಪಡುತ್ತಿದ್ದವನು ಯಾರು?

**1. ವಿಲ್ಸನ್ ಜೋನ್ಸ್ 2. ಪ್ರಕಾಶ್ ಪಡುಕೋಣೆ 3. ಅಮೆಜಾನ್ ನದಿ 4. ಷೇಕ್ ಮುಜುಬುರ್ ರಹಮಾನ್ 5. ಫ್ರಾನ್ಸ್ 6. ಬ್ರೆಝಿಲ್ 7. ಆಫ್ರಿಕಾ ಆಸ್ಟ್ರಿಚ್ 8. ಕೆ. ಸಿ. ರೆಡ್ಡಿ 9. ನೀಲ್ ಆರ್ಮ್‌ಸ್ಟ್ರಾಂಗ್ (ಅಮೆರಿಕ) 10. ಬೀರ್ ಬಲ್.**

**ಉಳುವಾರನ ಪ್ರಸನ್ನ ಪೊನ್ನಪ್ಪ, ಐಕೊಳ.**

# ಡಾ. ಸರ್ವೆಪಳ್ಳಿ ರಾಧಕೃಷ್ಣನ್ ಮತ್ತು ಶಿಕ್ಷಕರ ದಿನಾಚರಣೆ

ಹಿರಿಯರಿಂದ ಕಿರಿಯರಿಗೆ ಬರಬಹುದಾದ ಬಳುವಳಿಗಳಲ್ಲಿ ಯಾವುದೂ ನನಗೆ ಬರಲಿಲ್ಲ. ನಾನು ನಾನಾಗಿಯೇ ಬೆಳೆದ. ದೇವರ ದಯದಿಂದ ಮಾತ್ರ ಬೆಳಕು ಕಂಡೆ.' ಈ ಮಾತನ್ನು ನಮ್ಮ ರಾಷ್ಟ್ರಪತಿ ಆಗಿದ್ದ ದಿ. ಡಾ. ರಾಧಾಕೃಷ್ಣನ್ ತಮ್ಮ ಬಗ್ಗೆ ಹೇಳಿಕೊಂಡಿದ್ದಾರೆ.

ಡಾ. ರಾಧಾಕೃಷ್ಣನ್‌ರವರು ತತ್ವ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ತತ್ವಶಾಸ್ತ್ರ ಎಂದರೆ ಕಬ್ಬಿಣದ ಕಡಲೆ. ಆದರೆ ರಾಧಾಕೃಷ್ಣನ್‌ರ ಕೈಯಲ್ಲಿ ಅದು ಮೃದುವೂ, ಸ್ವಾದವೂ ಆಗಿತ್ತು.

ಡಾ. ರಾಧಾಕೃಷ್ಣನ್‌ರವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾಗ ಆ ವಿವಿಯ ವಿದ್ಯಾರ್ಥಿಗಳಲ್ಲದವರೂ ಇವರ ತರಗತಿಗೆ ಹಾಜರಾಗುತ್ತಿದ್ದರಂತೆ!

ಇವರು ತಮ್ಮ ಪ್ರವಚನದಿಂದಾಗಿ ಪುರಾಣ ಪ್ರಸಿದ್ಧ ವ್ಯಕ್ತಿಯಂತೆ ಆಗಿಬಿಟ್ಟಿದ್ದರು.

ಡಾ. ರಾಧಾಕೃಷ್ಣನ್‌ರವರದು ಎತ್ತರವಾದ ನಿಲುವು. ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವಾದ ಬಿಳಿ ಪಂಚೆ ಮತ್ತು ಮೈಸೂರು ರುಮಾಲು ಇವು ಅವರ ಬಾಹ್ಯರೂಪ. ಯಾವುದೋ ಸಮಸ್ಯೆ ಒಳ ಹೋಗುವಂತಿರುವ ಕಣ್ನೋಟ. ತರಗತಿಗಳಲ್ಲಿ ಅವರು ಸಾಮಾನ್ಯ ವಿಷಯಗಳ ಚರ್ಚೆಯ ತಳಹದಿ ಹಾಕಿ ಅದರ ಮೇಲೆ ಸುಂದರವಾದ ತತ್ವ ಪ್ರಸಾದವನ್ನು ನಿರ್ಮಿಸಿ ವಿಚಾರದ ಅಮೃತಧಾರೆ ಹೊಮ್ಮಿಸುವ ಡಾ. ರಾಧಾಕೃಷ್ಣನ್ ಕೇವಲ ಉಪನ್ಯಾಸಕರಲ್ಲ ಐಂದ್ರಜಾಲಿಕರಾಗಿದ್ದರು.

ಸುಮಾರು 1912ರ ಸಮಯದಲ್ಲಿ ಅವರು ಮೈಸೂರಿನಿಂದ ಕಲ್ಕತ್ತಾ ವಿವಿಯ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಹೊರಟು ನಿಂತಿದ್ದರು. ಆಗ ನಡೆದ ಬೀಳ್ಕೊಡುಗೆ ಸಮಾರಂಭ ಯಾವ ಚಕ್ರವರ್ತಿಗೂ ದೊರೆತಿರಲಾರದು. ಅದು ಅವರ ವಿದ್ಯಾರ್ಥಿಗಳ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರು ಭಕ್ತಿ ಹಾಗೂ ಗುರು ಪ್ರೇಮ.

ಮೈಸೂರಿನಿಂದ ಕಲ್ಕತ್ತಾಗೆ ಹೋಗುವ ರೈಲಿನಲ್ಲಿ ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು ವೈಭವವಾಗಿ ಸಿಂಗರಿಸಿದ್ದರು. ಒರಗು ದಿಂಬುಗಳು ಮತ್ತು ಸೀಟಿನ ಮೇಲೆ ಹೂಗಳು. ಇವುಗಳನ್ನು ಯಾರು ಎಲ್ಲಿಂದ ತಂದರೋ ಅಂತೂ ಭಕ್ತರು ದೈವಮಂದಿರವನ್ನು ಶ್ರದ್ಧೆಯಿಂದ ಅಲಂಕರಿಸಿದಂತೆ ಅದನ್ನು ಸಿಂಗರಿಸಿದ್ದರು.

ಮೈಸೂರಿನ ಲಕ್ಷ್ಮೀಪುರದಲ್ಲಿರುವ ಗುರುಗಳ ಮನೆಯಿಂದ ಸ್ಟೇಷನ್‌ಗೆ ಸಿಂಗರಿಸಿದ ಕುದುರೆ ಗಾಡಿಯಲ್ಲಿ ಗುರುಗಳನ್ನು ಕರೆದುಕೊಂಡು ಬಂದರು. ಆದರೆ ಆ ಗಾಡಿಗೆ ಹೆಗಲು ಕೊಟ್ಟು ಎಳೆದದ್ದು ಕುದುರೆಗಳಲ್ಲ...ಸ್ವತಃ ವಿದ್ಯಾರ್ಥಿಗಳು. ಈಗ ಮೈಸೂರಿನ ಮಾನಸ ಗಂಗೋತ್ರಿಗೆ ಹೋಗುವ ಒಂದು ರಸ್ತೆಗೆ ಡಾ. ರಾಧಾಕೃಷ್ಣನ್‌ರ ಹೆಸರನ್ನು ಇಡಲಾಗಿದೆ. ಕಲ್ಕತ್ತಾ ವಿವಿಯಲ್ಲೇ ಉಪ ಕುಲಪತಿಯಾಗಿಯೂ ಸೇವೆ ಸಲ್ಲಿಸಿದರು. ಆಗ ಅವರು ವಿಶ್ವವಿದ್ಯಾನಿಲಯಗಳ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ ನಮ್ಮ ಭಾರತೀಯ ವಿಶ್ವವಿದ್ಯಾನಿಲಯಗಳು ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಿಗೆ ಸರಿಸಾಟಿಯಾಗುವಂತೆ ಕಾರ್ಯ ಸೂಚಿಯನ್ನು ರೂಪಿಸಿದ ಕೀರ್ತಿ ನಿರ್ವಹಿಸಿದರು. ಅವರ ಬರವಣಿಗೆಯ ಮೂಲಕ ಪಾಶ್ಚಾತ್ಯರಿಗೆ ಭಾರತೀಯ ಸಂಸ್ಕೃತಿಯ ಪರಿಚಯವಾಯಿತು. ಅಲ್ಲದೆ ಅವರು ಭಾರತದ ಪ್ರತಿನಿಧಿಯಾಗಿ ಇಂಗ್ಲೆಂಡ್, ಅಮೆರಿಕಾ, ರಷ್ಯಾ ಮುಂತಾದ ದೇಶಗಳಿಗೆ ಹೋಗಿ ಮಾಡಿ ಭಾಷಣಗಳು ಎಲ್ಲರನ್ನೂ ಬೆರಗು ಗೊಳಿಸುವಂತಿದ್ದವು. ಭಾರತದ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿತು.

ಆತ್ಮವಿಶ್ವಾಸದಲ್ಲಿ ರಾಧಾಕೃಷ್ಣನ್ ಅವರನ್ನು ಮಿರಿಸುವವರು ಯಾರೂ ಇರಲಿಲ್ಲ. ಯಾರ ಸಮಕ್ಷಮದರೂ ನಿಲ್ಲುತ್ತಿದ್ದರು. ರಷ್ಯಾದಲ್ಲಿ ಭಾರತದ ಪ್ರತಿನಿಧಿಯಾಗಿದ್ದು ಅಲ್ಲಿಂದ ಹೊರಟಾಗ ಅವರು ಸ್ಟಾಲಿನ್‌ರ ಬೆನ್ನು ತಟ್ಟಿ ಬೀಳ್ಕೊಂಡರಂತೆ. ಸ್ಟಾಲಿನ್ ಒಬ್ಬ ಉಕ್ಕಿನ ಮನುಷ್ಯ. ಅವರು ಭಾವೋದ್ರೇಕದಿಂದ ಕರಗಿ ನನ್ನನ್ನು ಮಾನವರಂತೆ ಕಂಡವರು ನೀವೊಬ್ಬರೇ' ಎಂದರಂತೆ.

ರಾಧಾಕೃಷ್ಣನ್‌ರು ಉಪರಾಷ್ಟ್ರಪತಿ ಆದಾಗ ಮತ್ತು ಅಧ್ಯಕ್ಷರಾಗಿದ್ದಾಗ ತಮ್ಮ ಶಿಷ್ಯರನ್ನೆಲ್ಲಾ ಜ್ಞಾಪಿಸಿ ಕೊಳ್ಳುತ್ತಿದ್ದರು. ಇವರು ರಾಷ್ಟ್ರಾಧ್ಯಕ್ಷರಾಗಿದ್ದಾಗ ಇವರ ಹುಟ್ಟು ಹಬ್ಬವನ್ನು ಆಚರಿಸಬೇಕು ಎಂದಾಗ ಇವರು ನನ್ನ ಹುಟ್ಟುಹಬ್ಬವನ್ನು ಆಚರಿಸುವುದಾದರೆ ಅದನ್ನು 'ಶಿಕ್ಷಕರ ದಿನಾಚರಣೆ"ಯನ್ನಾಗಿ ಆಚರಿಸಿರಿ ಎಂದರಂತೆ. ಇದು ಅವರು ತಮ್ಮ ವೃತ್ತಿಗೆ ತೋರಿಸಿದ ಗೌರವಾಭಿಮಾನ. ಅದಕ್ಕಾಗಿ ಅವರ ಹುಟ್ಟು ದಿನವಾದ ಸೆಪ್ಟೆಂಬರ್ 5ನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸುತ್ತಿದ್ದೇವೆ. ಇದರಿಂದ ತಾವು ಕೈಗೊಂಡ ಶಿಕ್ಷಕ ವೃತ್ತಿಯ ಘನತೆಯನ್ನು ಎತ್ತಿ ಹಿಡಿದಿದ್ದಾರೆ.

ಒಬ್ಬ ಶಿಕ್ಷಕ, ತತ್ವಶಾಸ್ತ್ರಜ್ಞ ನಮ್ಮ ಭವ್ಯ ಭಾರತದ ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ನಮ್ಮೆಲ್ಲರ ಸುದೈವವೇ ಸರಿ. ಆ ಮಹಾನ್ ಶಿಕ್ಷಕನಿಗೆ, ರಾಷ್ಟ್ರಾಧ್ಯಕ್ಷನಿಗೆ ಅವರ ಹುಟ್ಟುಹಬ್ಬವಾದ ಸೆಪ್ಟೆಂಬರ್ ಐದರ ದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸುವುದರ ಮೂಲಕ ನಮನ ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

---

## ನಗೆಹನಿ

ಕನ್ನಡದವಳು : ಒಬ್ಬು ಸಂತೆಗೆ ಬಂದ್ ಸಾಮಾನ್ ಮಾಡ್ತಾ ಇದ್ದದೆ ಅಷ್ಟೊತ್ತಿಗೆ ಇಂಗ್ಲೀಷ್‌ನವಳೊಬ್ಬು ಅಲ್ಲಿಗೆ ಬಂದದೆ. ಬಂದ್ ವಾಟ್ ಈಸ್ ಯುವರ್ ನೇಮ್‌ಂತ ಕೇಳ್ದೆ

ಕನ್ನಡದವಳು ಇವಳಿಗೆ ಸ್ವಲ್ಪ ಕಮ್ಮಿಂತ ಗ್ಯಾನ ಮಾಡಿ ಸುಟ್ಟ ಬೇವರ್ಸಿ ಇಂಗ್ಲೀಷ್‌ಲಿ ಬೈದಿಯಾ ನಂಗೆ ತೇಳ್ದೆ. ಸ್ವಲ್ಪ ಹೊತ್ತು ಕಳ್ದ್ ಮ್ಯಾಲೆ ಇಂಗ್ಲೀಷ್‌ನವಳಿಗೆ ಬಸ್ ಬಂದ್ ಬುಟ್ಟದೆ ಆಗ ಅವ್ಳು ಇವಳ ಹೆಸ್‌ರ್ ಬೇವರ್ಸಿಂತ ಗ್ಯಾನ ಮಾಡಿ ಬಾಯ್ ಬೇವರ್ಸಿಂತ ಹೇಳ್ದೆ.

ಕನ್ನಡದವಳಿಗೆ ಏನ್ ಮಾಡಕೂಂತ ಗೊತ್ತಾಗದೆ ಸೀದಾ ಹೋದೆ

**ಊರೋಳನ ಬೀನ ಸುಬ್ಬಯ್ಯ, ಅವಂದೂರು**

---

ಮೂಕವೇದನೆಯು ಸತ್ಯಕ್ಕಿಂತ ಮೇಲು.




✦ ಕೌಂಡಿನ್ಯ

ಧಾರವಾಹಿ -38

ಸುದ್ದಿ ತಿಳಿಯಿತು ರೇವತಿಗೆ !

ಅವಳು ಭಯ, ಗಾಬರಿ, ಆತುರದಿಂದ ಸಂಪಿಗೆ ಪುರದ ಹುತ್ತದ ಕಡೆ ಹೊರಟಳು. ಆಗಲೇ ಜನಗಳು ಸೇರಿದ್ದರು !

ಜನಗಳ ನಡುವೆ ತೂರಿಕೊಂಡು ಬಂದು ಅವಳು ಮುಂದೆ ನಿಂತು ಕತ್ತನ್ನು ಹೊರಳಿಸಿದಳು.

ಹಾವುಗಳು ಸುತ್ತಿಕೊಂಡಿರೊ ದೇಹ !

ಮುಖ ಸಹ ಮುಚ್ಚಿ ಹೋಗಿದೆ.

ಹಿಂದಿನ ರಾತ್ರಿ ಪ್ರಸನ್ನ ಹೆದರಿಕೊಂಡು ಓಡಿ ಬರುತ್ತಿರುವುದನ್ನು ಕಂಡಿದ್ದಳು ರೇವತಿ !

ಪ್ರಸನ್ನ....ಪ್ರಸನ್ನ ಇರಬಹುದೆ?

ಜನಗಳ ಗುಂಪಿನಲ್ಲಿ ಚಕಚಕನೆ ನೋಡುತ್ತಿರುವಾಗಲೇ ಅವಳಿಗೆ ಮಂಕಾಗಿ ನಿಂತಿದ್ದ ಪ್ರಸನ್ನ ಕಂಡನು !

ಅಬ್ಬ ಎಂದುಕೊಂಡಳು !

ಅಂದರೆ ಇವಳ ಮನಸ್ಸು ಪ್ರಸನ್ನನ ಸಾವನ್ನು ಬಯಸಿರಲಿಲ್ಲ. ಈ ಮನಸ್ಸೇ ಒಂದು ರೀತಿ ವಿಚಿತ್ರ !

ಪೋಲಿಸರು ತನಿಖೆ ನಡೆಸುತ್ತಿದ್ದಾರೆ.

ಜನಗಳ ಗುಂಪಿನಲ್ಲಿ ಶ್ರೀಕಂಠ, ಪೂಜಾರಿ ಇದ್ದರು. ಇವಳನ್ನು ಕಂಡ ಕೂಡಲೇ ಹತ್ತಿರ ಬಂದರು.

ಪ್ರಸನ್ನ ಉತ್ತರಿಸುತ್ತಿದ್ದಾನೆ.

ಅವನಿಗೆ ಕೆಲವು ಕಡೆ ಗಾಯಗಳಾಗಿದೆ !

ರೇವತಿಗೆ ಮತ್ತೊಂದು ಸಂದೇಹ ಬಂದಿತು. ತನ್ನ ಪ್ರಾಣ ತೆಗೆಯಲು ಪ್ರಯತ್ನಿಸುತ್ತಿದ್ದ ಅಣ್ಣ ವೀರಭದ್ರನನ್ನು ಈ ರೀತಿಯ ಸಾವಿಗೆ ಗುರಿ ಮಾಡಿರಬಹುದೆ? ಆದರೆ ವಿವೇಕ ಒಪ್ಪುತ್ತಿಲ್ಲ !

ಪ್ರಸನ್ನನ ಮುಖ ನೋಡಿದರೆ ಈ ಕೆಲಸ ಅವನು ಮಾಡಿರಲಾರ ಎಂದು ಅನಿಸುತ್ತಿದೆ.

ಬೇರೆ ಏನೋ ನಡೆದಿದೆ !

ರೇವತಿ ಆಲೋಚನೆಯನ್ನು ಮರೆತು ಈಗ ಹೆಣವನ್ನು ನೋಡುತ್ತಿದ್ದಾಳೆ.

ಸರ್ಪಗಳ ಚಲನೆ ಗಮನಿಸುತ್ತಿದ್ದಾಳೆ !

ವಾಸನೆ....ವಾಸನೆ ಗ್ರಹಿಸುತ್ತಿದ್ದಾಳೆ.

ಏನೋ ವಿಚಿತ್ರ ರೀತಿಯ ವಾಸನೆ !

ಅದರೊಂದಿಗೆ ಶ್ರೀಗಂಧದ ವಾಸನೆ ಸಹ ಬೆರೆತಿದೆ. ಇದೇ ವಾಸನೆಯನ್ನು ಅವಳು ಲಿಂಗಯ್ಯನ ದೇಹದಲ್ಲೂ ಗ್ರಹಿಸಿದ್ದಳು.

ಹಾವುಗಳು ಸುಸ್ತುಗೊಂಡಂತೆ ದೇಹಕ್ಕೆ ಸುತ್ತಿ ಕೊಂಡು ಮಂದ ಗತಿಯಿಂದ ಹರಿದಾಡುತ್ತಿದೆ.

ಜನಗಳು ಭಯಗೊಂಡಿದ್ದಾರೆ !

ಎಡತೊರೆ ಮನೆತನದವರೆ ಹಾವುಗಳಿಗೆ ಬಲಿಯಾಗುತ್ತಿರುವುದರಿಂದ ನಾನಾ ರೀತಿಯ ಕತೆಗಳು ಹುಟ್ಟಿಕೊಂಡಿವೆ!

ಶ್ರೀಕಂಠ ಮತ್ತು ಪೂಜಾರಿ ರೇವತಿಯ ಹತ್ತಿರ ಬಂದು ಮೆಲು ಧ್ವನಿಯಲ್ಲಿ "ರೇವತಿಯವರೆ ನಿಮ್ಮ ತಲೆಗೆ ಏನೇ ಹೊಸ ವಿಚಾರಗಳು ಹೊಳೆದರೂ ಸಹ ಅದನ್ನು ಪಬ್ಲಿಕ್ ಆಗಿ ಹೇಳಬೇಡಿ".

ರೇವತಿ ತಲೆಯಾಡಿಸಿದಳು.

ವಾಸನೆಯ ತೀವ್ರತೆ ಕಡಿಮೆಯಾಯಿತು. ಸಮಯ ಕಳೆದಂತೆ ಹಾವುಗಳು ದೇಹದಿಂದ ಹೊರ ಹೊಮ್ಮಿದವು.

ವೀರಭದ್ರನ ಹೆಣ !

ಪೋಲಿಸ್ ಅಧಿಕಾರಿ ಹೆಣವನ್ನು ಆಸ್ಪತ್ರೆಗೆ ಕಳಿಸುವ ಮುನ್ನ ರೇವತಿ ಒಂದು ಸಲ ನೋಡಿದಳು.

ಸರ್ಪ ಕಚ್ಚಿರುವ ಕುರುಹು ಇರಲಿಲ್ಲ !

ಮುಖದಲ್ಲಿ ಭಯದ ಛಾಯೆ !

ಪೋಲಿಸ್ ಅಧಿಕಾರಿ ಈಗ ಪ್ರಸನ್ನನ ರಕ್ಷಣೆಗೆಂದು ಬಂಗಲೆಯ ಹತ್ತಿರ ನಾಲ್ಕು ಮಂದಿ ಪೀಸಿಗಳನ್ನು ನೇಮಿಸಿದನು.

ಈಗ ಉಳಿದರೋದು ಪ್ರಸನ್ನ ಮಾತ್ರ !

ಶ್ರೀಕಂಠ ಈಗ ರೇವತಿಯನ್ನು ಬಲವಂತವಾಗಿ ತನ್ನ ಮನೆಗೆ ಕರೆದು ಕೊಂಡು ಹೊರಟನು.

ಮನೆಗೆ ಬಂದು ಈ ಊಟ ಮಾಡಿದ ನಂತರ ಎಲ್ಲರೂ ಚಾಪೆಯ ಮೇಲೆ ಮಲಗಿಕೊಂಡರು.

ರೇವತಿ ಚಿಂತಿಸುತ್ತಿದ್ದಾಳೆ.

ತೆರೆದಿದ್ದ ಕಿಟಕಿಯ ಮೂಲಕ ಪೂಜಾರಿ ದೇವಸ್ಥಾನದ ಕಡೆ ಹೋಗುತ್ತಿರುವುದನ್ನು ಕಂಡಳು.

ಮನೆಯ ಹತ್ತಿರವೇ ದೇವಸ್ಥಾನ ಇತ್ತು !

ಇಲ್ಲಿ ಈ ರೀತಿ ಮಲಗುವುದಕ್ಕಿಂತ ಸ್ವಲ್ಪ ಹೊತ್ತು ಪೂಜಾರಿಯ ಜೊತೆ ಮಾತಾಡಬೇಕು ಎಂದು ಕೊಂಡು ಮನೆಯಿಂದ ಹೊರಗೆ ಬಂದು ದೇವಸ್ಥಾನದತ್ತ ನಡೆದಳು.

ದೇವಸ್ಥಾನದ ಒಳಗೆ ಬಂದಳು.

ಇಲ್ಲ... ಯಾರು ಕಾಣುತ್ತಿಲ್ಲ !

ಪ್ರಾಂಗಣದಲ್ಲಿ ತಿರುಗಾಡಿ, ಗರ್ಭ ಗುಡಿಯ ಹತ್ತಿರ ಬಂದಳು. ಇಲ್ಲ... ಪೂಜಾರಿ ಎಲ್ಲಿಯೂ ಕಾಣುತ್ತಿಲ್ಲ !

ಅರೇ.. ದೇವಸ್ಥಾನಕ್ಕೆ ಬಂದಿದ್ದನ್ನು ನಾನೇ ನೋಡಿದ್ದೇನೆ. ಇಷ್ಟು ಬೇಗ ಅದೆಲ್ಲಿ ಮರೆಯಾದ?

ಗರ್ಭಗುಡಿಯ ಬಾಗಿಲನ್ನು ತುಸು ಓರೆ ಮಾಡಲಾಗಿತ್ತು. ಬಾಗಿ ಚಿಲುಕದ ಸಂಧಿ ನೋಡಿದಳು.

ಇಲ್ಲ.... ಅಲ್ಲಿಯೂ ಇರಲಿಲ್ಲ !

20ನೇ ಪುಟಕ್ಕೆ

ಇಲ್ಲಿಯವರೆಗೆ.........

ವೀರಭದ್ರ ತನ್ನ ಸಹೋದರನನ್ನು ಸಾಯಿಸಲು ಪ್ರಯತ್ನಿಸುವಾಗ ಪ್ರಸನ್ನ ತಪ್ಪಿಸಿಕೊಂಡು ಓಡುತ್ತಾನೆ. ಇಬ್ಬರೂ ರಸ್ತೆಯಲ್ಲಿ ಓಡಿ ಬರುತ್ತಿರುವುದನ್ನು ರೇವತಿ ನೋಡುತ್ತಾಳೆ. ವೀರಭದ್ರನಿಗೆ ಅಡ್ಡಲಾಗಿ ಅಪರಿಚಿತ ವ್ಯಕ್ತಿ ಬರುತ್ತಾನೆ.

ಮುಂದೆ ಓದಿ.........

ಅಲ್ಪ ವಿದ್ಯೆ ಮಹಾಗರ್ವ

# ನಡೆದು ನೋಡಿ ಕೊಡಗಿನ ಬೆಡಗ

ಮಳೆಗಾಲದ ರಭಸ ಕಳೆದು ಹಿತವಾದ ಬಿಸಿಲು ಹರಡಿದಾಗ ಕೊಡಗಿನ ಹಳ್ಳಿಗಾಡಿನಲ್ಲಿ ಅಡ್ಡಾಡಬೇಕು. ಕಣಿವೆಯಲ್ಲಿರುವ ಗದ್ದೆ ಕೃಷಿಯಾಗಿ ಹಸಿರನ್ನು ತೊಟ್ಟು ಕೊಂಡಿದ್ದರೆ. ಗುಡ್ಡ ಮೈದಾನಗಳು ತಮ್ಮ ಮಾಮೂಲಿನ ಪಚ್ಚೆಬಣ್ಣದಲ್ಲಿ ಅದ್ದಿ ಕೊಂಡಿರುತ್ತವೆ. ಮಳೆಯಿಂದ ತೊಯ್ದು ತೊಪ್ಪೆಯಾದ ನಿಸರ್ಗ ಬಿಸಿಲಿಗೆ ರತ್ನಕಾಂತಿಯ ಮಣಿಗಳಂತೆ ಹೊಳೆಯುತ್ತದೆ. ಸ್ಫಟಿಕದಂತೆ ತಿಳಿಯಾದ ಕಿರುತೊರೆಗಳ ದಾಟಿ ದಾರಿ ಸವೆಸಿದರೆ ಅನಿರ್ವಚನೀಯ ಆನಂದದ ಅನುಭವ. ಆಗಾಗ್ಗೆ ಮೋಡ ಸೂರ್ಯನನ್ನು ಕವಿದು ಹಸಿರು ಹಾಸಿದ ರಂಗಮಂಚದಲ್ಲಿ ಸ್ಪಾಟ್‌ಲೈಟಿನ ಭ್ರಮೆ ಹುಟ್ಟಿಸುತ್ತದೆ. ಇಂತಹ ದೃಶ್ಯ ಮಲೆನಾಡಿನ ಯಾವುದೇ ಜಾಗದಲ್ಲೂ ಕಾಣಬಹುದು ಎನ್ನಿಸಿದರೂ ನಿಸರ್ಗದ ಈ ಲಾಸ್ಯವನ್ನು ನೋಡಲು ಕೊಡಗು ಜಿಲ್ಲೆಗೇ ಕಾಲಿಡಬೇಕು.

ಕೊಡಗಿನಲ್ಲಿ ಪರಿಸರವನ್ನು ಕಲುಷಿತಗೊಳಿಸುವ ಕಾರ್ಖಾನೆಗಳ ಸುಳಿವಿಲ್ಲ. ಇಲ್ಲಿನ ಪ್ರಕೃತಿ ಸೌಂದರ್ಯ, ಆನೆ ಹುಲಿ ಮುಂತಾದ ವನ್ಯ ಮೃಗಗಳಿಂದ ಕೂಡಿದ ಅಭಯಾರಣ್ಯಗಳ ರಮಣೀಯತೆ, ಅಲ್ಲಲ್ಲಿ ಸಿಗುವ ಅಬ್ಬಿ ಜಲಪಾತಗಳು, ದುರ್ಗಮ ಬೆಟ್ಟವನ್ನು ಏರಲು ಚಾರಣಪ್ರಿಯರಿಗೆ ದೊರೆಯುವ ಹೇರಳ ಜಾಗಗಳು, ಹಸಿರ ಬೇಲಿಗಳನ್ನು ಹೊಂದಿದ ಕಾಫಿ, ಏಲಕ್ಕಿ ತೋಟಗಳು ಹೀಗೆ ಎಲ್ಲವನ್ನು ಪಟ್ಟಿ ಮಾಡುತ್ತಾ ಹೋದರೆ ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ಕೇಂದ್ರವಾಗಿ ಮಾಡಲು ಸಕಲ ಅವಕಾಶಗಳಿವೆ ಎಂದು ಯಾರೂ ಹೇಳಬಹುದಾಗಿದೆ.

ಜಿಲ್ಲೆಯಲ್ಲಿ 'ತಲಕಾವೇರಿ, ಭಾಗಮಂಡಲ, ಅಬ್ಬಿ ಜಲಪಾತ ಮುಂತಾದ ಬೆರಳೆಣಿಕೆಯ ಸ್ಥಳಗಳನ್ನು ಮಾತ್ರವೇ ಇದುವರೆಗೆ ಗುರ್ತಿಸಲಾಗಿದೆ. ಇವನ್ನು ಸಹ ಸರಿಯಾಗಿ ಅಭಿವೃದ್ಧಿ ಪಡಿಸಿದಂತೆ ತೋರುವುದಿಲ್ಲ. ಅಧಿಕಾರಕ್ಕೆ ಬರುವ ಪ್ರತಿಯೊಬ್ಬರೂ ಜಿಲ್ಲೆಯನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಕುರಿತು ಹೇಳುತ್ತಾ ಬಂದಿದ್ದರೂ ಈ ದಿಸೆಯಲ್ಲಿ ಹೆಚ್ಚಿನ ಕೆಲಸ ನಡೆದ ಬಗ್ಗೆ ನಿದರ್ಶನಗಳಿಲ್ಲ, ಆಶ್ವಾಸನೆ ಹಾಗೂ ಭರವಸೆ ಮಾತ್ರ ಧಾರಾಳವಾಗಿ ದೊರೆತಿವೆ. ನೈಸರ್ಗಿಕ ಪರಿಸರಕ್ಕೆ ಎಳ್ಳಷ್ಟೂ ಧಕ್ಕೆ ಮಾಡದೆ ಸಾಮಾನ್ಯರಿಗೂ ಅನುಕೂಲವಾಗುವಂತೆ ಪ್ರವಾಸೋದ್ಯಮ ಕೈಗೊಳ್ಳುವುದು ಬಹುಮುಖ್ಯ ಸಂಗತಿಯಾಗಿದೆ.

ಇಲ್ಲಿನ ಜನಜನಿತವಾದ ಪ್ರವಾಸಿ ಕೇಂದ್ರಗಳೇ ಹೀಗೆ ಅನಾಚರಗೊಂಡಿದ್ದರೆ, ಇನ್ನುಳಿದ ಅಸಂಖ್ಯಾತ ಪ್ರೇಕ್ಷಣೀಯ ಸ್ಥಳಗಳ ಕುರಿತು ಹೇಳುವುದೇ ಅನಾವಶ್ಯಕ. ಕೊಡಗಿನಲ್ಲಿ ಇಷ್ಟೊಂದು ಸಂಖ್ಯೆಯ ಪ್ರವಾಸಿ ತಾಣಗಳಿವೆ ಎಂಬುದು ಬಹಳ ಜನರಿಗೆ ತಿಳಿದಂತಿಲ್ಲ. ಸೋಮವಾರಪೇಟೆ ತಾಲ್ಲೂಕಿನ ನಿಸರ್ಗ ರಮಣೀಯ ಸ್ಥಳಗಳನ್ನೇ ಉದಾಹರಣೆಯಾಗಿ ನೋಡಿದರೆ ಸಾಕು ಜಿಲ್ಲೆಯ ಚೆಲುವಿನ ಚಿತ್ರ ದೊರೆಯುತ್ತದೆ.

ಸೋಮವಾರಪೇಟೆ ತಾಲ್ಲೂಕು ಕೇಂದ್ರದಿಂದ ಶಾಂತಳ್ಳಿ ಮೂಲಕ ಪುಷ್ಪಗಿರಿಯವರೆಗೆ ಕ್ರಮಿಸಿದರೆ ಸುತ್ತಲಿನ ಗುಡ್ಡ ಬೆಟ್ಟಗಳ ಸೌಂದ್ಯರ್ಯದ ದರ್ಶನವಾಗುತ್ತದೆ. ಪುಷ್ಪಗಿರಿಗೆ ಹೋಗುವಾಗ ಸಿಗುವ ಹಂಚನಹಳ್ಳಿ ಗ್ರಾಮದಿಂದ ಎರಡು ಕಿ.ಮೀ. ಕಾಲ್ನಡಿಗೆಯಲ್ಲಿ ಸಾಗಿದರೆ ಮಲ್ಲಳ್ಳಿ ಜಲಪಾತ ಕಾಣುತ್ತಿದೆ. ಈ ದಾರಿಯಲ್ಲಿ ನಡೆದು ಹೋಗುವುದೇ ಒಂದು ವಿಶಿಷ್ಟ ಅನುಭವ. ಆಯಾಸವಾದರೆ ಅಲ್ಲಲ್ಲಿ ಹರಿವ ಝರಿಗಳಿವೆ. ಹಕ್ಕಿಗಳ ಇಂಚರ ಹೊಸ ಲೋಕವನ್ನು ತೆರೆಯುವುದು. ಇಲ್ಲಿ ನಿಸರ್ಗದ ಚೆಲುವನ್ನೆಲ್ಲಾ ಒಂದೆಡೆ ರಾಶಿ ಹಾಕಿದಂತೆ ಭಾಸವಾಗುವುದು. ಕಾಡಿನಲ್ಲಿ ಸಾಗಿದಂತೆ ಧುತ್ತೆಂದು ಎದುರಿಗೆ ಕಣಿವೆಯೊಂದು ಕಾಣಿಸಿಕೊಂಡು ಗಾಬರಿಯಾಗಿ ಕೆಳಗಡೆ ನೋಡಿದರೆ ಕಾಣುವುದೇ ಹಾಲಿನಂತೆ ಚಿಮ್ಮುವ ಮಲ್ಲಳ್ಳಿ ಜಲಪಾತ. ಎತ್ತರವಾದ ಹಸಿರಿನ ಗುಡ್ಡಗಳ ಸರಮಾಲೆ, ದೂರದಲ್ಲಿ ಕಾಣುವ ಪುಷ್ಪಗಿರಿ, ಕಣ್ಣು ಹಾಯಿಸಿದಷ್ಟು ದೂರವೂ ಪ್ರಕೃತಿಯ ಸುಂದರ ದೃಶ್ಯಾವಳಿಗಳು ಈ ಸ್ಥಳಕ್ಕೊಂದು ಮೆರುಗೂ ನೀಡಿವೆ.

ಮಲ್ಲಳ್ಳಿ ಜಲಪಾತದಿಂದ 10 ಕಿ.ಮೀ. ಮುಂದೆ ಸಾಗಿದರೆ ಸಿಗುವುದೇ ಪುಷ್ಪಗಿರಿಯ ತಪ್ಪಲು. ಪುನಃ ಇಲ್ಲಿಂದ 7-8 ಕಿ.ಮೀ. ಕಡಿದಾದ ಬೆಟ್ಟವೇರಿದರೆ ಪುಷ್ಪಗಿರಿಯ ತುದಿಭಾಗವನ್ನು ತಲುಪಬಹುದು.

ಸೋಮವಾರ ಪೇಟೆಯ ಆಸುಪಾಸಿನಲ್ಲಿ ಇರುವ ಕಲ್ಕಂದೂರು ಹಾಗೂ ಚೌಡ್ಲು ಬೆಟ್ಟ, ಹೊನ್ನಮ್ಮನ ಕೆರೆ, ಮಳೆ ಮಲ್ಲೇಶ್ವರ ಬೆಟ್ಟ, ಬಾಚಳ್ಳಿ ಜಲಪಾತ, ಕೋಟೆಬೆಟ್ಟ ಮುಂತಾದ ಅನೇಕ ನೈಸರ್ಗಿಕ ಚೆಲುವಿನ ತಾಣಗಳಿವೆ. ಇವೆಲ್ಲದರ ಮಧ್ಯೆ ಹಿಂದೊಮ್ಮೆ ಪ್ರಸಿದ್ಧಿ ಪಡೆದ ಕಿತ್ತಳೆ, ಏಲಕ್ಕಿ, ಜೇನುಕೃಷಿ ವಿವಿಧ ರೋಗಗಳಿಗೆ ಬಲಿಯಾಗಿ ಈಗ ವಿನಾಶದ ಅಂಚಿನಲ್ಲಿವೆ. ಕಾಫಿಯ ದರ ಕುಸಿದು ಬೆಳೆಗಾರರು ಹತಾಶರಾಗಿದ್ದಾರೆ. ಸ್ವಾಭಾವಿಕ ಅರಣ್ಯಗಳು ಕಾಫಿ, ಏಲಕ್ಕಿ ತೋಟಗಳಾಗಿ, ಅಣೆಕಟ್ಟಿನ ನೀರಿನಡಿ ಮುಳುಗಿ ಆನೆ ಮುಂತಾದ ವನ್ಯ ಜೀವಿಗಳು ಪರದೇಶಿಗಳಾಗಿವೆ.

ಅಧಿಕವಾಗಿ ಬರುತ್ತಿರುವ ವಲಸಿಗರಿಂದಾಗಿ ಅಸಮಾಧಾನದ ಹೊಗೆ ಮುಸುಕುತ್ತಿರುವುದು ಇಂದಿನ ಸತ್ಯವಾಗಿದೆ.

ಆದರೂ ಹಲವಾರು ಬುಡಕಟ್ಟು ಜನಾಂಗಗಳಿಂದ ಕೂಡಿದ ವಿಶಿಷ್ಟ ಸಾಂಸ್ಕೃತಿಕ ಹಾಗೂ ಜಾನಪದ ಆಚರಣೆಗಳನ್ನು ಹೊಂದಿದ ಇಲ್ಲಿ ಹೆಚ್ಚಿನವರು ಅಕ್ಷರಸ್ಥರು..ಶೌರ್ಯ ಮತ್ತು ಸಾಹಸ ರಕ್ತದಲ್ಲಿ ಮೈಗೂಡಿಸಿಕೊಂಡು ಇಲ್ಲಿನವರು ಸೈನ್ಯದ ಸೇವೆಯಲ್ಲಿ ಸದಾ ಮುಂಚೂಣಿಯಲ್ಲಿದ್ದಾರೆ.

ಇವೆಲ್ಲಕ್ಕೂ ಮಿಗಿಲಾಗಿ ನಿಸರ್ಗದ ಮನತಣಿಸುವ ಜಾಗಗಳು ಇಂದಿಗೂ ಕಡಿಮೆ ಆಗದಿರುವುದು ಜಿಲ್ಲೆಯ ವೈಶಿಷ್ಟ್ಯವಾಗಿದೆ. ಕೊಡಗನ್ನು ನಡೆದು ನೋಡಿದರೆ ಪ್ರಕೃತಿ ದೇವಿಯ ಸಿರಿತನವನ್ನು ಇಂದಿಗೂ ಆಸ್ವಾದಿಸಬಹುದಾಗಿದೆ.

— ಶಿವಾನಂದ ಹೆಚ್.ಎಂ. ಸೋಮವಾರ ಪೇಟೆ

# ಅರೆಭಾಷೆಯ ಒಂದು ಸಾಮಾನ್ಯ ಮಾತುಕತೆ

(ಗೂಡೆನ ಮನೆಗೆ ನೆಂಟ್ರಾಗಿ ಹೋದು)

**ಸೀತಮ್ಮತ್ತೆ :** ಗಂಗೂ, ನಾಳೆ ನೀನ್ ಮರ್ಲ್ಗೋಡು ಬಸ್ಸಿಗೆ ಬಾಕೆ ರೆಡಿ ಇರ್. ವಿಸಯ ಮತ್ತೆ ಹೇಳ್ನೆ ಮಕ್ಕಳಿಗೆ ಹೆಂಗೂ ರಜವುಟ್ಟು.

**ಗಂಗು :** ಏನ್ ವಿಸೇಸ ಅತ್ತೆ? ಈ ಮಳೆಲಿ ಹೊರ್ಪದ್ ನೋಡ್ರೆ ಏನೋ ಇರೊಕು. ಹೇಳ್ದಂಗೆ ರಮೇಶ ಬಂದುಟ್ಟಾ?

**ಸೀತಮ್ಮತ್ತೆ :** ಅಂವ ಬಂದ್ ನಾಕ್ ದಿನ ಆತ್ ನೋಡು. ಹದ್ನೈದ್ ದಿನ ರಜಗಡ. ಅಂದ್ ನೋಡ್ಡ ಗೂಡೆನ ಮಾತ್ ಕಂಡಿತ ಮಾಡಕುತ ಈ ಸಲ ಬಂದದ್. ಈ ಮಿಲ್ಟ್ರಿಯವ್ರ ಕತೆನೆ ಹಿಂಗೆ. ರಜಲಿ ಬಾಕನ ಬಾಕನ ಹೆಣ್ಣ್ ಹುಡ್ಕುದು, ಸೆರಿ ಆತ್‌ಲೆತ ಹೇಳ್ಕಂಡ್ ವಾಪಾಸ್ ರಜ ಮುಗ್ಗಿ ಹೋದು. ಹ್ಯಾದ ಮ್ಯಾಲೆ ಅಲ್ಲಿಂದ ಕಾಗದ ಬರ್‍ದುದು ಗೂಡೆನ ನೋಡಿಡಿ, ಬರುವ ರಜಲಿ ಬಾಕನ ಮದುವೆ ಮಾಡ್ಕಂಡ್ ಹೋನೆತ, ನಂಗೆ ಕಾಗದ ಬರಿಯೊದು. ಹಿಂಗೆ ಮೂರ್‍ನಾಕ್ ಕಡೆ ನೋಡಿ ಎಲ್ಲೂ ಸೆರಿ ಆತ್‌ಲೆ.

**ಗಂಗು :** ಅಲ್ಲತ್ತೆ, ಈ ಗೂಡೆನ ಕಡೆವು ಹಳೆ ನೆಂಟ್ರಲ್ಲಾ? ಎಲ್ಲವುಕು ಬೇಕಾದವು, ಗೂಡೆನು ಓದಿಟ್ಟು, ನಾಡ್ ಕೆಲ್ಸ ಗೊತ್ತುಟ್ಟು. ಐ.ಟಿ.ಐ. ಲಿ ಕಟ್ಟಿಂಗ್ ಕ್ಲಾಸ್‌ಗೆ ಹೋಗಿ ಲಾಯ್ಕ ಬಟ್ಟೆ ಹೊಲೆಕೆ ಕಲ್ತುಟ್ಟು. ಸರ್ಕಾರ ಕೆಲ್ಸ ಇಲ್ಲರೂ ಪರವಾಗಿಲ್ಲೆ. ರಮೇಶ ಮಿಲ್ಟ್ರಿಗೆ ಕರ್ಕಂಡ್ ಹೋಕೆ ಆಗದರೂ ಮನೆ ತ್ವಾಟ ನೋಡಿಕಂಡ್ ಮನೆ ಕೆಲ್ಸನೂ ಮಾಡಿಕಂಡ್ ಸುದಾರ್‍ಸಿಕಂಡ್ ಹೋದುತ ಕಂಡಟೆ ಗೂಡೆ!

**ಸೀತಮ್ಮತ್ತೆ :** ನಾಳೆ ಬೆಳಿಗ್ಗೆ ಹೊರ್ಡಿಕೆ ಮುಂದೆ ನಿಂಗೆ ಫೋನ್ ಮಾಡ್ನೆ. ಹೆಂಗೂ ದಾರಿ ಕರೆ ಮನೆ ಅಲ್ಲಾ? ಬಸ್ಸ್‌ಗ ಬೇಕಸ್ಟ್ ಒಳೊ. ಬೆಳಿಗ್ಗೆ ಹೋದರೆ ನಾಕ್ ಗಂಟೆಗೆ ಬರೊನ ಹೆಂಗೂ ನಿನ್ನ ಮಕ್ಕ ಮನೆಲಿ ಓದಿಕಂಡ್ ಇರ್‍ಲಿ. ನೀನ್ ಬಂದರೆ ನಂಗೆ ಸಹಾಯ ಆದೆ. ಗೂಡೆನ ಅಮ್ಮನೊಟ್ಟಿಗೆ ಮದುವೆ ವಿಸಯ ಮಾತಾಡಿ ಬರೊನ. ಅದ್ಕೆ ನೀನಿದ್ದರೆ ನಂಗೆ ವಳ್ಳೆದಾದೆ. ಮಕ್ಕಳಿಗೆ ಅಡ್ಗೆ ಮಾಡಿಬುಡು. ಮಕ್ಕಳಿಗೆ ಗ್ಯಾಸ್ ಆನ್ ಆಫ್ ಮಾಡಿಕೆ ಸೆರಿ ಗೊತ್ತುಟುಲಾ?

(ಸೀತತ್ತೆ ಗಂಗು, ಗೂಡೆನ ಮನೆಗೆ ಹೋದೊ. ಗೂಡೆನ ಅವ್ವ ಒಳಗೆಂದ 2 ಚೊಂಬು ನೀರ್ ತಂದದೆ.)

**ಗೂಡೆನ ಅವ್ವ :** ಬಂದರಿ ಅತ್ತಿಗೆ?

**ಸೀತಮ್ಮತ್ತೆ :** ಬಂದಂಗೆ ಆತ್ ಅತ್ತಿಗೆ.

**ಗೂ .ಅ. :** ಮನೆಲೆಲ್ಲಾ ಉಸಾರೊಳಾನ ಅತ್ತಿಗೆ?

**ಸೀತಮ್ಮತ್ತೆ :** ಉಸಾರೊಳೊ ಅತ್ತಿಗೆ. (ಕೈ ಕಾಲ್ ತೊಳ್ದ್ ಕಾಲು ಹಿಡ್ದ್ ನಮಸ್ಕಾರ ಮಾಡಿಕೊಂಡೊ.)

**ಗೂ .ಅ. :** ಈ ನೆಂಟ್ರ ಅಕ್ಕನ ಗೊತ್ತಾತ್‌ಲೆ ಅತ್ತಿಗೆ?

**ಸೀತಮ್ಮತ್ತೆ :** ಇವ್ವು ನನ್ನ ಅಣ್ಣನ ಮಗುಳು. ಮಕ್ಕಳ್ನ ಮನೆಲಿ ಬುಟ್ಟು ಬಂದುಟ್ಟು. ಬ್ಯಾಗ ಬಂದ್ ಹೋಕ್ ತೇಳಿ ನಾನ್ ಇವ್ವುನ ಕರ್ಕಂಡ್ ಬಂದೆ. ಹಳೆ ನೆಂಟ್ರ ಮನೆ, ನೋಡ್ದಂಗು ಆತ್. ಮನೆಲಿ ಯಾರ್‍ನ ಕಾಂಬೊದುಲೆ ಅತ್ತಿಗೆ? ಗೂಡೆಗ ಎಲ್ಲಿ ಹೋಗೊಳೊ?

**ಗೂ .ಅ. :** ರಾಧಾ ರೂಮ್‌ಲಿ ಹೊಲ್ಕಂಡ್ ಕುದ್ದುಟ್ಟು. ಕರ್‍ದನೆ ನೀವು ಕೂರಿ.

(ಗೂಡೆನ ಅಮ್ಮ ಒಳಗಡೆ ಹೋಗಿ ಮಗಳ್ನ ಕರ್ದ್ ಕಿವಿಲಿ ಪಿಸಿ ಪಿಸಿ ಹೇಳ್ದೆ.)

ರಾಧಾ ನೆಂಟ್ರ ಬಂದೊಳೊ ನೋಡು. ನಮಸ್ತೆ ಹಲೋ ಹೇಳ್ ಬಡ. ಬಂದರಿ ಅತ್ತೆತ್ತೇಳಿ ಮೂರ್‍ಮೂರು ಸಲ ಲಾಯ್ಕ ಬಗ್ಗಿ ಕಾಲ್ ಹಿಡಿಯೊಕು. ಮತ್ತೆ ಹರಿವಾಣಲಿ ಎಲೆ ಅಡಿಕೆ ತಕಂಡ್ ಹೋಗು. ಕಾಫಿ ತಿಂಡಿ ಮತ್ತೆ ಕೊಟ್ಟರೆ ಸಾಕ್. ಇದ್ ನಮ್ಮ ಹಳೆ ಪದ್ದಿಸ್ಸಗ

**ರಾಧ :** ಆತವ್ವ

(ಅವ್ವ ಹೇಳ್ದಂಗೆ ಮಾಡ್ದೆ ರಾಧಾ)

**ಗಂಗು :** ಏನ್ ರಾಧಾ? ಬಾರಿ ಲಾಯ್ಕ ಹೊಲಿಗೆ ಕೆಲ್ಸ ಮಾಡಿಯ ತ ಅಮ್ಮ ಹೇಳ್ದೊ. ಬ್ಯಾರೆ ಕೆಲ್ಸ ಕಲ್ತೊಳಾ? ಬರೀ ನಾಡ್ ಕೆಲ್ಸ ಮಾತ್ರ ಅಲ್ಲ ರಮೇಶ ಮದುವೆ ಆಗಿ ನಿನ್ನ ಕರ್ಕಂಡ್ ಮಿಲ್ಟ್ರಿಗೆ ಹೋದೆ! ಅದ್ಕೇ ಪದ ಹೇಳ್ದು, ಮಕ್ಕಳಿಗೆ ಟ್ಯೂಷನ್ ಕೊಡಿಕೆ ಸ ಗೊತ್ತಿದ್ದರೆ ವಳ್ಳೆದ್.

**ಅವ್ವ :** ಅಲ್ಲ ಸೀತತ್ತಿಗೆ ಲಗ್ನ ಕಟ್ಟುದು ಯಾಗ ಇದ್ದುತ ಹೇಳ್ರಿ?

**ಸೀತಮ್ಮತ್ತೆ :** ಕೈಲ್ ಮೂರ್ತ ಕಳ್ದಂಗೆ ವಳ್ಳೆದಿನ ನೋಡಿ ಲಗ್ನ ಕಟ್ಟ್‌ಕನ ವೀಳ್ಯ ಶಾಸ್ತ್ರನು ಮಾಡೊನ. ಹಂಗೆ ಕಾವೇರಿ ಸಂಕ್ರಮಣ ಕಳ್ದ್ ಹುತ್ತರಿ ಬಾಕೆ ಮುಂದೆ ಇಲ್ಲರೆ ಹುತ್ತರಿ ಕಳ್ದ್ 15 ದಿನಕ್ಕೆ ಲಗ್ನ ಇಡೊನೊ. ಆಗ ಕೆಲ್ಸನೂ ಕಮ್ಮಿ ಇದ್ದದೆ. ಜನ ಬರೊವುಕು ಹೋಗವುಕು ಕಷ್ಟ ಆದುಲೆ. ಮತ್ತೆ ಬೆಳೆ ಹಣ್ಣಾದೆ. ಅಷ್ಟೊತ್ತಿಗೆ ಕಾಫಿ ಕೆಲ್ಸನು ಸುರಾದೆ. ಮತ್ತೆ ಏಪ್ರಿಲ್‌ವರೆಗೆ ಸಮಯ ಇಲ್ಲೆ. ಸಮಾಜಕೆ ಬುಕ್ ಮಾಡ್ ಬಡಾ?

**ಅವ್ವ :** ಸಮಾಜ ಯಾಕೆ ಅತ್ತಿಗೆ? ಇಷ್ಟ್ ದೊಡ್ಡ ಮನೆವುಟ್ಟು. ಹೊಸಮನೆ ಕಟ್ಟಿ ಸುರುಗೆ ಮದುವೆ ಮಾಡ್ದು. ನಾನ್ ಗ್ಯಾನ ಮಾಡ್ದೊಳೆ. ಮನೆಲೆ ಮಾಡ್ರೆ ಕರ್ಚಿನು ಕಮ್ಮಿ ಆದೆ. ಪದ್ಧತಿ ಶಾಸ್ತ್ರಗಳ್ನ ಸ ಲಾಯ್ಕಾಗಿ ಮಾಡಕ್. ವಯಸ್ಸಾದ ಅವ್ವ ಅಜ್ಜನು ಕೂಸುನ (ಪಿಳ್ಳೆನ) ಮದುವೆ ಕಣ್ತುಂಬ ನೋಡುವೆ. ಆ ಸಮಾಜಕೆ ಹೋದು, ರಾತ್ರೆಲ್ಲ ವಯಸ್ ಆದವುಕೆ ಇರಿಕಾದ್ಯ? ನಾವು ಜ್ಯಾಸ್ತಿ ತೇಳ್ರೆ ಐನೂರು ಕಾಗದ ಸನ ಮಾಡ್ದುಲೆ. ಕಾಗದ ಕೊಟ್ಟ್ ಹೋದೆ ನೋಡಿ. ಬಂದವ್ರನ್ನ ಸುದಾರ್‍ಸುದು ಬ್ಯಾಡಾ ಹೇಳಿ? ಊಟ ಸೆರಿ ಆತ್‌ಲೆ ಸ್ವಾದರದವರ್‍ನ ಮಾತಾಡ್ಸಿತ್‌ಲೆ ತ ದೂರಿ ಕಂಡ್ ಹ್ವಾದರ ನಾವು ಇಸ್ಟ್ ಕರ್ಚ್ ಮಾಡ್ರು ಏನ್ ಪ್ರಯೋಜನಾತ್ ಹೇಳಿ?

**ಸೀತಮ್ಮತ್ತೆ :** ಹೌದತ್ತಿಗೆ. ನೀವು ಹೇಳ್ದೂ ಸರಿ. ನಂಗೂ ಓಡಾಡವು ಯಾರಿಲ್ಲೆ. ಈಗ ನಮ್ಮ ಕಾಲದಂಗೆ ಕೈಗೆ ಕಾಲಿಗೆ ಬಂದ್ ಯಾರ್ ಸಾಯ ಮಾಡುವೆ ಹೇಳಿ? ಯಾವುದಕ್ಕೂ ರಮೇಶನ ಕೇಳ್ನೆ. ಅಂವ ತಾನೆ ಕರ್ಚ್ ಮಾಡೊಂವ ಮನೆಲಿ ಅಲ್ಲರೆ ಸಮಾಜಲಿ ಮಾಡೊನ.

**ಗೂ .ಅ. :** ಅಲ್ಲತ್ತಿಗೆ ಕರ್ಚ್ ತೇಳ್‌ಕನ ಎಲ್ಲಾ ಗೂಡೆನ ಕಡೆ ಹೊರ್‍ಸಿ ಬುಡ್ ಬಡಿಯಪ್ಪ?

12ನೇ ಪುಟಕ್ಕೆ

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಲೇಖಕ : ಶಂಕರನ ಬಸಪ್ಪ

ಧಾರಾವಾಹಿ -19

ಹಿಂದೆ ನಡದದ್.......

ಮಿ. ರಾಜು ಇಂದ್‌ನ ದಿನ ಏನ್ ಕೆಲ್ಸ ಮಾಡುದುತಾ ಚಿಂತೆ ಮಾಡಿಕಂಬಕಾಕನ ಅಂವಂಗೆ ರೆಗ್ಯುಲೇಟೆಡ್ ಮಾರ್ಕೆಟ್‌ಲಿ ಕೆಲ್ಸ ಸಿಕ್ಕುವ ಐಡಿಯ ಬಾತ್. ಹಂಗೇ ಅಲ್ಲಿಗೆ ಹೋಗಿ ಆಕನ ನಮ್ಮ ಊರುನವೇ ಆದ ಮೇದಪ್ಪಜ್ಜನ ಪರಿಚಯ ಆತ್. ಅವರ ಸೀಗೆಕಾಯಿ ಲೋಡ್‌ನ ಮಿ. ರಾಜು ತನಿಗೆ ಪರಿಚಯ ಇರುವ ಫ್ಯಾಕ್ಟರಿಗೆ ಮಾರ್‍ಸಿಕೊಟ್ಟ್ ಮೇದಪ್ಪಜ್ಜಂಗೆ ಒಳ್ಳೆ ಲಾಭಗಳಿಸಿಕೊಟ್ಟಿತ್. ಹಂಗೇ ಒಳ್ಳೇ ಕಮಿಷನ್‌ನೂ ಹೊಡ್ಕಂಡತ್......

ಮುಂದಕೆ...........

Mr. Raju ರಾತ್ರಿ ಎಲ್ಲಾ ಒಳ್ಳೆ ನಿದ್ರೆ ಹೊಡ್ದ್ ಒಳ್ಳೆ ಫ್ರಸ್ ಆಗಿ ಎದ್. ಮೈ ಕೈ ಎಲ್ಲಾ ಹಗುರ ಆಗಿ ಮನಸ್ಸು ಕೂಡಾ ಒಳ್ಳೆ ಹುಮ್ಮಸ್ಸಂದ ಕೂಡಿತ್. ಸ್ನಾನ, ಅದ್ ಇದ್ ಕೆಲ್ಸ ಎಲ್ಲಾ ಆದ ಮೇಲೆ ಬಿಸಿ ಬಿಸಿ ಒಂದ್ ಗ್ಲಾಸ್ ಟೀ ಕುಡ್ದ್ ಸಿಗರೇಟ್ ಹಚ್ಚಿಕಂಡ್ ಗ್ಯಾನ ಮಾಡಿ ಕಂಡ್ ಕುದ್ದತ್. ಇಂದ್‌ನ ದಿನ ಏನ್ ವೇಷ ಹಾಕಿಕೆ ಆ ನನ್ನ ಗುರು ಕಾರಣವ ಆದೇಶ ಕೊಟ್ಟದೇ ತ್ತೇಳಿಕಂಡ್ ಸ್ವಲ್ಪ ಹೊತ್ ಹಂಗೇ ಕುದ್ದತ್. ಆ ಚಾಯವಾಲ ಹೈದಂಗೆ ಅಂದ್‌ನ Local News ಪೇಪರ್ ಒಂದರ ತಂದ್ ಕೊಡಿಕೆ ಹೇಳಿ ಒಳ್ಳೆ ಲಾಯಕಲಿ ಇಸ್ತ್ರಿ ಮಾಡಿ ಖಾಕಿ ಪ್ಯಾಂಟ್ ಬಿಳಿ ಶರಟ್‌ನ ಹಾಕಂಡತ್. ಕೆಂಪು ಟೈ ಕಟ್ಟಿಕಂಡ್ ಬ್ರೌನ್ ಶೂವ್‌ಗೆ ಪಾಲಿಶ್ ಹೊಡ್ದ್ ಹಾಕಂಡತ್. ಇಂದ್ ಯಾವ ಕೆಲ್ಸ ಇಲ್ಲದಿದ್ರೂನುಕೂಡಾ ಸುಮ್ಮನೆ ಸ್ಟೈಲ್ ಆಗಿ ಇಲ್ಲಿ ಸಿಟಿ ರೌಂಡ್ ಹೊಡ್ಕಂಡ್ ಇದ್ದರೆ ಆದು ಇಷ್ಟು ದೊಡ್ಡ ಹೈಲೆವಲ್ ಆಫಿಶರ್ ತರದಂವನ ಯಾರೂ ತಪ್ಪಿಸಿಕಂಡ್ ಓಡಿಹೋದ Mr. Rajuತ್ತೇಳಿ ಕಂಡ್ ಹಿಡಿಯಕ್ಕಿಲ್ಲೆತ್ತೇಳಿ ಇಂದ್ ಈ ಅವತಾರದ ವೇಷನ Mr. Raju ಹಾಕಂಡತ್, ಅಷ್ಟೊತ್ತಿಗೆ ಆಂದೋಲನ ಪೇಪರ್ ಬಾತ್. ಅದರ ಮುಕ ಪುಟದ ಮುಖ್ಯ ಸಮಾಚಾರ ಎಂತ ತ್ತೇಳಿರೆ (R.B.I) ರಿಸರ್ವ್ ಬ್ಯಾಂಕ್‌ನಲ್ಲಿ 1 ಲಕ್ಷ ರೂಪಾಯಿ 100ರ ಕಂತೆ ನಾಪತ್ತೆ. ಸ್ಕ್ರೇಪ್ ಪೇಪರ್ಸ್ ಕಚ್ಚಡದ ಜೊತೆ ಸೇರಿಹೋಗಿ ಅದನ್ನ ಹೊರಗಡೆಗೆ ಸಾಗಿಸಲಾಗಿದೆಂಬ ಶಂಕೆ ತ್ತೇಳಿ ಇತ್ತ್. ಅಂದ್ರೆ ಈ ಬ್ಯಾಂಕ್‌ಲಿ ನೋಟ್‌ಗಳ ಪ್ರಿಂಟ್‌ಮಾಡಿ ಬೇಕಾದಂಗೆ ಬೇಕಾದ ಕಡೆ ಬಿಸಾಡಿಕ್ಕೊ ಛಾನ್ಸ್ ಉಟ್‌ತಾತಲ್ಲಾ? ಹಂಗಾದ್ರೆ ಅಲ್ಲಿ ಹೊರಗಡೆ ಎಲ್ಲಾದ್ರೂ ಬಿಸಾಕಿದ ವೇಸ್ಟ್ ಪೇಪರ್ಸ್‌ಗಳ ಗುಡ್ಡೆನ ಹುಡುಕಿರೆ ಸ್ವಲ್ಪ ಹಣ ಸಿಕ್ಕುದು ಕಂಡದೆ. ಅದರಲ್ಲಿ ನಂಗೆ ಒಂದೇ ಒಂದ್ ಕಂತೆ ಸಿಕ್ಕಿರೂ ಸಾಕಲ್ಲಾ? ತ್ತೇಳಿ ಅಲ್ಲೇ ಹೋಗಿ ಇದರ ನೋಡೇ ಬುಡನ ಈ ನೋಟ್ ಮುದ್ರಣದ ಬ್ಯಾಂಕ್ ಒಂಗೆ ಉಟ್‌ತಾ ? ಅಲ್ಲೇ ಏನಾದರೂ ಛಾನ್ಸ್ ಸಿಕ್ಕಿರೂ ಆದುತ್ತೇಳಿ ಹೊರಟತ್. ಕೆ. ಆರ್. ಎಸ್. ಕಡೆ ಹೋಗ್‌ವ ಒಂದ್ ಸಾಹುಕಾರಿ ಬಸ್‌ಲಿ ಹತ್ತಿ ಕುದ್ದ್‌ಕಂಡತ್ ಅಲ್ಲೆ. ಪಾಲ್ಕನ್ ಪ್ಯಾಕ್ಟರಿ ಸ್ಟಾಪ್‌ಲಿ ಎಲ್ಲಾ ಪ್ಯಾಕ್ಟರಿಗೆ ಹೋಗುವ ವರ್ಕರ್ಸ್ ಜೊತೆ ತಾನೂ ಕೆಳಗಿಳ್ತ್ ಅಲ್ಲಿಂದ ಒಟ್ಟಿಗೆ ಹಂಗೇ ನಡ್‌ಕಂಡ್ ಹೋಕ್ಯಾಕನ ಒಬ್ಬ ಬರೂಕಾ ಅಲ್ಯುಮಿನಿಯಂ ಪ್ಯಾಕ್ಟರಿ ವರ್ಕ್ಸ್ ಹತ್ರ ರಿಸರ್ವ್ ಬ್ಯಾಂಕಿಗೆ ಹೋಗುವ ದಾರಿ ಬಗ್ಗೆ ಕೇಳಿ ತಿಳ್‌ಕಂಡತ್.

ಹಂಗೇ ಅದೇ ರೋಡ್‌ಲಿ ಮುಂದೆ ಹೋಕಾಕನ ಅಲ್ಲೇ ಎದುರು ಗಡೆ ರೋಡಿಗೆ ಅಡ್ಡ ಆಗಿ ದೊಡ್ಡ ಗೇಟ್ ಕಂಡತ್. ಮಿಲಿಟರಿ ಆಫಿಶರ್‌ಗಳ ತರದ ಜನ ಎದ್‌ರ್ ಗೇಟ್‌ಲಿ ಸೆಕ್ಯೂರಿಟಿ ಗಾರ್ಡ್‌ಗ ನಿಂತಿದ್ದೊ. ಇವರೊಟ್ಟಿಗೆ ಸ್ವಲ್ಪ ಈ ಬ್ಯಾಂಕ್‌ನ ಬಗ್ಗೆ ವಿವರಗಳ ತಿಳ್‌ಕಂಡ್ ಆ ಮೇಲೆ ಬ್ಯಾಂಕ್‌ನ ಆವರಣದ ಒಳಗೆ ಹೋಕ್ ತ್ತೇಳಿ ಗ್ಯಾನ ಮಾಡಿ ಅಲ್ಲಿದ್ದ ಒಬ್ಬ ಸೆಕ್ಯೂರಿಟಿ ಗಾರ್ಡ್‌ನ ಹತ್ರ ಕೇಳ್ತ್ ನಾನ್ ಒಳಗಡೆ ಹೋಕು ಬ್ಯಾಂಕ್‌ನ ನೋಡಿಕೆ ನಂಗೆ ತುಂಬಾ ಆಸೆ ಅದಕ್ಕೆ ಒಳಗೆ ಬುಟ್ಟು ಕೊಡೀತ ಕೇಳಿಕಂಡತ್.

ಆ ಗಾರ್ಡ್‌ನ ನೋಡಿರೆ ತಮಿಳ್‌ನವನಂಗೆ ಕಂಡತ್. ಅಂವ ಇವರ ಅಡ್ರಸ್, ಕುಲ ಗೋತ್ರನ ಕೇಳ್ತ್ ಒಳಗೆ ನಿಮಗೆ ಏನ್ ಕೆಲ್ಸ ? ಯಾರ್‌ನ ಕಾಣಕು ತ್ತಾ ಎಲ್ಲಾ ಕೇಳಿಕೆ ಶುರ್‌ಮಾಡ್ತ್ "ಥೂ ತರ್ಲೆ" ಇಂವಂಗೆ ಎಂತರ ಹೇಳ್ದು? ನಾನ್ ಯಾರ್‌ನ ಕಾಣಕು? ಅಲ್ಲಿ ಒಳಗೆ ಏನ್ ಕೆಲ್ಸ? ತ್ತಾ ಕೇಳ್ತಲ್ಲಾ? ಸುಮ್ಮ ಸುಮ್ಮನೆ ಒಳಗೆ ನೋಟ್ ಪ್ರಿಂಟ್ ಮಾಡುದರ ನೋಡಿಕೆ ಹೋಕುತ್ತೇಳ್ತ್. ಆಗ ಆ ಗಾರ್ಡ್ ಪಕ ಪಕ ತಾ ನೆಗಾಡಿ ಬುಟ್ ತಮಿಳ್ ಭಾಷೆಲಿ ಗೇಲಿಮಾಡಿ ಹಂಗೆಲ್ಲಾ ಸುಮ್ಮ ಸುಮ್ಮನೆ ನಿಮ್ಮನ್ನ ನೋಡಿಕೆ ಬುಡ್ದ್‌ಲ್ಲೆ. ಅಲ್ಲೇನ್ ಹಬ್ಬ ಕುಣಿಯುದಿಲ್ಲೇ ಏನಾದ್ರೂ ಅಫಿಷಿಯಲ್ ವರ್ಕ್ ಇದ್ದರೆ ಮಾತ್ರ ಇಲ್ಲಿ ಪಾಸ್ ಕೊಟ್ಟವೆ. ನೀವು ಯಾರ್‌ನ ಕಾಣಕೋ ಅವರ ಮಾತ್ರ ಕಂಡ್ ಅತ್ತ ಇತ್ತ ತಿರ್‌ಗದಂಗೆ ವಾಪಾಸ್ ಬರೋಕು. ಆದ್ರಂದ ನಿಮ್ಮ ಒಳಗೆ ಬುಡಿಕೆ ಆದ್‌ಲೇ. ಹೋಗಿ ವಾಪಾಸ್ತ್‌ತೇಳಿ ಮೊಖಕ್ಕೆ ಹೊಡ್ದಂಗೆ ಹೇಳಿಬುಡ್ತ್.

ಛೇ ಎಂಥಾ ಅವಮಾನ ಆಗಿ ಹೊತ್ ತಾ ರಾಜು ಬೇಜಾರ್ ಮಾಡಿಕಂಡ್ ಅಲ್ಲಿಂದ ನೆಟ್ಟಂಗೆ ಹೆಬ್ಬಾಳ್ ಇಂಡಸ್ಟ್ರಿಯಲ್ ಎಸ್ಟೇಟ್ ಕಡೆಗೆ ಹೊರಟತ್. ಹೋಗಿ ಅಲ್ಲೇ ಮೇಯಿನ್ ರೋಡ್‌ಲಿ ಇದ್ದ ಟೀ ಸ್ಟಾಲ್‌ಗೆ ಹೋಗಿ ಒಂದ್ ಬೆಂಚ್ ಮೂಲೆಲಿ ಕುದ್ದ್‌ಕಂಡ್ ಒಂದ್ ಕಪ್ ಟೀ ಗೆ ಆರ್ಡ್‌ರ್ ಮಾಡ್ತ್. ಆಗ ಅಲ್ಲೇ ಪಕ್ಕಲೆ ಕುದ್ದಿದ್ದ ಎರಡ್ ಬಡಕಲ್ ಕಾಯದ ಹುಡುಗರು ಅಲ್ಲೇ ಎದುರು ಗಡೆಯ ಬಾಂಬೇ ಡ್ರೆಸ್ ಮೇಕರ್ಸ್ & ಗಾರ್ಮೆಂಟ್ಸ್ ಸಾಹುಕಾರನ ಹೇಳಿಕಂಡ್ ವಾಚಾಮಾಗೋಚರವಾಗಿ ಬಾಯಿಗೆ ಬಂದಂಗೆ ಅಂವಂಗೆ ಬೊಯ್ದುಕಂಡ್ ಅವನ ಚರಿತ್ರೆ ಭಗ್ಗೆ ಮಾತಾಡಿಕಂಬೊತಿದ್ದೊ. ಪಾಪ ಈ ಹೈಂದಂಗಳಿಗೆ 2ತಿಂಗಳಿಂದ್ಲೂ ಸಂಬಳ ದುಡ್ಡ್‌ನೂ ಕೊಟ್ಟ್‌ತಿಲ್ಲೆ ಗಡ Over time ಕೆಲ್ಸದ ಕಾಸ್‌ನೂ 3 ತಿಂಗಳ್

ಬಾಕಿಉಟ್ಟುಗಡ. ಹಿಂಗೆ ಇವಿಕ್ಕೂಅಲ್ಲದೆ ಅಲ್ಲಿ ಕೆಲ್ಸ ಮಾಡುತ್ತಿರುವ ಸುಮಾರು 500 ಜನ ಹೆಣ್ಮಕ್ಕ ಹೊಲಿಗೆ ಕೆಲ್ಸ ಮಾಡವುಕೆ ಸಮೇತ ಒಂದು ತಿಂಗಳ ಸಂಬಳ ಮಾಮೂಲಾಗಿ ಬಾಕಿ ಮಡಿಗೆ ಕಂಡೊಳು ಗಡ. ಸಂಬಳ ಎಲ್ಲಾ ಕೊಟ್ ಬುಟ್ರೇ ಅವು ಇಲ್ಲಿಂದ ಬುಟ್ಟು ಬೇರೆ ಕಡೆ ಪ್ಯಾಕ್ಟರಿಗೆ ಸೇರಿ ಬುಟ್ಟವೆತಾ ಈ ಸಾಹುಕಾರನ ಅನುಮಾನ. ಸುಮಾರು 750 ಜನ ಇಲ್ಲಿ ಟೈಲರಿಂಗ್ ಕೆಲ್ಸ ಮಾಡುತಾ ಒಳೊಗಡ. ಇದರಿಂದ ಅಂವಂಗೆ ತಿಂಗಳಿಗೇ ಕೋಟ್ಯಾಂತರ ರೂಪಾಯಿ ಲಾಭ ಬರುತ್ತಾ ಉಟ್ಟುಗಡ. ಆದ್ರೂನೂಕೂಡಾ ಇಲ್ಲಿ ದುಡಿಯುವ ಜನಕ್ಕೆ ಮಾತ್ರ ಸರಿಯಾಗಿ ಸಂಬಳನೂ ಕೊಡ್ದ್ಲ್ಲೆ ಅದ್ ಹೋಗ್ಲಿ ಅವುಕೆಲ್ಲ ಕನಿಷ್ಠ ಮೂಲಭೂತ ಸೌಕರ್ಯಗಳಂತಹ E.S.I. ಮತ್ತೆ Provident Fund ನಂತಹ ಸೌಕರ್ಯ ಇಲ್ಲೆ. ಇನ್ಸೂರೆನ್ಸ್ ಇಲ್ಲೆ. ಕೆಲ್ಸ ಮಾಡಿ ಸುಸ್ತಾಗುವಂತಹ ಸಮಯಕ್ಕೆ ಒಂದ್ ಗ್ಲಾಸ್ ಟೀನೂ ಇಲ್ಲೆ ಒಳಗೆ ಕೆಲ್ಸ ಮಾಡಿಕೆ ಶುರ್ ಮಾಡಿರೆ ಇನ್ ಊಟಕ್ಕೆ ಮಧ್ಯಾನ 1 ಗಂಟೆ ಮಾತ್ರ ಟೈಂ ಕೊಡ್ದುಗಡ. ಒಂದ್ ರೀಸಸ್ ಬಂದ್ರೂನೂ ಆ ಗೂಡೆಗ ಓಡೋಡಿ ಹೋಗಿ ಬೇಗ ಓಡೋಡಿ ಬಂದು ಬುಡೋಕು. ಇಲ್ಲೇತ್ತೇಳ್ರೆ ಅಲ್ಲಿದ್ದ ಅಧಿಕಾರಿಗ ಕೂಡಾ ಇವುಕೆ ಬಯ್ಯಾದುಗಡ. ಈ ನಮಕ್ ಹರಾಮ್ ಸಾಹುಕಾರನ ವರ್ಕಿಂಗ್ ಹವರ್ಸ್ ಬೆಳಿಗ್ಗೆ 9 ಗಂಟೆಂದ ಸಾಯಂಕಾಲ 6½ ಗಂಟೆವರೆಗೆ ಅಂದ್ರೇ ದಿನಾ 1½ ಗಂಟೆ ಕಾಲ ಹೆಚ್ಚಿಗೆ ಕೆಲ್ಸ ಮಾಡೋಕು. ಅಂದ್ರೂ ಒಂದ್ ಕೆಲ್ಸದಾಳಿಗೆ ಕೂಲಿ ಸಂಬಳ 700ಕ್ಕೆ ತಲ್ಪ್‌ದಿಲ್ಲೆ. ಇವು ಇಷ್ಟ್ ಕೆಲ್ಸ ಮಾಡಿರೆ ಸಾಲ್ದ್ ಈ ಕೆಲ್ಸಗಾರರ್ ಕೆಲ್ಸ ಮುಗ್ಸಿ ಸುಸ್ತಾಗಿ ಮನೆಗೆ ಹೊಲಡಾಕಾಕನ ಸರಿಯಾಗಿ ನಂಗೆ ಪ್ರೊಡಕ್ಷನ್ ತೆಗ್ದ್ ಕೊಡ್ತ್‌ಲ್ಲೆ ತೇಳಿಕಂಡ್. ಅಲ್ಲೇ ಬಾಗ್‌ಲಲ್ಲಿ ಎಲ್ಲವರನ್ನೂ ತಡ್ದ್‌ನಿಲ್ಸಿಕಂಡ್ ಕೆಳಮಟ್ಟದ ಅಶ್ಲೀಲ ಭಾಷೆನ ಬಳ್ಸಿಕಂಡ್ ಬಯ್ದು ಕಳ್ಸದು ಇಂವಗೆ ಮಾಮೂಲಿ ಒಂದ್ ಚಾಳಿಗಡ. ಇಲ್ಲಿ ಹೆಚ್ಚಾಗಿ ಬಡ ಹೆಣ್‌ಮಕ್ಕಳೇ ಕೆಲ್ಸಕ್ಕೆ ಸೇರಿಕಂಡೊಳೊ. ಹಂಗಾಗಿ ಇವರನ್ನ ಶೋಷಣೆ ಮಾಡಿಕೆ ಬಹಳ ಆರಾಂ. ಯಾಕೆತ್ತೇಳಿರೆ ಇವುಕೆ ಇವರದೇ ಆದ ಒಂದ್ ಒಗ್ಗಟ್ ಇಲ್ಲೆ ಒಂದ್ ಯೂನಿಯನ್ ತ್ತೇಳಿ ಇಲ್ಲೆ ಯಾರಾದ್ರೂ ಒಂದು ಗೂಡೆ ಧೈರ್ಯಮಾಡಿ ನಂಗೆ ಯಾಕೆ ಈ ತಿಂಗಳ ಸಂಬಳ ಇಷ್ಟೇ ಬಂದದ್‌ತಾ ಕೇಳಿರೆ ಮಾರನೆ ದಿನಂದ ಅವಳ ಕೆಲ್ಸದಿಂದ ತೆಗ್ದ್ ಹಾಕ್‌ತಿದ್ದೊ. ಇವುಕೆ ದಿನ ಕೆಲ್ಸಕ್ಕೆ ಹಾಜರಾಗುದಕ್ಕೆ ಕ್ರಮಬದ್ಧವಾದ ಹಾಜರಿ ಬುಕ್ ಇಲ್ಲೆ. ಸಂಬಳ ಕೊಡಿಕಾಕನ (Salary slip) ಸಂಬಳ ತಕೊಂಡದಕ್ಕೆ ಲೆಕ್ಕಬುಕ್ಕಲಿ ಇವರ ಸಿಗ್ನೇಚರ್ ಇಲ್ಲೆ. ಇವು ಕೆಲ್ಸಕ್ಕೆ ಬಂದೊಳುತ್ತೇಳಿ Attendence ledger ಕೂಡಾ ಮೆಯಿಂಟೆನ್ ಮಾಡದೇ ಇದ್ದ ಮೇಲೆ ಇವುಕೆಲ್ಲಿಂದ ಬಂದದೆ E.S.I. Provident Fund. Salary accounts. ಈ ಕೆಲಸದವರ ಎಲ್ಲಾ ಲೆಕ್ಕಗಳ ಒಂದ್ ಸಣ್ಣ ಚೀಟಿಲಿ ಬರ್ದ್ ಇವರ ಸಂಬಳನ ಒಂದ್ ಕವರ್ ಒಳಗೆ ಬರ್ದ್ ಅದರ ಮೇಲೆ ಇವರ ಹೆಸರ್‌ನ ಬರ್ದ್ ಅದರ ಕವರ್‌ನ ಮುಚ್ಚಿ ಕೊಟ್ಟವೆ. ಇದರ ಈ ಜನ ಕವರ್‌ನ ಬುಡ್ಸಿನೋಡದೆ ಬಾಯಿಮುಚ್ಚಿಕಂಡ್ ಹೊರಗೆ ದಾಟಿ ಹೋಕು. ಸಂಬಳದಿನ ಕೆಲವು ಆಫೀಸ್ ಲೇಡೀಸ್ ಎಕೌಂಟೆಂಟ್‌ಗ ಅಲ್ಲಿ ನಿತ್ತಿದ್ದವೆ ಗಡ ಯ್ಯಾರಾದ್ರೂ ಒಬ್ಬ ಕೆಲ್ಸಗಾರ ನಂಗೆಯಾಕೆ ಇಷ್ಟೇ ಸಂಬಳತ ತಿರುಗಿ ಕೇಳ್ರೆ ಆಗಿ ಹೋತ್ ಇವಳ ಮೇಲೆ ಅವರ ಅಧಿಕಾರಿಗ ಒಳ್ಳೆ ಆಲ್ಸಿಷಿಯೆನ್ ನಾಯಿ ತರ ಬೊಗಳಿ ಇವರ ಬಾಯಿ ಮುಚ್ಚಿಸುವೆ ಗಡ. ಇನ್ ಈ ಕೇಸ್ ಇವರ ಬಾಸ್ ಹತ್ರ ಹೋಗಿ ಬುಟ್ರೇ ಆ ಮನುಷ್ಯ ಇನ್ನೆಷ್ಟ್ ಜೋರಾಗಿ ಬೊಗುಳ್ವೋತೇಳಿ ಕಂಡ್ ಈ ಎರಡ್ ಹುಡುಗರ್‌ಗ ನಗೆ ಆಡಿಕಂಡ್ ಈ ರಾಜೂನೆ ಕೇಳ್ದೋ

ಇದನೆಲ್ಲಾ ಕೇಳ್ಸಿಕಂಡ ಈ CBI Inspector ನ ಕಿವಿ ನೆಟ್ಟಂಗಾತ್. ಆ ಹುಡುಗರ ಹತ್ರ ಕರ್ದ್ ಕುದ್ರಿಸಿ ಕಂಡ್ ಅವುಕೆ 2 ITC ಸಿಗರೇಟ್‌ನ ಆಫರ್ ಮಾಡ್ತ್ ಇಂಥ ಲೋಫರ್ ಸಾಹುಕಾರಂಗೆ ಸರಿಯಾಗಿ ಬುದ್ದಿ ಕಲ್ಸೂಕುತ್ತೇಳಿ ಗ್ಯಾನಮಾಡಿ ಇನ್ನೂ ಹೆಚ್ಚಿನ ಇವನ ಕೃಷ್ಣಲೀಲೆಗ ಇದ್ದರೆ ತಿಳ್‌ಕಂಬೊಕುತ್ತೇಳಿ ರ್‍ರೀ ಸ್ವಾಮಿ ನೀವು ಇಷ್ಟೆಲ್ಲಾ ಆ ನಿಮ್ಮ ಸಾಹುಕಾರನ ಬಗ್ಗೆ ಹೇಳ್ದರಲ್ಲಾ? ನಿಮ್ಮಲ್ಲಿ ಒಂದ್ ಯೂನಿಯನ್ ಅಂತ ಮಾಡಿ ಕಂಡಿದ್ರೇ ಅವನು ಇಷ್ಟೆಲ್ಲಾ ಬಾಲ ಬಿಚ್‌ತಿದ್ನಾ? ಹಂಗಾಗಿ ನಾನ್ ನಿಮಗೆ ಸಹಾಯ ಮಾಡಿನೆ ಮೊದ್ಲು ಒಂದು ಯೂನಿಯನ್ ಕಟ್ಟಿಕೊಳ್ಳಿ ತೇಳಿ ಧೈರ್ಯ ಹೇಳ್ತ್. ಅಯ್ಯೋ ಬುಡಿಸ್ವಾಮಿ ನಾವು ಯೂನಿಯನ್ ಕಟ್‌ಬೇಕೂಂತ್ಲೇ ಐಡಿಯಾಮಾಡಿ ಪ್ರಯತ್ನ ಮಾಡುತಿದ್ದೊ. ಆದ್ರೇ ನಮ್ಮ ಆಫೀಸ್ ಒಳಗಡೆ, ಇದ್ದಾರಲ್ಲಾ ಎಲ್ಲಾ ಲೇಡಿಸ್ ಅಕೌಟೆಂಟರ್‌ಗಳು ಅವುರುಗಳೆಲ್ಲಾ ಈ ಬದ್ಮಾಸ್ ಸಾಹುಕಾರನ ಚಮಚಾಗಳು ಅವೆಲ್ಲಾ ಅವರ ಖಾಸಗಿ ವ್ಯವಹಾರಕ್ಕೆ ಅಂಟಿಕೊಂಡಿರುವರೇ ಅಲ್ಲಿರೋದು, ಒಳಗಡೆ ಪರ್ಸನಲ್ ಸೆಕ್ರೆಟರಿಗಳು, ಕ್ಯಾಷಿಯರ್‌ಗಳು, ಮ್ಯಾನೇಜರ್‌ಗಳೆಲ್ಲಾ ಒಳ್ಳೊಳ್ಳೆ ಚೆಲುವೆಯರುಗಳು ಈ ಬಾಸ್ ಹೇಳಿದ ಹಲ್ಕಾ ಕೆಲ್ಸಗಳಿಗೆಲ್ಲಾ ಒಪ್ಪಿಕಂಡ್ ಎಲ್ಲಾ ಬುಟ್ಟ್ ನಿಂತಿದವ್ರುಗಳೇ ಇರೋದು. ಹಾಗಾಗಿ ಈ ಬದ್ಮಾಸ್ ಬಾಸ್‌ನ ಜೋಬೊಳಗೆ ರೌಡಿಗಳ ಗುಂಪಿನ ಬೆಂಬಲ ಇದೆ. ಇದೂ ಅಲ್ದೇ ಪೋಲಿಸ್ ಸ್ಟೇಷನ್‌ನ ಇನ್‌ಸ್ಪೆಕ್ಟರ್‌ಗಳೂ ಇವರ ಕೈಯೊಳಗೆ ಇದ್ದಾರೆ ಅವರಿಗೆಲ್ಲಾ ಹೆಂಡ ಮತ್ತು ಹೆಣ್ಣುಗಳನ್ನು ಈ ಬದ್ಮಾಸ್ ಸಾಹುಕಾರ ಗಿಪ್ಟ್ ಅಂತ ಕೊಡುತ್ತಿರುತ್ತಾನಂತೆ. ಅಷ್ಟೇಕೆ ಇವರ ಜೋಬೊಳಗೆ, Local Inspector ಗಳು, E.S.I. ಇನ್‌ಸ್ಪೆಕ್ಟರ್‌ಗಳೂ ಇದ್ದಾರೆ ಎಲ್ಲವರಿಗೂ ಮನ್ತ್‌ಲೀ ಇಷ್ಟಿಷ್ಟು ಅಂತ ಹಣಕೊಟ್ಟು, ಎಲ್ಲವರನ್ನೂ ತನ್ನ ಕೈಕೆಗಳಗೆ ಇಟ್ಟು ಕೊಂಡಿದ್ದಾನೆ. ಹಾಗಾಗಿ ನಾವು ಯೂನಿಯನ್ ಕಟ್ಟಿಕೆ ಹೋಗಿ ಅವರ ಕಡೆಯ ರೌಡಿಗಳಿಂದ ಚೆನ್ನಾಗಿ ನಾವು ಏಟ್‌ಗಳ ತಿಂದೊ, ಅಲ್ಲದೆ ನಾವುಗಳು ಒಟ್ಟಾಗಿ ಯಾವ ಪೋಲಿಸ್‌ಗಳ ಹತ್ರಾನೂ ಹೋಗುವ ಹಂಗಿಲ್ಲೆ, ಯಾವ ಲೇಬರ್ ಇನ್‌ಸ್ಪೆಕ್ಟರ್‌ಗಳ ಹತ್ರಾನೂ ನಾವು ಹೋಗುವ ಹಂಗಿಲ್ಲೆ, ಈ ಸಮ್ಮಂದ ಪಟ್ಟ ಡಿಪಾರ್ಟ್‌ಮೆಂಟ್ಸ್‌ಗಳ ಆಫೀಶರ್ಸ್‌ಗಳನೆಲ್ಲಾ ಈ ತಲೆಹಿಡುಕ ಸಾಹುಕಾರ ಅವುರುಗಳಿಗೆಲ್ಲಾ ಅವರವರ ಯೋಗ್ಯತೆಗನುಸಾರ ಅವರ ಏನೇನ್ ವೀಕ್‌ನೆಸ್‌ಗಳೆಲ್ಲಾ ಉಟ್ಟುತಾ ತಿಳ್ಕಂಡ್ ಅದರ ಪ್ರಕಾರ ಅವರವರ ಆಸೆನ ಮೊದಲೇ ನೆರವೇರಿಸಿದೆ. ಹಂಗಾಗಿ ಕೂಲಿಕಾರ್ಮಿಕರ್‌ಗ ಅವರ ಹತ್ರ ಏನೂ ನ್ಯಾಯ ಕೇಳಿಕೆ ಆದುಲ್ಲೆ,

ಈ ಸಾಹುಕಾರ ಎಂಥಾ 420 ಅಂತಾ ಗೊತ್ತಾ ಸ್ವಾಮಿ ಕಳೆದ ತಿಂಗ ಮದ್ರಾಸ್‌ಲಿ ಒಬ್ಬ ಪಾರ್ಟಿ ಹತ್ರ ಅದೇನೋ ತುಂಬಾ ವ್ಯಾಪಾರ ಮಾಡಿ ಕಡೆಗೆ ಅವಂಗೆ ಒಂದ್ ಬೋಗಸ್ ಚೆಕ್ಕ್‌ನ ಸಹಿನ್ ಮಾಡಿ ಕೊಟ್ಟ್ ಬಂದಿತ್‌ಗಡ, ಅಲ್ಲಿ ಆ ವ್ಯಾಪಾರಸ್ಥಂಗೆ ಇಂವನ ಮೋಸ ಗೊತ್ತಾದಂಗೆ ಅಲ್ಲಿಂದ್ಲೇ ಪೋಲಿಸ್‌ಸ್ಕ್ವಾಡ್ ಇವನ ಎರೆಸ್ಟ್‌ಮಾಡಿಕೆ ಬಂದಿದ್ದೊ, ಅಂತಹ ಪೋಲಿಸ್ ಆಫೀಸರ್ಸ್‌ಗಳೇ ಈ ಮನ್ಸನ ಗುಂಡುತುಂಡು, ಹೆಣ್ಣ್, ಹಣಗಳಿಗೆ ಚಿತ್ ಆಗಿ ಹೋಗಿ ಬರೀ ಕೈಲಿ ವಾಪಾಸ್ ಹೋಗಿ ಬುಟ್ಟೋಗಡ, ಈಗ ಗೊತ್ತಾತ ಈತನ ಕೃಷ್ಣಾವತಾರದ ಗುಣಗಳ? ಈ ಕೃಷ್ಣವತಾರದ ಮನುಷ್ಯ ಕಳ್ಳ 7 ವರ್ಷದ ಹಿಂದೆ ಒಂದ್ ಸಣ್ಣ ಸೆಡ್‌ಲಿ ರೆಡಿಮೇಡ್ ಬಟ್ಟೆ ಹೊಲಿಯಕೆ ಸುರು ಮಾಡ್‌ದ ಈ ಮನ್ಸ. ಈಗ ನೋಡಿ ಕೋಟ್ಯಾಂತರ ರೂಪಾಯಿಗಳ ಆಸ್ತಿಗೆ ವಾರಿಸ್‌ದಾರ ನಾಗುಟ್ಟು. ಇದೆಲ್ಲಾ ನಿಯತ್ತಾಗಿ ದುಡಿದಿದ್ದರೆ ಇಷ್ಟ್‌ಬೇಗ ಇಷ್ಟ್ ದೊಡ್ಡ ಮನ್ಸ ಆಕೆ ಸಾಧ್ಯ ಇಲ್ಲೆ, ಅತೀ ಹೆಚ್ಚ್ ಜನರ ಹೊಟ್ಟೆ ಮೇಲೆ ಹೊಡ್ದ್‌ರೆ ಮಾತ್ರ ಇಂವ ಒಬ್ಬ ತನ್ನ ಹೊಟ್ಟೆನ ತುಂಬಾ ದೊಡ್ಡದಾಗಿ ಮಾಡಿಕಣಕ್ ತಾ ತುಂಬಾ ಬೇಜಾರ್‌ಲಿ ಆ ಎರಡ್ ಜನ ಹೇಳಿಕಂಡೊ.

ಸರಿ ಈ C.B.I. ಇನ್‌ಸ್ಪೆಕ್ಟರ್ ರಾಜುನ ತಲೆಗೆ ಒಳ್ಳೆ ಕ್ರಿಮಿನಲ್ ಐಡಿಯಾ ಹೊಳ್ತ್. ಆ ಎರಡ್ ಹುಡುಗರ ಕೈನ ಹಿಡ್‌ಕಂಡ್ ರ್ರೀ ಹುಡುಗ್‌ರ್‍ರಾ ನೀವು ಹೆದರ್ ಬೇಡಿ, ನಾನ್ ಅಂವಂಗೆ ಸರಿಯಾಗಿ ಬುದ್ಧಿ ಕಲ್ಸಿನೆ, ನೀವು ಅಲ್ಲಿ ನಿಮ್ಮ ಕೆಲ್ಸನ ಬುಡುದು ಬೇಡ ನಿಮಿಗೆ ಲೀವ್ ಬಿನಿಫಿಟ್, ಇ.ಎಸ್.ಐ. ಪ್ರಾವಿಡೆಂಟ್ ಫಂಡ್, ಮತ್ತೆ ಕ್ಯಾಂಟಿನ್‌ನ ಸೌಕರ್ಯ ಇಂತದರೆಲ್ಲಾ ಕೊಡ್ಸಿಕೆ ಪ್ರಯತ್ನನ ಮಾಡಿನೆ. ನೀವು ಧೈರ್ಯ ಆಗಿ ಇರಿ. ತ್ತೇಳಿ ಅವರಿಬ್ಬರ ಕೈಹಿಡ್ದು ಕುಲಕಿ ಅಲ್ಲಿಂದ ನೆಟ್ಟಂಗೆ ವಾಪಾಸ್ ಸಿಟಿ ಬಸ್‌ನ ಹತ್ತಿ ಮೈಸೂರು ಸಿಟಿಗೆ ಬಂದ್ ಇಳ್ತ್. ಇವನ ತಲೇಲಿ ಈ ಬಾಂಬೆ ಡ್ರೆಸ್ ಮೇಕರ್ಸ್ ಕೃಷ್ಣಾವತಾರ್ ಸಿಂಗ್‌ನ ಕೃಷ್ಣಲೀಲೆನ ಗ್ಯಾನ ಮಾಡಿಕಂಡೇ ತನ್ನ ಲಾಡ್ಜಿಗೆ ಬಂದ್ ತನ್ನ ಕೊಂಬರೆ ಒಳಗೆ ಬಾಗ್‌ಲ್ ಹಾಕಿಕಂಡ್ ಒಂದೇ ಸಮನೆ ಈ ಸಾಹುಕಾರನ ಸೊಕ್ಕು ಮುರಿಯುವ ಬಗ್ಗೆನೇ ಚಿಂತೆ ಮಾಡ್‌ತಿತ್, ಈ ಸಾಹುಕಾರನ ಮೇಲೆ ರಾಜುಗೆ ತುಂಬಾ ಸಿಟ್ಟ್ ಬಂದ್ ಬುಟ್ಟಿತ್. ಈ ಎರಡ್ ಹುಡಗರ್ ಅವುಕೆ ತಿಳಿದಷ್ಟ್ ವ್ಯವಹಾರನ ಮಾತ್ರ ಅವು ನಂಗೆ ತಿಳ್ಸಿರುವೋ, ಆದ್ರೆ ಇನ್ನೂ ಏನೇನ್ ಅಂಡರ್ ಗ್ರೌಂಡ್ ವ್ಯವಹಾರಗಳ ಈ ಖದೀಮ ಮಾಡುತಾ ಉಟ್ಟೋ ಏನೋ?

ಈ ದನೆ ಪಿಸಾಚಿ ಸಾಹುಕಾರ ಅಸಾಯಕ, ಬಡ ಜನರ ಅದರಲ್ಲೂ ಹೆಣ್ಣ್‌ಮಕ್ಕಳ ಕೈಲಿ ಅಷ್ಟೊಂದು ಕಷ್ಟ ಕೊಟ್ಟ್‌ಕಂಡ ಕೆಲ್ಸನ ಮಾಡ್ಸಿಕಂಡ ಮೇಲೆ ಅವರ ಕೆಲ್ಸಕೆ ತಕ್ಕಂಗೆ ಕೂಲಿನ ಯಾಕೆ ಇಂವ ಕೊಡುದಿಲ್ಲೆ? ಇವರ ರಕ್ತ ಹೀರಿ ಇವರ ಶೀಲನ, ಮಾನನ, ಕೊನೆಗೆ ಆಯುಷ್ಯನ ಕೂಡಾ ದೋಚುವಂತಹ ರಣ ಹದ್ದ್ ನಂತವನ, ಗ್ರಿಪ್‌ಲಿ ಅವರ್‌ನ ಹಿಡ್ದ್ ಇಟ್‌ಕಂಡ್ ಹಿಂಗೆ ಮಾನಸಿಕವಾಗಿ ಹಿಂಸೆ ಕೊಟ್ಟದಲ್ಲಾ? ಇಂವನ ಸೊಕ್ಕ್‌ನ ಮುರಿಯಕೆ ಇಷ್ಟರವರೆಗೆ ಯಾವನೊಬ್ಬನೂ ಮುಂದೆ ಬಾತ್‌ಲೆಲ್ಲಾ ತ್ತೇಳಿಕಂಡ್ Mr. ರಾಜು ಬೇಜಾರ್ ಮಾಡಿ ಕಂಡತ್, ಇಂವ ತನ್ನಲಿ ಕೆಲ್ಸಕ್ಕೆ ಇರತಕ್ಕ ಕಾರ್ಮಿಕರಿಗೆ ಯಾವ ಯಾವತರಲಿ ಮೋಸ ಮಾಡಿ ಅವರ ಕೂಲಿ ಹಣನ ಉಳ್ಸಿಕೊಳ್ಳುತಾ ಉಟ್ಟುತ್ತೇಳುವ ಹಲವಾರು ಕಾರಣಗಳ ಒಂದೊಂದಾಗಿ ಯೋಚನೆ ಮಾಡ್‌ತಾ ಇಂವ ಮಾಡುವ ವಂಚನೆಗಳ ಒಂದೊಂದು ರೂಟ್‌ಗಳನ್ನ ಕಂಡ್ ಹಿಡೀತಾ ಅದರ ಅವಲೋಕನ ಮಾಡಿಕಂಬತಿತ್.

ಇಂತಹ ಖದೀಮನ ಸೊಕ್ಕುನ ಮುರಿಯದೇ ನನ್ನಂತವನ ಉದ್ದೇಶ ತಾನೆ ತಾ ಗ್ಯಾನ ಮಾಡಿಕಂಡೇ ಮಲಗಿದವಂಗೆ ನಿದ್ದೆ ಬಂದ್ ಕಣ್ಣ್ ಮುಚಿದೇ ಗೊತ್ತಾತ್‌ಲೆ.

(ಮುಂದ್‌ವರ್ದದೆ)

## ಒಗಟುಗಳು

1. ಕಪ್ಪುಂಟು ಕಸ್ತೂರಿಯಲ್ಲ, ಬಿಳುಪುಂಟು ಸುಣ್ಣವಲ್ಲ, ನೀರುಂಟು ಬಾವಿಯಲ್ಲ ರೆಕ್ಕೆಯುಂಟು ಪಕ್ಷಿಯಲ್ಲ
2. ನೀರಲ್ಲೇ ಹುಟ್ಟಿ ನೀರಲ್ಲೇ ಬೆಳೆದು ಊರಲ್ಲಿ ಬಂದು ಗಂಟಲು ಹರಿಯುವಂತೆ ಕೂಗ್ತೇನೆ ನಾನು ಯಾರು?
3. ಅಂಗಡಿಯಲ್ಲಿ ಮಾರುವುದಿಲ್ಲ, ತಕ್ಕಡಿಯಲ್ಲಿ ತೂಗುವುದಿಲ್ಲ. ಅದಿಲ್ಲದಿದ್ದರೆ ನಮ್ಮ ಮನೆಯಲ್ಲಿ ಹಬ್ಬ ಆಗುವುದೇ ಇಲ್ಲ.
4. ಆ ಅಣ್ಣ ಈ ಅಣ್ಣ ಇದ್ದರೂ ಅಷ್ಟೆ ಸತ್ತರೂ ಅಷ್ಟೆ
5. ಅಂಬಾ ಅನ್ನೋದಿಲ್ಲ. ಜಿಗಿದು ಓಡೋದಿಲ್ಲ ಮಡಿಕೆಹಾಲು ಕೊಡುತ್ತೆ
6. ಒಂದು ಮನೆಗೆ ಮೂವರು ನೆಂಟ್ರು ಬರ್ತಾರೆ. ಒಬ್ಬ ಒಳಗೂ ಇಬ್ಬರೂ ಹೊರಗೂ ಇರ್ತಾರೆ ಅವರು ಯಾರು?
7. ಕೈ ಹಿಡಿದವನು ಗಂಡನಲ್ಲ, ಬಟ್ಟೆ ಹರಿಯುವನು ಹುಚ್ಚನಲ್ಲ
8. ನೀವ್ ಹಾಸಿದ್ರಿ ನಾನ್ ಬಂದಿದ್ದೆ. ನೀವ್ ಇರ್‍ಲಿಲ್ಲ ನಾನ್ ಹೋರ್ಟೋದೆ
9. ನೀರಲ್ಲೇ ಹುಟ್ಟುತ್ತೆ, ನೀರಲ್ಲೆ ಬೆಳೆಯುತ್ತೆ, ನೀರು ಕಂಡ್ರೆ ಕರಗಿ ಹೋಗುತ್ತೆ
10. ಬರೆಯದೆ ಓದುವುದು ಕರೆಯದೆ ಬರುವುದು, ಬರಿಗಾಲಲ್ಲಿ ತಿರುಗಾಡುವುದು ಇವು ಮೂರು ಯಾವುವು?

1. ಕಣ್ಣು 2. ಶಂಖ 3. ಸೆಗಣಿ 4. ಆನೆ 5. ಬೈನೆಮರ 6. ಮನುಷ್ಯ ಮತ್ತು ಚಪ್ಪಲಿ
7. ಬಳೆಗಾರ ಮತ್ತು ದರ್ಜಿ 8. ತಿಗಣೆ 9. ಉಪ್ಪು 10. ಬೈಗುಳ, ನಿದ್ದೆ, ಮನಸ್ಸು

ತೀರ್ಥಅರಂಬೂರು, ತ್ರಿಪುರ

ನೆಂಟರಿಗೆಸಾಲ ಕೊಡಬಾರದು, ನೆಂಟರಿಂದ ಸಾಲ ಪಡೆಯಬಾರದು.

## ಸಂಗಾತಿ ಭವಿಷ್ಯ : ಸೆಪ್ಟಂಬರ್ 16 ರಿಂದ 30, 2000

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ** : ದೈವಾನುಕೂಲವಿಲ್ಲ. ಗೃಹವಲಯದಲ್ಲಿ ಸಾಧಾರಣವಾಗಿ ನೆಮ್ಮದಿ ವ್ಯವಹಾರದಲ್ಲಿ ನಷ್ಟ ಬಂದುಗಳಿಂದ ಮಾನಸಿಕ ವ್ಯಥೆಗೆ ಒಳಗಾಗುವಿರಿ. ಸ್ಥಾನಪಲ್ಲಟವಾಗುವಿರಿ.

**ವೃಷಭ ರಾಶಿ** : ಆರೋಗ್ಯ ಉತ್ತಮಗೊಳ್ಳುವುದು. ಮನಸ್ಸಿಗೆ ನೆಮ್ಮದಿ ಹಣಕಾಸು ಯಥೇಚ್ಚವಾಗಿ ಕೈಗೂಡುವುದು. ಶತೃಗಳು ದೂರಾಗುವರು. ಗೃಹವಲಯದಲ್ಲಿ ಸುಖ, ಶಾಂತಿ ನೆಲೆಸುವುದು.

**ಮಿಥುನ ರಾಶಿ** : ವಿವಿಧ ಮೂಲಗಳಿಂದ ಹಣಕಾಸು ಬರುವುದು. ಆರೋಗ್ಯ ಉತ್ತಮಗೊಂಡು ನೆಮ್ಮದಿಯಾಗುವುದು. ಗೃಹವಲಯದಲ್ಲಿ ಭೂಸಂಬಂದ ವ್ಯವಹಾರದಲ್ಲಿ ಎಚ್ಚರ ಅಗತ್ಯ.

**ಕರ್ಕಾಟಕ ರಾಶಿ** : ಗೃಹವಲಯದಲ್ಲಿ ವ್ಯವಹರಿಸುವಾಗ ಎಚ್ಚರ ಅಗತ್ಯ. ಕಷ್ಟನಷ್ಟಗಳು ಬರುವುದು. ವಂಚನೆಗೆ ಒಳಗಾಗುವಿರಿ. ಅನಾವಶ್ಯಕ ಪ್ರಯಾಣದಿಂದ ಮನಸ್ಸಿಗೆ ನೆಮ್ಮದಿ ಇಲ್ಲ. ಆರ್ಥಿಕ ನಷ್ಟ ಅನುಭವಿಸುವಿರಿ.

**ಸಿಂಹ ರಾಶಿ** : ಅನಾರೋಗ್ಯ ಸಂಭವಿಸುವುದು. ಸಂಸಾರದಲ್ಲಿ ನಿಷ್ಠುರಗಳು ಬರಲಿವೆ. ದೇಹದಲ್ಲಿ ಅನಾರೋಗ್ಯ ಕಾಣಬಹುದು. ಎಚ್ಚರ ಅಗತ್ಯ. ಆರ್ಥಿಕ ಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸುವುದು.

**ಕನ್ಯಾ ರಾಶಿ** : ಗೃಹವಲಯದಲ್ಲಿ ಕಲಹ ಬರುವ ಸಂಭವವಿದೆ. ಉದ್ಯೋಗ- ವ್ಯವಹಾರದಲ್ಲಿ ಸಾದಾರಣ ನೆಮ್ಮದಿ. ದೂರದ ಬಂಧುಗಳಿಂದ ಶುಭ ಸಮಾಚಾರ ಪ್ರಸ್ತಾಪ.

**ತುಲಾ ರಾಶಿ** : ಆರೋಗ್ಯ ಉತ್ತಮವಾಗಿ ನೆಮ್ಮದಿಯಾಗುವುದು. ವ್ಯವಹಾರದಲ್ಲಿ ಲಾಭವಿದೆ. ಹಣಕಾಸಿಗೆ ತೊಂದರೆಯಿಲ್ಲ. ದೇವತಾಕಾರ್ಯ ಮಾಡುವ ಯೋಗವಿದೆ.

**ವೃಶ್ಚಿಕ ರಾಶಿ** : ಕೈಗೊಂಡ ಯಾವುದೇ ವ್ಯವಹಾರಗಳು ನೆರವೇರುವುದು. ಹಣಕಾಸಿನ ವ್ಯವಹಾರದಲ್ಲಿ ತಾಪತ್ರಯವಿಲ್ಲ. ಗೃಹವಲಯದಲ್ಲಿ ನೆಮ್ಮದಿ ಭೂಸಂಬಂದ ವ್ಯವಹಾರದಲ್ಲಿ ಲಾಭಾಂಶ ಕೈ ಸೇರುವುದು.

**ಧನಸ್ಸು ರಾಶಿ** : ದೇಹಕ್ಕೆ ಅಪಘಾತ ಭಯಗಳಿರುವುದರಿಂದ ವಾಹನದಲ್ಲಿ ಸಂಚಾರ ,ಸ್ಥಗಿತಗೊಳಿಸುವುದು ಉತ್ತಮ. ವ್ಯವಹಾರದಲ್ಲಿ ಹೇರಳನಷ್ಟಅನುಭವಿಸುವಿರಿ. ಮನಸ್ಸಿಗೆ ನೆಮ್ಮದಿ ಇರಲಾರದು.

**ಮಕರ ರಾಶಿ** : ದೇಹದಲ್ಲಿ ಅನಾರೋಗ್ಯ ಕಾಡಬಹುದು. ಹಣಕಾಸಿನ ವ್ಯವಹಾರದಲ್ಲಿ ಲಾಭವಿದೆ. ಹಲವು ವಿಧಗಳಿಂದ ಧನಾಗಮನವಾಗುವುದು. ಮನಸ್ಸಿಗೆ ನೆಮ್ಮದಿ ಇಲ್ಲ. ಶನಿಯ ಆರಾಧನೆಯಿಂದ ಯಶಸ್ಸು ಲಭಿಸುವುದು.

**ಕುಂಭ ರಾಶಿ** : ದೇಹದಲ್ಲಿ ರಕ್ತದೊತ್ತಡದಿಂದ ಮನಸ್ಸು ಸ್ಥಿಮಿತದಲ್ಲಿರುವುದಿಲ್ಲ. ಉಷ್ಣಸಂಬಂದ ವ್ಯಾಧಿಗಳು ಬರಬಹುದು. ಶತೃಗಳು ದೂರಾಗುವರು. ದೇವತಾಕಾರ್ಯ ಮಾಡುವಿರಿ.

**ಮೀನ ರಾಶಿ** : ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ ವ್ಯವಹರಿಸಿ. ಶತೃಗಳ ಬಲೆಗೆ ಬೀಳಬೇಡಿ. ಮನಸ್ಸಿಗೆ ನೆಮ್ಮದಿ ಇರುವುದಿಲ್ಲ. ಗೃಹವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ ಇಲ್ಲ.

---

8ನೇ ಪುಟದಿಂದ

**ಸೀತಮ್ಮತ್ತೆ :** ಇಲ್ಲೆಪ್ಪ ಕರ್ಚಿಗೆ ಸಮ ಸಮ ಹಾಕೊಂಬೊನ. ಇಕ್ಕಿಕೆ ಹಿಡಿಯಕೆ ಎರ್ಡು ಕಡೆವು ಸೇರಿಕಂಡ್ರೆ ಯಾವ ಕಷ್ಟನೂ ಆದುಲೆ. ಬಾಕಿ ಎಲ್ಲಾ ಹಳೆ ಪದ್ದಿಸ್ಟನಂಗೆ ಶಾಸ್ತ್ರಗಳ್ನ ಸರಿಯಾಗಿ ನಡ್ಸಕುತ ನಮ್ಮ ರಮೇಶ ಹೇಳ್ತಿತ್ತ್.

**ಸೀತಮ್ಮತ್ತೆ :** ಹೊತ್ತಾತ್ ಮಾತಾಡಿಕಂಡ್ ಸಮಯ ಹೋದೇ ಗೊತ್ತಾತ್‌ಲೆ. ಗಂಗೂ ಇನ್ನ್ ಹೊರ್ಡ್ಡೊನೂ ಅಲ್ಲಾ?

**ಗಂಗು :** ಅಲ್ಲತ್ತೆ, ಗೂಡೆನ ಬಾಯಿಂದ ಒಂದು ಪದ ಹೇಳ್ಸ್ ಕಾಗಿತ್ತ್ ರಾಧಾ ಒಂದು ಪದ ಹೇಳಿಬುಡು.

**ರಾಧ :** ನಂಗೆ ಅಷ್ಟ್ ರಾಗ ಇಲ್ಲೆ. ಗೊತ್ತಿದ್ದದರ್ನ ಸ್ವಲ್ಪ ಹೇಳ್ನೆ - ಮತಿಬೇಕು ಸುಗುಣವತಿಗೆ.....

**ಗಂಗು :** ಪರವಾಗಿಲ್ಲೆ ಲಾಯ್ಕ ಹಾಡಿಯ. ಸಂಗೀತ ಏನಾರ್ ಕಲ್ತೊಳಾ?

**ಗೂ .ಅ. :** ಅದೆಲ್ಲಾ ಕಲ್ತ್‌ತ್‌ಲ್ಲೆ. ಸುಮ್ಮನೆ ಕುದ್ದ್ ಕಂಡ್ ಇರ್ತಾಕನ ಹೇಳ್ದೆ.

**ಸೀತಮ್ಮತ್ತೆ :** ಆತ್ ಅತ್ತಿಗೆ ನಾವ್ ಇನ್ನ್ ಹೊರ್ಡ್ತವೆ. ಬಸ್ಸ್ ಬಾಕೆ ಆತ್.

**ಗೂ .ಅ. :** ನಾನೂ ತೋಡು ವರೆಗೆ ಬನ್ನೆ. ಯಾಕೆತೇಳ್ರೆ ನೆಂಟ್ರ್‌ನ ನೀರ್ ದಾಟುವವರೆಗೆ ಕಳ್ಸೊಕುತ ಹಿರಿಯವ್ರ ಹೇಳ್ತಿದ್ದೊ.

ಇದರ್ನ ಕೊ. ಗೌ. ಮ. ಒಕ್ಕೂಟದ ಸದಸ್ಯರ್ ನಡ್ಸಿದ ಕಾರ್ಯಕ್ರಮದ ವೈವಿಧ್ಯತೆಗಳ್ಗೆ ಇದೊಂದು ಸಣ್ಣ ಮಾತುಕತೆನ ಸುರುನ ಸಾರಿಗೆ ಹಾಕ್ಯೊಳೊ. ಇದರ್ನ ಕೇಳ್ದವು ಒಳ್ಳ ಅಭಿಪ್ರಾಯಗಳ್ನ ಕೊಡುದರೊಟ್ಟಿಗೆ 10 ನಿಮಿಷದ ಅರೆಭಾಷೆಯ ಒಳ್ಳ ತೂಕದ ವಿಷಯಗಳ್ನ ಬರ್ದ್ ನಮಗೆ ಕಳ್ಸಿರೆ ನಾವ್ ಅದರ್ನ ಪ್ರಸಾರ ಮಾಡ್ಸಿಕೆ ಪ್ರಯತ್ನ ಪಟ್ಟವೆ. ಇದರ್ನ ಬರ್ದೊವು ಬೈತಡ್ಕ ಜಾನಕಿ ಸಹಕರಿಸಿದವು ಹಿರಿಯವಾದ ಬೈತಡ್ಕ ದೇವಮ್ಮ ಮತ್ತೆ ಪಂಜಿಪಳ್ಳ ಇಂದ್ರಾಕ್ಷಿ ಅಕ್ಕನವು.

---

ಕಡುಕೋಪ ಬಂದಾಗ ತಡಕೊಂಡವನೇ ಜಾಣ.

# ಗೌಡ ಸಮಾಜದ ಮಕ್ಕಳ ಬಾಲ್ಯ ವಿಧಿಗಳು

ಲೇಖಕರು : ಶ್ರೀ ಎಂ. ಗಂಗಾಧರ, ಬಿ.ಎ., ಬಿ.ಇಡಿ.,
ಮಂಡೆಕೋಲು, ಸುಳ್ಯ (ದ.ಕ.)

ಶ್ರೀ ಎಂ. ಗಂಗಾಧರನವರು ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡು ಹೈಸ್ಕೂಲು ಸುಳ್ಯದಲ್ಲಿ ನಿವೃತ್ತ ಅಧ್ಯಾಪಕರಾಗಿದ್ದಾರೆ. ಇವರಿಗೆ ವಿದ್ಯಾರ್ಥಿಯಾಗಿರುವಾಗಲೇ ಕವನಗಳನ್ನು ಬರೆಯುವ ಹವ್ಯಾಸವಿತ್ತು. ಇವರೊಬ್ಬ ಪ್ರಬುದ್ಧ ಲೇಖಕರಾಗಿದ್ದಾರೆ. ಇವರು ಬರೆದ "ಶಿವಕಾವ್ಯ" ಎಂಬ ಕವನ ಸಂಕಲನವು ಈ ಹಿಂದೆಯೇ ಪ್ರಕಟವಾಗಿದೆ. ಇವರು ಬರೆದ "ನೊಂದ ಹೃದಯ" ಮತ್ತು "ಸಾಹಿತ್ಯಪ್ರೇಮಿ" ಎಂಬೆರಡು ನಾಟಕಗಳು "ಕಾಡೂರ ಬಾಳು" ಎಂಬ ಕಾದಂಬರಿಯು ಪ್ರಕಟಣೆಯಾಗಿದೆ. ಸಂಗಾತಿಯಲ್ಲಿ ಶ್ರೀಯುತರ ಪರಿಯಚವಾಗಿದೆ.

ಕೊಡಗಿನ ಗೌಡ ಸಮಾಜವು ಮುಖ್ಯವಾಗಿ ಕನ್ನಡ ನಾಡಿನದು. ಈ ಸಮಾಜದವರು ಕನ್ನಡ ಭಾಷೆಯನ್ನೇ ಆಡುತ್ತಿದ್ದಾರೆ. ಇವರಲ್ಲಿ ಕೆಲವರು ಮೈಸೂರು ಕನ್ನಡವನ್ನೂ, ಕೆಲವು ಕಡೆಯವರು ಅರೆಗನ್ನಡವನ್ನೂ, ಮಂಗಳೂರಿನ ಬಳಿಯವರು ತುಳು ಭಾಷೆಯನ್ನೂ ಮಾತಾಡುತ್ತಿದ್ದಾರೆ. ಪುರಾತನ ಕಾಲದ ವರ್ಣಾಶ್ರಮ ಧರ್ಮ ಪ್ರಕಾರ ಗೌಡ ಸಮಾಜದವರು ಕ್ಷತ್ರಿಯ ವಂಶಕ್ಕೆ ಸೇರಿದರೆಂತಲೂ ಹೇಳುತ್ತಾರೆ. ಅಂತೂ ಈಗ ಅವರ ಪ್ರಧಾನ ಕಸಬು ಕೃಷಿಯೇ ಆಗಿರುವುದು.

ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕೊಡಗು ಜಿಲ್ಲೆಗಳಲ್ಲಿ ಇರುವ ಕೊಡಗು ಗೌಡ ಸಮಾಜವು ಉಳಿದೆಲ್ಲಾ ಗೌಡ ಸಮಾಜಕ್ಕಿಂತಲೂ ಮುಂದುವರಿದವರೆಂತ ಅವರ ಸಂಸ್ಕೃತಿಯಿಂದ ತಿಳಿಯಬಹುದು. ಈ ಜಾತಿಯ ಬಾಲ್ಯ ಸಂಪ್ರದಾಯಗಳನ್ನು ನಾವು ತಿಳಿಯುವುದು ಅತೀ ಅಗತ್ಯ. ಇದರಲ್ಲಿ ಹಿಂದೂ ವೈದಿಕ ತತ್ವಗಳು ಅಡಕವಾಗಿರುವುದನ್ನು ನಾವು ಕಾಣಬಹುದು.

ಗೌಡ ಜಾತಿಯ ಒಂದು ಕುಟುಂಬದಲ್ಲಿ ಒಂದು ಮಗುವು ಹುಟ್ಟಿದರೆ, ಆ ಕುಟುಂಬಕ್ಕೆ ಹದಿನಾರು ದಿನ ಸೂತಕ(ಅಪವಿತ್ರತೆ) ಇರುತ್ತದೆ. ಆ ಸಮಯದಲ್ಲಿ ಅವರ ಮನೆಯವರು ದೇವಸ್ಥಾನ ಹಾಗೂ ಭೂತಸ್ಥಾನಗಳಿಗೆ ಪ್ರವೇಶಿಸಕೂಡದು. ಅಲ್ಲದೆ ಕುಲ ದೈವಗಳಿಗೆ ನಿತ್ಯ ದೀಪಗಳನ್ನು ಉರಿಸಲೂಕೂಡದು. ಮಗುವಿನ ತಾಯಿಯು ಹೆಚ್ಚಾಗಿ ತನ್ನ ತವರು ಮನೆಯಲ್ಲಿಯೇ ಪ್ರಸವಿಸುವ ಕ್ರಮವಿದೆ. ಮಗುವು ಹುಟ್ಟಿದ ಮೇಲೆ ಏಳನೇ ದಿನ ಗ್ರಾಮದ ಮಡಿವಾಳ ಹೆಂಗಸು ಬಂದು ತಾಯಿ ಮತ್ತು ಮಗುವನ್ನು ಮೀಯಿಸಿ 'ಅಮೆ' ಎಂಬ ಶುದ್ಧಿಕ್ರಿಯೆಯನ್ನು ಮಾಡುತ್ತಾಳೆ. ದೇವಸ್ಥಾನದಿಂದ ಪುಣ್ಯನೀರನ್ನು ತಂದು ಮನೆಗೆ ಚಿಮುಕಿಸುತ್ತಾರೆ. ಮಗುವಿಗೂ ಚಿಮುಕಿಸಿ, ಮನೆಯ ಎದುರು ಇರುವ ತುಳಸಿ ಕಟ್ಟೆಯಲ್ಲಿ ಇಡುತ್ತಾರೆ. ಮಡಿವಾಳಗಿತ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡೂವರೆ ಸೇರು ಅಕ್ಕಿ, ನಾಲ್ಕು ತೆಂಗಿನಕಾಯಿ ಮತ್ತು ನಾಲ್ಕಾಣೆ ಕೊಡುತ್ತಾರೆ. ಗಂಡು ಮಗುವಾದರೆ ನಾಲ್ಕಾಣೆ ಬದಲು ಎಂಟಾಣೆ ಕೊಡುತ್ತಾರೆ. ಅದು ಆಯಾಯ ಊರಿನ ಹಳೆಯ ಸಂಪ್ರದಾಯದಂತೆ ಕೊಡುವ ಪದ್ಧತಿ. ಹದಿನಾರನೇ ದಿನ ಮಗುವನ್ನು ಮಲಗಿಸುತ್ತಾರೆ. ಆಗ ಕುಟುಂಬಸ್ಥರು ಹಾಜರಿರಬೇಕು. ಹೆಂಗಸು ತನ್ನ ತವರುಮನೆಯಲ್ಲಿದ್ದು ಬಾಣಂತಿಯಾಗಿದ್ದರೆ ತನ್ನ ಕುಟುಂಬಸ್ಥರು ಬಾರದೆ ಮಗುವನ್ನು ತೊಟ್ಟಿಲಿಗೆ ಹಾಕಬಾರದು. ಒಪ್ಪಿಗೆಯಿದ್ದಲ್ಲಿ ಹಾಕಬಹುದು. ಸಾಮಾನ್ಯವಾಗಿ ಮಗುವಿಗೆ ಅಂದೇ ನಾಮಕರಣ ಮಾಡುತ್ತಾರೆ. ತಂದೆಯ ಅನುಮತಿ ಇದ್ದರೆ ಮಗುವಿನ ಅಜ್ಜ ಅಥವಾ ಅಜ್ಜಿಯ ಹೆಸರನ್ನು ಇಡುವ ಸಂಪ್ರದಾಯ ಎಲ್ಲೆಡೆಯಲ್ಲಿಯೂ ಇದೆ. ಪಂಚಾಂಗದಲ್ಲಿರುವ ನಾಮ ನಕ್ಷತ್ರದ ಆಧಾರದಿಂದಲೂ ಹೆಸರನ್ನು ಇಡುವರು. ಸಾಧಾರಣ ನಲ್ವತ್ತು ದಿನ ಕಳೆದ ಬಳಿಕ ಬಾಣಂತಿಯನ್ನು ಶುಭ ಸ್ನಾನ ಮಾಡಿಸಿ ದೇವಸ್ಥಾನಕ್ಕೆ ಕರಕೊಂಡು ಹೋಗುತ್ತಾರೆ. ಆ ಬಳಿಕ ತವರು ಮನೆಯಿಂದ ಗಂಡನ ಮನೆಗೆ ತೊಟ್ಟಿಲು ಮಗುವನ್ನು ಕರಕೊಂಡು ಹೋಗುತ್ತಾರೆ. ಆಗ ಮಗುವಿನ ತಂದೆಯ ಮನೆಯಿಂದ ಯಾರಾದರೂ ಹೆಂಗಸರು ಬರಬೇಕು.

ತೊಟ್ಟಿಲು ಮಗುವನ್ನು ಮನೆಗೆ ತಂದಾಗ, ಅಲ್ಲಿ ದೀಪ ದೇವರಿಗೆ ಉರಿಸಿಟ್ಟು, ಅರಿಸಿನ ನೀರನ್ನು ತಯಾರಿಸಿ ಮಗುವಿನ ತಾಯಿ ಪಾದಗಳ ಪಾರ್ಶ್ವಗಳಿಗೆ ದೃಷ್ಟಿ ತೆಗೆಯುವ ಬಗ್ಗೆ ಅಲ್ಲಿನ ಕುಟುಂಬದ ಹೆಂಗಸರಲ್ಲಿ ಒಬ್ಬಳು ಹೊಯ್ಯುತ್ತಾಳೆ. ಆಮೇಲೆ ಮನೆಯ ಯಜಮಾನನು ತೊಟ್ಟಿಲನ್ನು ಹಿಡಿದುಕೊಂಡು ಮನೆಯೊಳಗೆ ಕೊಂಡು ಹೋಗುವನು.

ಅನ್ನ ಪ್ರಾಶನ ವಿಧಿಯನ್ನು ಮಗುವಿಗೆ ಆ ವರ್ಷದ ದಿನ ಮಾಡುತ್ತಾರೆ. ಅಷ್ಟರತನಕ ಅಕ್ಕಿಯ ಆಹಾರವನ್ನು ಮಗುವಿಗೆ ಉಣ್ಣಿಸುವುದಿಲ್ಲ. ಸಾಧಾರಣ ನಾಲ್ಕು ವರ್ಷ ಕಳೆದ ಬಳಿಕ ಮಗುವಿನ ಕರ್ಣಭೇದ ಶಾಸ್ತ್ರವನ್ನು ಮಾಡುತ್ತಾರೆ. ಹೆಚ್ಚಾಗಿ ಊರಿನ ಅಕ್ಕಸಾಲಿಗ (ಚಿನಿವಾರ) ನಿಂದ ಕೊಡಂಗೆ ಎಂಬ ಉಂಗುರಾಕೃತಿಗೆ ಚಿನ್ನದ ಕಟ್ಟಿಯನ್ನು ಮಾಡಿಸುತ್ತಾರೆ. ಅಕ್ಕಸಾಲಿಗನು ಅದರ ಒಂದು ಬದಿಯನ್ನು ಚೂಪಾಗಿ ಮಾಡಿ ಇಟ್ಟಿರುತ್ತಾನೆ. ಆಮೇಲೆ ಗಣಪತಿ ದೇವರಿಗೆ ಅಕ್ಕಿ ತೆಂಗಿನ ಕಾಯಿಯನ್ನು ಮಗುವಿನ ತಂದೆಯು ಇಡುತ್ತಾನೆ. ಆಮೇಲೆ ಅಕ್ಕಸಾಲಿಗನು ಕಿವಿಯನ್ನು ಚುಚ್ಚಿ, ಕೊಡಂಗೆಯನ್ನು ಇಕ್ಕುಳದಿಂದ ಮಡುಚಿ ಸರಿಪಡಿಸುವನು. ಅಕ್ಕಿ ತೆಂಗಿನ ಕಾಯಿ ಹಾಗೂ ಕಾಣಿಕೆಯ ಹಣವನ್ನು ಅಕ್ಕಸಾಲಿಗನು ತೆಗೆದುಕೊಂಡು ಹೋಗುತ್ತಾನೆ. ಕೆಲವು ರಕ್ಷಕರು ಕಿವಿಯ ನೋವು ವಾಸಿಯಾದ ಕೂಡಲೇ ಬೇರೆ ಕುಂಡಲವನ್ನು ಮಾಡಿಸಿ ಮಗುವಿನ ಕಿವಿಗೆ ತೊಡಿಸುತ್ತಾರೆ.

ಪ್ರಾಚೀನ ಕಾಲದಲ್ಲಿ ಯಜ್ಞೋಪವೀತ ಧಾರಣೆಯ ಕ್ರಮ ಗೌಡ ಸಮಾಜಲ್ಲಿಯೂ ಇದ್ದಿತೆಂದು ಹಿಂದಿನವರು ಹೇಳುತ್ತಾರೆ, ಕ್ರಮೇಣ ಕೃಷಿ ವ್ಯವಹಾರ ಯುದ್ಧ ಕಾರ್ಯಗಳಿಗೆ ತೊಂದರೆ ಯಾದುದರಿಂದ ಅದನ್ನು ಧರಿಸುವುದನ್ನು ಬಿಟ್ಟರು. ಕ್ರಮೇಣ ಆ ಸಂಪ್ರದಾಯವು ನಿಂತುಹೋಯಿತು ಹಾಗೂ ಅದು ಅಗತ್ಯ ವಿಲ್ಲವೆಂಬುದನ್ನು ಹಿರಿಯರು ಸ್ಪಷ್ಟವಾಗಿ ಮನಗಂಡು ಅದನ್ನು ಬಿಟ್ಟು ಬಿಟ್ಟರು.

ಅಳುವದೂ ಮುಖವೇ, ನಗುವದೂ ಮುಖವೇ.

ಸಾಧಾರಣ ೧೬ನೇ ವರ್ಷ ಪ್ರಾಯದಲ್ಲಿ ಗಂಡು ಹುಡುಗನಿಗೆ ಊರಿನ ಕ್ಷೌರಿಕನನ್ನು ಕರಿಸಿ, ಕ್ಷೌರವಿಧಿ ಮಾಡಿ ಕ್ಷೌರ ಕತ್ತಿಯಿಂದ ತಲೆಯನ್ನು ಬೋಳಿಸುವ ಅಥವಾ ತಲೆಯ ಬದಿಯನ್ನು ಸರಿಪಡಿಸುವ ವ್ಯವಸ್ಥೆಯನ್ನು ಹಿರಿಯರು ಮಾಡಿಸುತ್ತಾರೆ. ಆಗಲೂ ದೇವರಿಗೆ ಇಟ್ಟ ಅಕ್ಕಿ ತೆಂಗಿನಕಾಯಿಗಳನ್ನು ಕ್ಷೌರಿಕನು ಕೊಂಡುಹೋಗುತ್ತಾನೆ.

ಆದರೆ ಈ ಸಂಪ್ರದಾಯದವರು ಕೆಲವು ಹಳ್ಳಿಗಳಲ್ಲಿ ಮಾತ್ರ ಈಗ ಇದ್ದು ಕೆಲವರು ಆಚರಿಸುತ್ತಿಲ್ಲ.

ಹೆಣ್ಣು ಮಗು ಸಾಧಾರಣ ಹದಿಮೂರು ಯಾ ಹದಿನೆಂಟು ವರ್ಷ ಪ್ರಾಯದಲ್ಲಿ ರಜಸ್ವಲೆಯಾಗುವಳು. ಇಂತಹ ಕನ್ನಿಕೆಯನ್ನು ಹೊಲೆ ಕಂಡವಳು ಯಾ ಮದುಮಗಳಾದವಳು ಎಂದು ಹೇಳುವುದುಂಟು. ಆ ಹುಡುಗಿಯನ್ನು ಮನೆಯೊಳಗೆ ಬಿಡದೆ ಒಂದು ಕೊಟ್ಟಿಗೆ ಅಥವಾ ಪ್ರತ್ಯೇಕ ಕೊಠಡಿಯಲ್ಲಿ ಕುಳ್ಳಿರಿಸುತ್ತಾರೆ. ಪ್ರಥಮ ರಜಸ್ವಲೆಯಾದ ಇಂತಹ ಕನ್ನಿಕೆಯನ್ನು ಕುಟುಂಬದ ಕೆಲವು ಹೆಂಗಸರು ಕೂಡಿ ಮೀಯಿಸುತ್ತಾರೆ. ಆಮೇಲೆ ಮಡಿವಾಳ ಕೊಟ್ಟ ಮಡಿಬಟ್ಟೆ ಚೂರಿನೊಂದಿಗೆ ಅವಳ ತಲೆಗೆ ನೀರನ್ನು ಹೊಯ್ಯುತ್ತಾರೆ. ಹೆಚ್ಚಾಗಿ ಈ ಕಾರ್ಯಕ್ರಮಕ್ಕೆ ಊರಿನ ಮಡಿವಾಳ ಹೆಂಗಸು ಬರಲೇಬೇಕಾಗಿದೆ. ಆ ಬಳಿಕ ಶುಭ ಮುಹೂರ್ತದಂದು 'ಋತುಶಾಂತಿ' ಎಂಬ ಉತ್ಸವವನ್ನು ಆಚರಿಸುತ್ತಾರೆ.

ಋತುಶಾಂತಿ ಕ್ರಮವನ್ನು ಆಚರಿಸುವುದು, ರಜಸ್ವಲೆಯಾದ ಕನ್ನಿಕೆಯನ್ನು ಮೀಯಿಸಿ, ಒಳ್ಳೆ ಸೀರೆ ರವಿಕೆಗಳನ್ನು ತೊಡಿಸಿ ಅಂಗಳದಲ್ಲಿ ನಿಲ್ಲಿಸಿ ವಿಧಿವತ್ತಾಗಿ ದೇವರಿಗೆ ಕೈಮುಗಿಸುತ್ತಾರೆ. ಆ ಬಳಿಕ ಒಂದು ಕಡೆ ಮಣೆಯ ಮೇಲೆ ಕುಳ್ಳರಿಸುತ್ತಾರೆ. ಈ ಕಾರ್ಯಕ್ರಮಗಳನ್ನೆಲ್ಲಾ ಹೆಚ್ಚಾಗಿ ಹೆಂಗಸರೇ ನಡೆಯಿಸುತ್ತಾರೆ. ನಂತರ ಬಂಧುಗಳು ಅವಳ ಕೈಯಲ್ಲಿ ಉಡುಗೊರೆ ಮತ್ತು ಹಣವನ್ನು ಪ್ರೀತಿಯಿಂದ ಕೊಡುತ್ತಾರೆ. ಆಮೇಲೆ ಔತಣವನ್ನು ಎಲ್ಲರೂ ಉಣ್ಣುತ್ತಾರೆ. ಇಂತಹ ಔತಣದಲ್ಲಿ ಪಾಯಸ, ಅವಲಕ್ಕಿ, ಕೆಲವು ಪಲ್ಯ ಪದಾರ್ಥಗಳು ಮಾತ್ರ ಇರುತ್ತವೆ.

ಸಾಮನ್ಯವಾಗಿ ಋತುವಾಗದ ಕನ್ನಿಕೆಯನ್ನು ವಿವಾಹ ಮಾಡಿಕೊಡುವುದಿಲ್ಲ. ಸಾಮಾನ್ಯ ಎರಡು ಯಾ ಮೂರು ವರ್ಷ ಕಳೆದ ಬಳಿಕ ಅಂದರೆ ಪ್ರೌಢೆಯಾದ ತರುಣಿಯನ್ನು ವಿವಾಹ ಮಾಡಿಕೊಡುವ ಸಂಪ್ರದಾಯವು ಈಗ ಎಲ್ಲೆಡೆಗಳಲ್ಲಿಯೂ ಇದೆ.

ಪ್ರಪಂಚದ ಅತೀ ಪ್ರಾಚೀನ ಧರ್ಮವಾದ ವೈದಿಕ ಯಾ ಹಿಂದೂ ಧರ್ಮದ ವಿಧಿ ನಿಯಮಗಳೆ ಬ್ರಾಹ್ಮಣ ಪಂಗಡದಷ್ಟು ಗೌಡ ಸಮಾಜದಲ್ಲಿ ಕಂಡು ಬಾರದಿದ್ದರೂ ಹೆಚ್ಚಿನ ನಿಯಮಗಳು ಪಾಲಿಸಲ್ಪಡುತ್ತವೆ. ಇದಕ್ಕೆ ಮೇಲಿನ ಸಂಪ್ರದಾಯಗಳೇ ನಿದರ್ಶನವಾಗಿವೆ. ಹಿಂದಿನ ಸಂಪ್ರದಾಯಗಳು ನಮ್ಮ ನಾಡಿನ ಹಾಗೂ ಧರ್ಮದ ಸಂಸ್ಕೃತಿಗಳನ್ನು ಮರೆಯುವುದು ಎಂದಿಗೂ ಸರಿಯಲ್ಲ. ದೇಶಿ ಸಂಸ್ಕೃತಿಗಳನ್ನು ಮರೆಯುವುದು ಎಂದಿಗೂ ಸರಿಯಲ್ಲ. ಪರದೇಶಿ ಸಂಸ್ಕೃತಿಗಳಿಗೆ ಮಾರು ಹೋಕ್ಕು, ಕೆಲವು ಸಂಪ್ರದಾಯಗಳನ್ನು ಹಿಂದೂ ಸಮಾಜದ ಈಗಿನ ಪುರುಷರು ಆಚರಿಸುತ್ತಿಲ್ಲ. ಇದು ಬಹಳ ಬೇಸರದ ಸಂಗತಿ. ಇದು ಸಾಂಸ್ಕೃತಿಕ ದಾಸ್ಯವನ್ನು ಸೂಚಿಸುತ್ತದೆ. ಪರರನ್ನು ನಾವು ಯಾವಾಗಲೂ ಅಂಧ ರೀತಿಯಲ್ಲಿ ಅನುಸರಿಸಬಾರದು. ಉಚಿತ ಕ್ರಮಗಳನ್ನು ಮಾತ್ರ ನಾವು ಇತರರಿಂದ ಕಲಿಯಬಹುದು. ಅಯೋಗ್ಯ ಹಾಗೂ ಅನಾವಶ್ಯಕದ ಆಚಾರಗಳಿದ್ದರೆ ಅವುಗಳಿಗೆ ಹೊಸ ರೂಪವನ್ನು ಕೊಡಬೇಕು.

ಕಿವಿಯಲ್ಲಿ ಆಭರಣವನ್ನು ಧರಿಸುವುದು ಹಿಂದೂ ಧರ್ಮದ ಸಂಕೇತವಲ್ಲದೆ ಅದರಿಂದ ಶರೀರಕ್ಕೆ ಶಾಂತಿ ಹಾಗೂ ತೇಜಸ್ಸು ಬರುತ್ತದೆ. ಬಂಗಾರದ ಮೇಲಿನಿಂದ ಹಾದು ಬಿದ್ದ ನೀರು ಶರೀರಕ್ಕೆ ಹಿತಕಾರಿ ಎಂತ ವಿಜ್ಞಾನಿಗಳೂ ಹೇಳುತ್ತಿದ್ದಾರೆ. ಹೀಗೆ ಹಲವು ಬಾಲ್ಯವಿಧಿಗಳನ್ನು ಗೌಡ ಸಮಾಜದವರು ಆಚರಿಸುತ್ತಿರುವುದು ಯಥೋಚಿತವಾಗಿದೆ.

---

## ಕುಶಾಲಗನರದಲ್ಲಿ ಅಭಿನಂದನಾ ಕಾರ್ಯಕ್ರಮ

ವರದಿ : ಕುಂಭಗೌಡನ ಸೋಮಣ್ಣ

ಕುಶಾಲ ನಗರ ಹೋಬಳಿಯಿಂದ ಜಿಲ್ಲಾ ಪಂಚಾಯಿತ್ ಮತ್ತು ತಾಲ್ಲೋಕು ಪಂಚಾಯಿತ್‌ಗೆ ನೂತನವಾಗಿ ಆಯ್ಕೆಯಾದ ಜನಾಂಗದ ಸದಸ್ಯರುಗಳಿಗೆ ಅಭಿನಂದನಾ ಕಾರ್ಯ ಕ್ರಮವನ್ನು ದಿನಾಂಕ 13-8-2000 ದ ಭಾನುವಾರದಂದು ಕುಶಾಲನಗರ ಗೌಡ ಸಮಾಜದ ವತಿಯಿಂದ ಗೌಡ ಸಮಾಜದಲ್ಲಿ ಏರ್ಪಡಿಸಲಾಗಿತ್ತು.

ಸ್ಥಳೀಯ ಸಮಾಜದ ಅಧ್ಯಕ್ಷರಾದ ಕೋರನ ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಈ ಕೆಳಗಿನವರನ್ನು ಅಭಿನಂದಿಸಲಾಯಿತು.

**ಸದಸ್ಯರು ಕೊಡಗು ಜಿಲ್ಲಾ ಪಂಚಾಯಿತ್**

**ಶ್ರೀಮತಿ ಕೆ.ಪಿ. ಚಂದ್ರಕಲಾರವರು,** ಅಧ್ಯಕ್ಷರು

**ಶ್ರೀ ವಿ.ಪಿ. ಶಶಿಧರರವರು,** ಸದಸ್ಯರು

**ಕೋರನ ಶ್ರೀಮತಿ ಗಂಗಮ್ಮ ಪೂಣಚ್ಚನವರು,** ಸದಸ್ಯರು

ತಾಲ್ಲೂಕು ಪಂಚಾಯಿತ್ ಸೋಮವಾರ ಪೇಟೆ

**ಮಾವೋಜಿ ಶ್ರೀ ಗಣೇಶ್‌ರವರು,** ಸದಸ್ಯರು

**ಶ್ರೀ ಎಂ. ಎ. ಪುಟ್ಟಸ್ವಾಮಿಯವರು,** ಸದಸ್ಯರು

**ಕುಂಜಿಲನ ಶ್ರೀ ಮಂಜುನಾಥರವರು,** ಸದಸ್ಯರು

ಜನಾಂಗದ ಮೊದಲ ಮಹಿಳೆ ಜಿಲ್ಲಾ ಪಂಚಾಯಿತ್ ಅದ್ಯಕ್ಷರಾದ ಶ್ರೀಮತಿ ಕೆ. ಪಿ. ಚಂದ್ರಕಲಾರವರು ಸಭೆಯಲ್ಲಿ ಮಾತನಾಡುತ್ತಾ, ನಾನು ಜಿಲ್ಲಾ ಪಂಚಾಯಿತ್ ಅಧ್ಯಕ್ಷೆಯಾದ ಪ್ರಥಮದಲ್ಲಿಯೇ ನನ್ನ ಪರಿಚಯವನ್ನು ಕೊಡಗು ಸಂಗಾತಿಯಲ್ಲಿ ಪ್ರಕಟಿಸಿದ ಬಗ್ಗೆ ಸಂತೋಷವನ್ನು ವ್ಯಕ್ತ ಪಡಿಸುತ್ತಾ ಸಂಗಾತಿಗೆ ವಂದನೆಗಳನ್ನು ತಿಳಿಸಿದರು.

ಅಂದಿನ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನಾಂಗ ಬಾಂದವರು ಆಗಮಿಸಿದ್ದರು. ವೇದಿಕೆಯಲ್ಲಿದ್ದ ಆಡಳಿತ ಮಂಡಳಿಯವರು ಹಾಗೂ ಕಾನೂನು ಸಲಹೆಗಾರರಾದ ತೆಕ್ಕಡೆನೇಮಿರಾಜ್‌ರವರು ಸದಸ್ಯರನ್ನು ಸಭೆಗೆ ಪರಿಚಯಿಸಿ ಅಭಿನಂದಿಸಿದರು.

ಕಾರ್ಯದರ್ಶಿ ಕೊಡಗನ ಶ್ರೀ ರಮೇಶರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

---

**ಕಷ್ಟ ಮನುಷ್ಯನಿಗೆ ಬಾರದೆ ಮರಕ್ಕೆ ಬರುತ್ತದೊ ?**

## ಹೊಸೊಕ್ಲು ಚಿಣ್ಣಪ್ಪನವರ ಸಾಧನೆಗಳು



ಶ್ರೀಯುತ ಚಿಣ್ಣಪ್ಪನವರು ಪ್ರಥಮ ಪಿ.ಯು.ಸಿ. ಗೋಣಿಕೊಪ್ಪ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ 1984ನೇ ಇಸವಿ ಆಗಸ್ಟ್ 21ರಂದು ವೀರಾಜಪೇಟೆಯಲ್ಲಿ ಸೇನೆಗೆ ಆಯ್ಕೆ ನಡೆಯುತ್ತಿದ್ದು, ಆ ಆಯ್ಕೆಯಲ್ಲಿ ಅಮ್ಮತ್ತಿಯಿಂದ ವೀರಾಜಪೇಟೆಗೆ ರಸ್ತೆ ಓಟದಲ್ಲಿ ಪ್ರಥಮ ಸ್ಥಾನವನ್ನು ಪಡೆದರಿಂದ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ಸೇನೆಗೆ ಆಯ್ಕೆಗೊಂಡರು. ಹಾಗೆಯೇ ಸೇನೆಗೆ (ಎಂ.ಆರ್.ಸಿ)ಗೆ ಭರ್ತಿಯಾಗಿ ಊಟಿ ವೆಲ್ಲಿಂಗ್ಟನ್‌ನಲ್ಲಿ ಟ್ರೈನಿಂಗ್ ಮುಗಿಸಿ ಬಾಕ್ಸಿಂಗ್, ಹ್ಯಾಂಡ್‌ಬಾಲ್ ಮತ್ತು ಪುಟ್‌ಬಾಲ್‌ನಲ್ಲಿ ಮುಂದುವರೆದ ಇವರು ನಂತರ ಕ್ರಾಸ್‌ಕಂಟ್ರಿಯನ್ನು ತನ್ನ ಮುಂದಿನ ಗುರಿಯಾಗಿಟ್ಟುಕೊಂಡು ಅಲ್ಲಿಂದ ಇವರು ಮೆರಾಥಾನ್‌ನಲ್ಲಿ ಮುಂದುವರೆದು ಒಂದೊಂದು ದಾಖಲೆಯನ್ನು ತಮ್ಮದಾಗಿಸಿಕೊಂಡರು. ಇವರು ದಿನಾಂಕ 22 ಮೇ ತಿಂಗಳು 1999ರಂದು ಸಿಂಗತ್ತೂರು ಗ್ರಾಮದ ಕುದುಪಜೆ ಹಿರಣ್ಣಯ್ಯ ಹಾಗೂ ಅಮರಾವತಿ ದಂಪತಿಗಳ ಎರಡನೆಯ ಪುತ್ರಿಯಾದ ಗಾಯನ ಎಂಬವಳನ್ನು ವಿವಾಹವಾದರು. ಈಗ ಇವರು ಹದಿನೈದು ವರ್ಷ ಸರ್ವಿಸನ್ನು ಮುಗಿಸಿ ಹದಿನಾರನೇಯ ವರ್ಷ ಮುಂದುವರಿಸುತ್ತಿದ್ದಾರೆ. ಇವರಿಗೆ ಸೇನೆಯಿಂದ Chief of the Army Staff Award ಎಂಬ ಬಿರುದನ್ನು ಎರಡು ಸಲ ನೀಡಿರುತ್ತಾರೆ. ಇವರು ಅರೆಭಾಷೆ ಗೌಡರ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿರುವ ಇವರಿಗೆ ನಮ್ಮ ಕುಲದೇವರು ಶ್ರೀ ವೆಂಕಟರಮಣನ ಮತ್ತು ಕಾವೇರಿ ಮಾತೆಯ ಅನುಗ್ರಹ ಸದಾ ಇದ್ದು ಇನ್ನು ಹೆಚ್ಚಿನ ಮೇಲ್ಮಟ್ಟ ಪದವಿಗೇರಲಿ ಎಂದು ಹಾರೈಸೋಣ

**ಹೊಸೋಕ್ಲು ಟಿ. ಗೋಪಾಲ (ರಾಜ)**

---

### ಹೊಸೊಕ್ಲು ಚಿಣ್ಣಪ್ಪನವರ ಸಾಧನೆಗಳು

ವಿರಾಜಪೇಟೆ ತಾ|| ಸಿದ್ದಾಪುರ ಗುಹ್ಯ ಗ್ರಾಮದಲ್ಲಿ ಹೊಸೊಕ್ಲು ಅಪ್ಪಚ್ಚು ಮತ್ತು ಪೊನ್ನಮ್ಮನವರ ಪುತ್ರ ಚಿಣ್ಣಪ್ಪ ಇವರು ಕ್ರಾಸ್‌ಕಂಟ್ರಿ ಹಾಗೂ ಮೆರಾಥಾನ್‌ನ ದಾಖಲೆಗಳು, ಪರಿಚಯ ಸಂಗಾತಿಯಲ್ಲಿ ಈ ಹಿಂದೆಯೇ ಬಂದಿದೆ.

| | |
|---|---|
| 12-2-1997 | ಆಲ್ ಇಂಡಿಯಾ ಆರ್ಮಿ ಕ್ರಾಸ್ ಕಂಟ್ರಿ ಮೀಟ್ ಪತಾನ್‌ಕೋಟ್ (ಪಂಜಾಬ್) ಮೂರನೇ ಸ್ಥಾನ. ಕಂಚಿನ ಪದಕ. |
| 1-3-1997 | ನ್ಯಾಶನಲ್ ಪೆಡರೇಷನ್ ಕಪ್ ಕ್ರಾಸ್ ಕಂಟ್ರಿ ಗಯಾ (ಬಿಹಾರ್) ಹತ್ತನೇಯ ಸ್ಥಾನ. |
| 12-8-1997 | ಆಲ್ ಇಂಡಿಯಾ ಆರ್ಮಿ ಮೆರಾಥಾನ್ 42 ಕಿ.ಮಿ. ಹೈದರಾಬಾದ್ (ಆಂಧ್ರ ಪ್ರದೇಶ) ನಾಲ್ಕನೇಯ ಸ್ಥಾನ. |
| 19-11-1997 | ರಾಷ್ಟ್ರೀಯ ಇಂದಿರಾ ಮೆರಾಥಾನ್ ಅಲಹಬಾದ್ (ಉತ್ತರಪ್ರದೇಶ) ಏಳನೇಯ ಸ್ಥಾನ (2,500 cash Award) 15 ರಾಷ್ಟ್ರಗಳು ಬಾಗವಹಿಸಿದ್ದು. |
| 21-12-1997 | ಪುಣೆ ಅಂತರರಾಷ್ಟ್ರೀಯ ಮೆರಾಥಾನ್ ಪುಣೆ (ಮಹಾರಾಷ್ಟ್ರ) ಹತ್ತನೇಯ ಸ್ಥಾನ (2,000 Award) |
| 5-6-1998 | ಆಲ್ ಇಂಡಿಯಾ ಆರ್ಮಿ ಕ್ರಾಸ್ ಕಂಟ್ರಿಮೀಟ್ ರಾಣಿಕೇತ್ (ಉತ್ತರಪ್ರದೇಶ) ಮೂರನೇಯ ಸ್ಥಾನ ಕಂಚಿನ ಪದಕ |
| 8-8-19998 | ರಾಷ್ಟ್ರೀಯ ಕಣ್ಣನ್ ದೇವನ್ ಮೆರಾಥಾನ್ ತಿರುವನಾಂತಪುರ (ಕೇರಳ) ಮೂರನೇಯ ಸ್ಥಾನ ಕಂಚಿನ ಪದಕ. (25,000 cash Award) |
| 11-10-1998 | ಆಲ್ ಇಂಡಿಯಾ ಆರ್ಮಿ ಮೆರಾಥಾನ್ ಬರೋಡ (ಗುಜರಾತ್) ಒಂದನೇಯ ಸ್ಥಾನ ಚಿನ್ನದ ಪದಕ |
| 19-11-1998 | ರಾಷ್ಟ್ರೀಯ ಇಂದಿರಾ ಮೆರಾಥಾನ್ ಅಲಹಬಾದ್ (ಉತ್ತರ ಪ್ರದೇಶ) ಆರನೇಯ ಸ್ಥಾನ (2,500 cash Award) |
| 10-12-1998 | ಸರ್ವಿಸಸ್ ಮೆರಾಥಾನ್ ಹೈದರಬಾದ್ (ಆಂದ್ರ ಪ್ರದೇಶ) ಎಂರಡನೇಯ ಸ್ಥಾನ ಬೆಳ್ಳಿಯ ಪದಕ. |
| 22-11-1998 | ಸರ್ವಿಸಸ್ ಕ್ರಾಸ್ ಕಂಟ್ರಿ ಭೂಪಾಲ್ (ಮಧ್ಯ ಪ್ರದೇಶ) ಐದನೇಯ ಸ್ಥಾನ. |
| 17-1-1999 | ಪುಣೆ ಅಂತರರಾಷ್ಟ್ರೀಯ ಮೆರಾಥಾನ್ ಪುಣೆ (ಮಹಾರಾಷ್ಟ್ರ) ಮೂರನೇಯ ಸ್ಥಾನ ಕಂಚಿನ ಪದಕ (25,000 cash Award) 30,000 ಜನ ಭಾಗವಹಿಸಿದ್ದು. |
| 2-10-1999 | ಆಲ್ ಇಂಡಿಯಾ ಆರ್ಮಿ ಮೆರಾಥಾನ್ ಚಾಚಾ ನಗರ (ಬಿಹಾರ್) ಒಂದನೇ ಸ್ಥಾನ ಚಿನ್ನದ ಪದಕ, (2 ಗಂಟೆ, 27ಸೆಕೆಂಡ್ಸ್) |
| 22-10-1999 | ಆಲ್ ಇಂಡಿಯಾ ಕ್ರಾಸ್ ಕಂಟ್ರಿ ಮೀಟ್. ಹೈದರಬಾದ್ (ಆಂಧ್ರಪ್ರದೇಶ) ಎರಡನೇಯ ಸ್ಥಾನ ಬೆಳ್ಳಿಯ ಪದಕ. |
| 19-11-1999 | ರಾಷ್ಟ್ರೀಯ ಇಂದಿರಾ ಮೆರಾಥಾನ್ ಅಲಹಾಬಾದ್ (ಉತ್ತರ ಪ್ರದೇಶ) ಒಂದನೇ ಸ್ಥಾನ ಚಿನ್ನದ ಪದಕ (51,000 cash Award) |
| 10-12-1999 | ಸರ್ವಿಸಸ್ ಮೆರಾಥಾನ್ ಅಲಹಾಬಾದ್ (ಉತ್ತರ ಪ್ರದೇಶ) ಒಂದನೇಯ ಸ್ಥಾನ ಚಿನ್ನದ ಪದಕ. |
| 23-1-2000 | ಪುಣೆ ಅಂತರರಾಷ್ಟ್ರೀಯ ಮೆರಾಥಾನ್ ಪುಣೆ (ಮಹಾರಾಷ್ಟ್ರ) ನಾಲ್ಕನೇಯ ಸ್ಥಾನ (25,000 cash Award) 16 ರಾಷ್ಟ್ರ ಭಾಗವಹಿಸಿದ್ದು. |
| 15-2-2000 | ರಾಷ್ಟ್ರೀಯ ಫೆಡರೇಶನ್‌ಕಪ್ ಕ್ರಾಸ್‌ಕಂಟ್ರಿ ಊಟಿ (ತಮಿಳಿನಾಡು) ಮೂರನೇಯ ಸ್ಥಾನ ಕಂಚಿನ ಪದಕ. |
| 27-2-2000 | ರಾಷ್ಟ್ರೀಯ ಫೆಡರೇಶನ್‌ಕಪ್ ಕ್ರಾಸ್‌ಕಂಟ್ರಿ ಊಟಿ (ತಮಿಳಿನಾಡು) ಮೂರನೇಯ ಸ್ಥಾನ ಕಂಚಿನ ಪದಕ. |
| 19-3-2000 | ವಿಶ್ವ ಕ್ರಾಸ್ ಕಂಟ್ರಿ ಪೋರ್ಚ್‌ಗಲ್ (ಯುರೋಪ್) participate. |

**18ನೇ ಪುಟಕ್ಕೆ**

# ಕೂಡು ಬೇಟೆ

ಮಲೆನಾಡಿನಲ್ಲಿ ಏನು ಹಬ್ಬ ನಡೆದರೂ ಆ ಹಬ್ಬ ಕೂಡುಬೇಟೆಗೆ ಒಂದು ನೆಪ. ಅಥವಾ ವಿರಾಮದ ಮೋಜು. ಅಲ್ಲಿನವರಿಗೆ ಕೂಡು ಬೇಟೆಯ ಹುಚ್ಚು ಅಂಥದ್ದು. ಚೆಂಗು, ರಾಜು, ಪುಟ್ಟು, ಅಣ್ಣು, ಮಾಂಕು, ಉಕ್ರ, ಬೋಜು, ಸೂರಿ, ಪಾಪುಣಿ, ಅಪ್ಪಿ- ಹೀಗೆ ಕೂಡು ಬೇಟೆಯ ಹುಚ್ಚಿನ ಜನ ಒಬ್ಬರೇ ಇಬ್ಬರೇ- ಮಡಿಕೇರಿಯ ಬಳಿ ಮದೆನಾಡಿನಲ್ಲಿ!

ಚೆಂಗು ಓಟು ಗುಂಡುಗಾರ. ಯಾವುದೇ ಪ್ರಾಣಿಯಾಗಲಿ ಅದು ಎಷ್ಟೇ ವೇಗದಿಂದ ಓಡಲಿ ಚೆಂಗು ಹೊಡೆದ ಗುಂಡು ತಪ್ಪದು. ಪ್ರಾಣಿಯ ಎತ್ತರವನ್ನು ಗಮನಿಸಿ ಅಂದಾಜು ಮಾಡಿ ಪ್ರಾಣಿ ಅಲ್ಲಿ ಇದ್ದರೆ ಇಲ್ಲಿಗೆ ಗುರಿ ಹಿಡಿದು ಓಟದ ವೇಗಕ್ಕೆ ಸರಿಯಾಗಿ ಕೋವಿ ತಿರುಗಿಸಿ ಗುಂಡು ಹಾರಿಸುವವನು. ಹಾರುತ್ತಿರುವ ಹಕ್ಕಿಯನ್ನಾಗಲಿ, ಕೋಳಿಯನ್ನಾಗಲಿ ಕಂಡರೆ ಸಾಕು ಅದಕ್ಕೂ ಗುಂಡು. ಆದ್ದರಿಂದಲೇ ಈ ಕೂಡುಬೇಟೆಗೆ ಅವನನ್ನೇ ನಾಯಕ ಅಂತ ತೀರ್ಮಾನಿಸಿದ್ದು.

ಬೋಜು ಸ್ವಲ್ಪ ಪುಕ್ಕಲು ಜನ. ಜೊತೆಗಾರರಿದ್ದಾಗ ಅವನಷ್ಟು ಧೈರ್ಯವಂತರು ಯಾರೂ ಇರಲಿಕ್ಕಿಲ್ಲ. ಒಮ್ಮೆ ಅದು ರಾತ್ರಿ ಬೇರೆ. ಕೈಯಲ್ಲಿ ಟಾರ್ಚ್ ಹಿಡಕ್ಕೊಂಡು ಎರಡಕ್ಕೆ ಕುಳಿತಿದ್ದ. ಹಾಗೇ ಕುಳಿತಿರುವಾಗ ಸದ್ದಿಲ್ಲದೆ ಒಂದು ನಾಯಿ ಇವನ ಹತ್ತಿರ ಬಂದು ಬೊಗಳಿತು. ಬೋಜು ಫಕ್ಕನೆ ಎದ್ದುಬಿಟ್ಟ. ಟಾರ್ಚ್ ಬಿಟ್ಟರೆ ಅದು ಹೊತ್ತಲೇ ಇಲ್ಲ. ಅದರ ಹಿಂದಕ್ಕೆ ತಟ್ಟಿದ, ಅಲ್ಲಾಡಿಸಿದ ಏನಾದರೂ ಟಾರ್ಚ್ ಹೊತ್ತಲಿಲ್ಲ. ಮನೆಗೆ ಬಂದು ನೋಡುತ್ತಾನೆ ತಾನು ಹೆದರಿದ ರಭಸಕ್ಕೆ ಅದರ ಬಲ್ಬ್ ಬರ್ನ್ ಆಗಿತ್ತು. ಅದಿರಲಿ, ಈ ಕೂಡು ಬೇಟೆಯಲ್ಲಿ ಇವನೂ ಇದ್ದ.

ಕೂಡು ಬೇಟೆಯ ದಿನ ಗೊತ್ತಾದರೆ ತೀರಿತು. ಹೊಗೆ ಹಿಡಿದ ದೊಗಳೆ ಸುರಾಲುಗಳು, ಕೋಟುಗಳು, ಯಾವಾಗಲೋ ಮೂಲೆಗೆಸೆದಿದ್ದ ಕೆಸರು ಮೆತ್ತಿಕೊಂಡಿದ್ದು ಒಣಗಿದ್ದ ರಬ್ಬರ್ ಬೂಟುಗಳು, ಕೆಲವರು ಒಂಟಿನಳಿಗೆ, ಕೆಲವರ ಜೋಡುನಳಿಗೆಯ ಕೋವಿಗಳು, ಮತ್ತೆ ಕೆಲವರ ಕೇಪಿನ ಕೋವಿಗಳು ಎಲ್ಲ ಹೊರ ಬಂದು ಅಣಿಯಾಗುತ್ತವೆ. ಕೆಲವರು ನಾಯಿ ಬಿಡುವುದಕ್ಕೆ, ಕೆಲವರು ಬೊಬ್ಬೆ ಹಾಕುವುದಕ್ಕೆ, ಇನ್ನು ಕೆಲವರು ಗುಂಡು ಹೊಡೆಯುವುದಕ್ಕೆ ಎಲ್ಲ ಸಿದ್ಧ. ಆ ನಾಯಿಗಳೊಂದಿಗೆ ಸೂರಿಯ ಸೊಂಟ ಮುರಿದು ಕೊಂಡ ನಾಯಿ. ಅದು ಒಚ್ಚುತ್ತ ನಡೆದರೆ ನಗುಬರುವುದು. ಆದರೆ ನಾಯಿದ್ದರೆ ನಾಯಿ ಪಾಲು ಸಿಗುತ್ತದಲ್ಲಾ? ಒಂದು ದಿನ ಪಾಪುಣಿ ಚೆಂಗುವಿನ ಮನೆಗೆ ಬಂದು 'ಅಣ್ಣಾ ಆಯ್ತುವಾರ ಬೇಟೆಗೆ ಹೋಗೋಣವಾ' ಎಂದು ಬೇಟೆಯ ಪ್ರಸ್ತಾಪ ಮಾಡಿದ. ಬೇಟೆಗಾರರನ್ನು ಕೂಡಿಸುವ ಕೆಲಸ ಪಾಪುಣಿಯದು. ಮಾಮೂಲಿಯಂತೆ ಬೇಟೆಯ ಸೂಟು ಬೂಟಿನಲ್ಲಿ ಬೇಟೆಗಾರರು ತಂತಮ್ಮ ನಾಯಿ ಕತ್ತಿ ಕೋವಿಗಳೊಂದಿಗೆ ಚೆಂಗುವಿನ ಮನೆ ತಲುಪಿದರು.

" ಈ ದಿನ ಏನಾದರೊಂದು ಬೇಟೆ ಆಗಲೇ ಬೇಕು. ಎಲ್ರೂ ಜಾಗ್ರತೆಯಿಂದಿರಬೇಕು. ಸಂಜೆವರೆಗೂ ಕಾಡಲ್ಲೇ ಇರಬೇಕು" ಇದು ಚೆಂಗುವಿನ ಆಜ್ಞೆ, ಎಲ್ಲರೂ 'ಆಗಲಿ ಆಗಲಿ' ಎಂದರು.

ಬೆಳಿಗ್ಗೆ ಸುಮಾರು ಎಂಟು ಗಂಟೆಗೆ ಮನೆ ಬಿಟ್ಟರು. ಬೇಟೆಗೆ ಹೊರಟರೋ ಇಲ್ಲೋ ನಾಯಿಗಳು ಎಗರಿ ಬಿದ್ದು ಒಂದು ಹಂದಿಯನ್ನು ಹಿಡಿದುಕೊಂಡಿದ್ದವು! ಅದು ನೆರೆಮನೆಯ ರಾಜುವಿನ ಹಂದಿ. ಹಂದಿಯನ್ನು ನಾಯಿಗಳು ಹಿಡಿದು ಜಗ್ಗಾಡುತ್ತಿವೆ. ನಾಯಿ ಬಾಯಿಂದ ಅದನ್ನು ಬಿಡಿಸುವುದಕ್ಕೆ ಸಾಕು ಸಾಕಾಯಿತು. ಅಂತೂ ಕಾಡಿನ ಕಡೆಗೆ ದಂಡು ಹೊರಟಿತು. ಕಾಲಿಗೆ ಸಿಕ್ಕಿ ಉರುಳುತಿದ್ದ ಕಲ್ಲನ್ನು ಮಿಕವೆಂದೇ ಭ್ರಮಿಸಿ ಆ ಕಲ್ಲಿನ ಹಿಂದೆ ಓಡುತ್ತ ನಿಂತು ಬೊಗಳುತ್ತ ಕೆಲವು ನಾಯಿಗಳು ಹೋಗುತ್ತಿದ್ದವು. ಇನ್ನು ಕೆಲವು ನಾಯಿಗಳು ತಮ್ಮ ಒಡೆಯನ ಕಾಲಸಂದಿಯಲ್ಲೇ 'ಬುಕ್ ಬುಕ್" ಅನ್ನುತ್ತಿದ್ದವು. ಉಕ್ರನ ನಾಯಿಯಂತೂ ಬೊಗಳಿದರೆ ಬಿದ್ದು ಹೋಗುತ್ತಿದ್ದು. ಮಾಂಸದ ಆಸೆಗೆ ಅಷ್ಟು ಲಾಚಾರಾದ ನಾಯಿಯನ್ನು ಹಿಡಿದು ತಂದು ಅದರ ಜೀವ ತಿನ್ನುತ್ತಿದ್ದ.

ಆ ಕಾಡಿನಲ್ಲಿ ಜಿಂಕೆ ಕಡವೆಗಳು ಕಡಿಮೆ. ಹಂದಿ, ಕಾಡುಕುರಿ, ಮುಳ್ಳುಹಂದಿಗಳಿರುವ ಕಾಡು. ಬೇಟೆಗಾರರ ಗಮನವೆಲ್ಲಾ ಕಾಡುಹಂದಿಯ ಕಡೆಗೇ. ಯಾಕೆಂದರೆ ಅದರ ಬೇಟೆ ಅಪಾಯದ್ದು. ಸಿಕ್ಕಿದರೆ ಮಾಂಸವೂ ಹೆಚ್ಚು. ಒಂದು ನಾಯಿ ಬಗುಳಲು ಶುರುಮಾಡಿತು. ಬೈಕದು(ಮೊದಲ ಸಾಲಿನ ಬೇಟೆಗಾರರಿಂದ ತಪ್ಪಿಸಿಕೊಂಡ ಪ್ರಾಣಿಗಳನ್ನು ಹೊಡೆಯಲು ಹಿಂದೆ ನಿಂತ ಬೇಟೆಗಾರರ ಇನ್ನೊಂದು ತಂಡದವರನ್ನು ಬೈಕಡುವಿನವರು ಎನ್ನುವರು.) ಹಂದಿನವರೂ ಜಾಗೃತರಾದರು. ಕೋವಿ ಇರುವವರು ದೂರದಲ್ಲಿದ್ದಾರೆ. ದೊಣ್ಣೆ ಬಡಿಗೆಯ ಜನ ಆ ಕಡೆ ಕಲ್ಲು ಬಡಿಗೆಗಳನ್ನು ಎಸೆಯುತ್ತಿದ್ದಾರೆ. ಯಾವುದೋ ಪ್ರಾಣಿ ಚಪ್ಪರಿಸುತ್ತಿದೆ. ಹಂದಿ ಎಂಬುದು ಖಚಿತವಾಯಿತು. 'ಸಕತ್ತಾಗಿರಬಹುದು' ಹೀಗೆ ಯೋಚಿಸುತ್ತಿರುವಷ್ಟರಲ್ಲಿ ಹಂದಿ ಪಾಪುಣಿಯ ನಾಯಿ ಮೇಲೆ ರುಮ್ಮನೆ ನುಗ್ಗಿತು. ನಾಯಿ ಸತ್ತೆನೋ ಕೆಟ್ಟೆನೋ ಎನ್ನುತ್ತಾ ಪಾಪುಣಿಯ ಕಡೆ ಓಡಿತು. ಈಗ ಹಂದಿಯ ಕಣ್ಣು ಪಾಪುಣಿಯ ಕಡೆಗೆ. ಪಾಪುಣಿಗೆ ಏನು ಎತ್ತ ತಿಳಿಯುವುದರಲ್ಲಿ ಹಂದಿ ಪಾಪುಣಿಯ ಕಾಲ ಸಂದಿಗೆ ನುಗ್ಗಿತು. ನುಗ್ಗಿದ ಹಂದಿಯ ಮೇಲೆ ಪಾಪುಣಿ! ಹಂದಿಯ ಮುಖ ಮುಂದೆ. ಪಾಪುಣಿಯ ಮುಖ ಹಿಂದೆ. ಈ ಹಿಂದು ಮುಂದಿನ ಸವಾರಿ ಅಷ್ಟು ದೂರ ಸಾಗಿತು. ಹಂದಿ ಕೂಡಲೆ ಪಕ್ಕಕ್ಕೆ ತಿರುಗಿದಾಗ ಪಾಪುಣಿ ಬಿದ್ದು ಬಿಟ್ಟ.

ಅವನು ಬಿದ್ದೊಡನೆ ಹಂದಿ ಸರ್ರನೆ ತಿರುಗಿ ತನ್ನ ಕೋರೆಯಿಂದ ತಿವಿಯಿತು. ಬಲ ಮೊಣಕಾಲಿನಿಂದ ತೊಡೆ ಬುಡದವರೆಗೆ ಸೀಳಿ ಬಿಟ್ಟಿತು. 'ಸತ್ತೇ ಸತ್ತೆ' ಎನ್ನುತ್ತ ಕಿರುಚಾಡಿ ಹಂದಿಯನ್ನು ತಳ್ಳಲು ಹೋದ. ಹಂದಿಯು ಪಾಪುಣಿಯ ಕೈಯನ್ನು ಜಬ್ಬಿ ಓಡಿಹೋಯಿತು. ಅಷ್ಟರಲ್ಲಿ ಉಳಿದವರು ನಡುಗುತ್ತ ಇವನ ಬಳಿ ಬಂದರು. ಅಪ್ಪಿ ಮತ್ತು ಮಾಂಕು ಪಾಪುಣಿಯನ್ನು ಎತ್ತಿಕೊಳ್ಳಲು ಹೋದರು. ಮತ್ತೊಮ್ಮೆ ಹಂದಿಯೇ ಬಂತೇನೋ ಎನ್ನುವಂತೆ ಪಾಪುಣಿ ಉರುಳಾಡಿ ಕಿರುಚಾಡಿ ಬಲಗೈಯಿಂದ ತಳ್ಳತೊಡಗಿದ. "ನಾವು ಮಾರಾಯ ನಾವು ನಾವು" ಎನ್ನುತ್ತ ಅವನ ಶರಟನ್ನೇ ಹರಿದು ಗಾಯಕ್ಕೆ ಸುತ್ತಿದರು. ಪಾಪುಣಿಗೆ ಪ್ರಜ್ಞೆ ಹೋಗಿತ್ತು. ಕೆಳಗೆ ಚೆಲ್ಲಿದ್ದ ಪಾಪುಣಿಯ ರಕ್ತವನ್ನು ನಾಯಿಗಳು ನೆಕ್ಕಲು ಹವಣಿಸುತ್ತಿದ್ದವು.

---

ಅನುಭವ ಇರುವಲ್ಲಿ ಅಮೃತ ಇರುತ್ತದೆ.

ಆಮೇಲೆ ಹೇಗೋ ಹೊತ್ತು ಆಸ್ಪತ್ರೆಗೆ ಸೇರಿಸಿದ ಪಾಪ್ಪುಣಿಗೆ ತಿಂಗಳಾದ ಮೇಲೆ ತೊಡೆಯ ಗಾಯ ಮಾಗಿತ್ತು. ಆದರೆ ಎಡಗೈಯ ನಾಕು ಬೆರಳುಗಳು ಹಂದಿಯ ಬಾಯಿಗೆ ಸಿಕ್ಕಿ ಮಾಯವಾಗಿದ್ದವು.

ಚೆಂಗುವಿನ ತಂಡ ಆ ವರ್ಷ ಕೂಡು ಬೇಟೆಯನ್ನು ಮಾಡಲೇ ಇಲ್ಲ. ಆ ಊರಿನ ಇನ್ನೊಂದು ತಂಡ ರಾಮುಣಿಯದು. ರಾಮುಣಿ ಭಯಂಕರ ಈಡುಗಾರ. ಆ ತಂಡದ ನಂದ, ಪೂವಯ್ಯರ ಬಳಿ ಕೋವಿಗಳಿವೆ. ಈ ಮೂರು ಜನಕ್ಕೂ ಕೂಡು ಬೇಟೆಯ ಮನಸಾಯಿತು. ಏಳೆಂಟು ಜನ ನಾಯಿ ಚೂ ಬಿಡುವವರನ್ನು ಜೊತೆ ಮಾಡಿಕೊಂಡು ಒಂದು ದಿನ ಬೇಟೆಗೆ ಹೊರಟರು.

ಕಾಡಿಗೆ ನುಗ್ಗಿದ ಸ್ವಲ್ಪ ಹೊತ್ತಿನಲ್ಲೆ ನಂದನಿಗೆ ಕಾಡುಕುರಿಯೊಂದು ಕಂಡಿತು. ಆದರೆ ಅವನ ಕೇಪಿನ ಕೋವಿ ಕೈಕೊಟ್ಟಿತು. ಕೇಪಿನ ಕೋವಿಯ ಹಣೆಬರಹವೇ ಅಷ್ಟು. ಸಿಡಿದರೆ ಅರಣ್ಯಾಧಿಕಾರಿ ಕಛೇರಿಗೆ ಕೇಳಿಸುವ ಹಾಗೆ ಸಿಡಿಯುತ್ತದೆ. ಇಲ್ಲದಿದ್ದರೆ ಹೀಗೆ. ಅಷ್ಟರಲ್ಲಿ ಕಾಡಿನ ಇನ್ನೊಂದು ಕಡೆಯಿಂದ ಗುಂಡಿನ ಸದ್ದು ಕೇಳಿ ನಂದ ಆ ಕಡೆ ಹೋದ. ಆ ಗುಂಡು ಹೊಡೆದದ್ದು ಪೂವಯ್ಯ. "ಹಂದಿ ಮಾರಯ, ಅಷ್ಟು ಚೆನ್ನಾಗಿ ಹೊಡೆದ. ಈಗ ನೋಡಿದರೆ ಎರಡು ಚೂರು ಈ ಮರಕ್ಕೆ ತಗುಲಿದೆ. ಬಾಕಿ ಎರಡು ಹಂದಿಗೆ ಬಡಿದಿರಬಹುದ. ಬಾ ಹುಡುಕೋಣ" ಎಂದ.

ಗುಂಡಿನ ಸದ್ದು ಕೇಳಿದೊಡನೆ ನಾಯಿ ಚೂ ಕೂಡಿಸುವ ತಂಡ ಓಡೋಡಿ ಬರುತ್ತಿದೆ. ಪ್ರಾಣಿಯೇನಾದರೂ ಬಿದ್ದರೆ ಮೊದಲು ಯಾರ ನಾಯಿ ಅದನ್ನು ಕಚ್ಚುತ್ತದೋ ಅದಕ್ಕೆ ಒಂದು ಪಾಲು ಹೆಚ್ಚು. ಹಾಗಾಗಿ ನಾಯಿಗಳ ಒಡೆಯರು ತಾ ಮುಂದು ನಾ ಮುಂದು ಎಂದು ಮುನ್ನುಗ್ಗಿ ಬರುತ್ತಿದ್ದಾರೆ. 'ಇಲ್ಲಿ ಬನ್ನಿ ಮಾರಯರೇ, ಇಲ್ಲಿ ನೋಡಿ' ಎಂದು ಒಬ್ಬ ಎಲ್ಲರನ್ನೂ ಕರೆದ. ಸಧ್ಯ ಅಲ್ಲಿ ಹಂದಿ ಬಿದ್ದಿದೆ ಎಂದು ಎಲ್ಲರೂ ಬಾಯಿ ನೀರು ಸುರಿಸಿ ಓಡಿದರು. ಅಲ್ಲಿದ್ದುದು ರಕ್ತದ ಕಲೆ. ಹಂದಿಯಲ್ಲ! ಹುಡುಕುತ್ತಾ ಹೋದಂತೆ ರಕ್ತದ ಕಲೆ ದಿಬ್ಬದ ಕಡೆಗೆ ಸಾಗಿತ್ತು. ದಿಬ್ಬ ಹತ್ತಿದ ಹಂದಿ ಸಿಗುವುದು ಕನಸಿನ ಮಾತೇ ಸರಿ. ಸಂಜೆಯಾಗುವವರೆಗೂ ಹುಡುಕಿ ಮುಖ ಬಾಡಿ ಮನೆಯತ್ತ ಹೊರಟರು.

ನಂದನಿಗೆ ಎಲ್ಲಿಲ್ಲದ ಕೋಪ ಬಂದು ಆ ಕೋಪ ಗುಂಡು ಸಿಡಿಯದ ತನ್ನ ಕೋವಿಯ ಮೇಲೆ ಹೋಯಿತು. ಮೊದಲು ತುಂಬಿದ್ದ ತುಂಬನ್ನು ತೆಗೆದು ಮತ್ತೆ ತುಂಬಬೇಕೆನಿಸಿತು. ಅದಕ್ಕೆ ಲೋಡ್ ಮಾಡಿ ಒಂದೆರಡು ತಿಂಗಳೇ ಕಳೆದಿರಬಹುದು. ಅಚ್ಚು ಕೋಲಿನಿಂದ ತಡೆಯನ್ನು ಎಳೆದ. ತರಿಕಲ್ಲನ್ನೂ ತೆಗೆದ. ಆದರೆ ಮದ್ದು ಮಾತ್ರ ಜಪ್ಪಯ್ಯವೆಂದರೂ ಹೊರ ಬರಲಿಲ್ಲ. ತಲೆಕೆಳಗು ಮಾಡಿ ಕುಟ್ಟಿದ. ಮದ್ದು ಬೀಳಲೇ ಇಲ್ಲ. ಕೊಳವನ್ನೇ ಒಲೆಗಿಡುವ ಯೋಚನೆ ಮಾಡಿದ. ಹೆಂಡತಿಯ 'ಗುರ ಗುರ' ಹಾಗೆ ಮಾಡಲು ಬಿಡಲಿಲ್ಲ. ಪಾತಿಯನ್ನು ಮನೆಯಲ್ಲಿಟ್ಟು ಕೊಳವನ್ನು ಹೊತ್ತು ತೋಟದತ್ತ ಹೊರಟ. ದೊಡ್ಡ ಮರದ ರೆಂಬೆಗೆ ಕೊಳವನ್ನು ಕಟ್ಟಿದ. ಗಳೆಯೊಂದಕ್ಕೆ ಬಟ್ಟೆ ಸುತ್ತಿ ಸೀಮೆಣ್ಣೆ ಸುರಿದ. ಬೆಂಕಿಯಿಟ್ಟ. ಮರದ ಮರೆಯಾಗಿ ನಿಂತ ಧಗಧಗನೆ ಉರಿಯುತ್ತಿದ್ದ ಬೆಂಕಿಯನ್ನು ಆ ಕೇಪಿನ ಮೊಳೆಗೆ ಹಿಡಿದ. ಆ ಬೌಚೂ ಗುಂಡು ಸಿಡಿಯಲಿಲ್ಲ. ಕೊಳದ ಬುಡವನ್ನೇ ಕಾಯಿಸುತ್ತೇನೆಂದು ಹಾಗೆ ಬುಡಕ್ಕೇ ಬೆಂಕಿ ಹಿಡಿದ. ಬುಡ ಬಿಸಿಯಾಗತೊಡಗಿತು. ನಾಕಾರು ನಿಮಿಷ ಆಗಿರಬಹುದು. ಬಿಸಿಯೇರಿದಂತೆ " ಉಸ್ಸೋ ಢಂ...." ಎಂದು ಸಿಡಿಯಿತು. ಆ ಸಿಡಿದ ಸದ್ದಿನೊಡನೆ ಕೊಳ ಮೂರು ತುಂಡಾಗಿ ಬಿದ್ದಿತು. ಈಗ ಪಾತಿಯೊಂದೇ ನಂದನ ಆಸ್ತಿ.

ಕೈಲ್ ಮುಹೂರ್ತ ಹಬ್ಬ ಬಂತು. ಹಬ್ಬಕ್ಕೆ ಬರೇ ಹಂದಿ ಮಾಂಸವೇ ಇದ್ದರೆ ಸಾಲದು. ಜೊತೆಗೊಂದು 'ಕಾಡು ಮಾಂಸ' ಬೇಡವೆ? ಕೈಲ್ ಮುಹೂರ್ತ ಪ್ರತೀ ವರ್ಷ ಆಗಸ್ಟ್ ತಿಂಗಳಿನ ಕೊನೆಯ ವಾರ ಮತ್ತು ಸೆಪ್ಟೆಂಬರ್ ತಿಂಗಳಿನ ಮೊದಲ ವಾರದಲ್ಲಿ ಬರುವ ಕೊಡಗಿನ ಹಬ್ಬ. ರೈತರು ದುಡಿದು, ಮಳೆಯ ಹೊಡೆತ ತಿಂದು ಸುಸ್ತಾಗಿರುತ್ತಾರೆ. ಒಂದು ಹಂತದ ಕೆಲಸ ಮುಗಿಸಿ ಕೈಗೆ ಬಿಡುವು ಕೊಟ್ಟಿರುತ್ತಾರೆ. "ಕೈ ಬಿಡುವಿನ ಹಬ್ಬ- ಕೈಲ್ ಪೊಳ್ದ್" ಬೀನ್ಸ್ ಕಾಳು, ಆಲೂಗೆಡ್ಡೆ, ಸೌತೆ, ಒಣಮೀನು ತಿಂದು ಬೇಸರಗೊಂಡ ಜನರು ಈ ಹಬ್ಬವನ್ನು ಅತ್ಯಂತ ಸಡಗರದಿಂದ ಬರಮಾಡಿಕೊಳ್ಳುತ್ತಾರೆ. ಅಂದಿನ ವಿಶೇಷ ಅಡಿಗೆ ಹಂದಿ ಮಾಂಸ, ಕಡುಬು, ಬಟ್ಟಲಿಟ್ಟು, ಕಳ್ಳು ಬೇಕೇ ಬೇಕು. "ಕಳ್ಳು ಕುಡಿಕೊಂಡು ಭಾವ ಕಳ್ಳೇ ನಂಗಡ ದೇವ" ಎಂಬ ಹಾಸ್ಯದ ಮಾತುಂಟು. ಇಂಥ ಹಬ್ಬದ ಪೂರ್ವ ಸಿದ್ಧತೆಯಲ್ಲಿ ಕೂಡುಬೇಟೆಯೊಂದು ಮೋಜಿನ ಆಟ.

ಹಂದಿಯ ಮೇಲೆ ಸವಾರಿ ಮಾಡಿದ ಪಾಪ್ಪುಣಿಗೆ ಈಗ ಬೇಟೆಯೆಂದರೆ ಮೈ ನಡುಕ. ಅವನನ್ನು ಬಿಟ್ಟು ಉಳಿದವರು ಮತ್ತೊಮ್ಮೆ ಕೂಡುಬೇಟೆಗೆ ಹೊರಟರು.

ಕಾಡಿಗೆ ನುಗ್ಗಿದ ಚೆಂಗುವಿನ ಗುಂಪು ಕಣ್ಣಲ್ಲಿ ಕಣ್ಣಿಟ್ಟು ಕಿವಿಯಲ್ಲಿ ಕಿವಿಯಿಟ್ಟು ಮೃಗದ ಬರವನ್ನು ಕಾಯುತ್ತಿದ್ದರು. ಒಂದು ಹಂದಿ ಗುರುಗುಟ್ಟಿಕೊಂಡು ಬಂದೇ ಬಿಟ್ಟಿತು. ಹಂದಿ ಜಿಗಿಯುವುದಕ್ಕೂ ರಾಜುವಿನ ಗುಂಡು 'ಢಂ' ಎನ್ನುವುದಕ್ಕೂ ಸರಿ ಹೋಯಿತು. ಬಿದ್ದ ಮರದ ಮೇಲೆ ಹತ್ತಿನಿಂತು ಗುಂಡು ಹೊಡೆದಾಗ ರಾಜು ಕೋವಿಯ ಒತ್ತಕ್ಕೆ ಮರಧ ಕೆಳಗೆ ಬಿದ್ದು ಬಿಟ್ಟ. ಪಕ್ಕದಲ್ಲಿದ್ದವರು ಅವನತ್ತ ಓಡಿದರು. ರಾಜು ಬಿದ್ದಲ್ಲಿಂದ ಬೇಗನೆ ಎದ್ದು ನಿಂತು ಯಾರಾದರೂ 'ನೋಡಿಗೀಡಿದರೋ' ಅಂತ ನೋಡಿಕೊಂಡ.

ಗುಂಡಿನ ಸದ್ದು ಕೇಳಿದ ಅಪ್ಪಿ ಓಡಿ ಹೋಗಿ ನೋಡುತ್ತಾನೆ. ಪಡ್ಡೆ ಹಂದಿ! ಪಡ್ಡೆಗಿಂತಲೂ ಚಿಕ್ಕದು. ನಾಲ್ಕೈದು ಕಿಲೋ ಆಗಬಹುದು. ಶಿಳ್ಳೆಗಳು ದೂರದಲ್ಲಿದ್ದವರನ್ನು ಕರೆದವು. ಚೆಂಗು ಹೇಳಿದ "ಇದನ್ನು ಪಾಲುಗೀಲು ಹಾಕೋದು ಬ್ಯಾಡ. ಇಲ್ಲೇ ಸುಟ್ಟು ತಿನ್ನುವ". ಈ ಮಾತಿಗೆ ಯಾರು ತಾನೆ ಪ್ರತಿ ಹೇಳಿಯಾರು? ಎಲ್ಲೂ ಚುರುಕಾಗಿ ಹಂದಿಗೆ ಕೆಸರು ಮೆತ್ತಿ ಒಣ ಕಡ್ಡಿಗಳನ್ನು ಮೇಲೆ ಹಾಕಿ ಬೆಂಕಿಯಿಟ್ಟರು. ಅರ್ಧಗಂಟೆಗೆ ಸುಮಾರಾಗಿ 'ಅಚ್‌ಕಟ್" ಆದಂತಾಯಿತು. ಜೊಲ್ಲು ಸುರಿಸು ಆ ನಾಯಿಗಳ ನಡುವೆ ಇವರು ಹಸಿ ಕಡ್ಡಿಗೆ ಮಾಂಸದ ತುಂಡುಗಳನ್ನು ಸಿಗಿಸಿಕೊಂಡು ಸುಟ್ಟರು. ಮೀದಿಗಿಟ್ಟು (ಕಾಡಿನ ದೇವರಿಗೆ ಎಡೆ) ತಿಂದು ಮುಗಿಸಿದರು. ಎಲ್ಲರೂ ರಾಜುವನ್ನು ಹೊಗಳುವವರೇ.

---

ಏನಾದರೂ ಆಗು ಮೊದಲು ಮಾನವನಾಗು.

ಇದೆಲ್ಲ ಆದ ಮೇಲೆ ದೊಡ್ಡ ಪ್ರಾಣಿಯನ್ನೂ ಉರುಳಿಸುವ ಛಲತೊಟ್ಟುನಿಂತರು. ಪುಟ್ಟುವಿಗೆ ಹಸಿಬಿಸಿಯ ಮಾಂಸ ಒಗ್ಗದೆ ಹೊಟ್ಟೆ ಗಡುಗುಡು ಶುರುಮಾಡಿತು. ಒಂದೆರಡು ಮೈಲಿ ಸುತ್ತಾಡಿರಬೇಕು. ಆಗ ಒಂದು ಗುಂಡಾಯಿತು. ಈ ಗುಂಡು ಅಣ್ಣು ಕಾಡುಕುರಿಯೊಂದಕ್ಕೆ ಹೊಡೆದಿದ್ದು. ಆದರೆ ಗುಂಡು ತಪ್ಪಿಹೋಗಿತ್ತು.

ತಪ್ಪು ಗುಂಡು ಹೊಡೆದವನಿಗೆ ಕಕ್ಕಡೆ ಅಥವಾ ಕೊಕ್ಕಾರ್ಚಿ ಮುಳ್ಳಿನಿಂದ ಶಿಕ್ಷೆಯೂ ಉಂಟು. ಕಕ್ಕಡೆ ಮುಳ್ಳಿನಿಂದ ತಪ್ಪು ಗುಂಡು ಹೊಡೆದವನ ಬೆತ್ತಲು ಬೆನ್ನಿನ ಮೇಲೆ ತಪ್ಪು ಗುರುತ ಮಾಡಲಾಗುತ್ತದೆ ಅಥವಾ ಕೊಕ್ಕಾರ್ಚಿ ಮುಳ್ಳಿನ ರೆಂಬೆಯನ್ನು ದಾರಿಗಡ್ಡಲಾಗಿಟ್ಟು ಅವನು ದಾಟುವಾಗ ಸರಕ್ಕನೆ ಎಳೆದು ಎರಡು ಕಾಲಿಗೂ ಗಾಯ ಮಾಡಲಾಗುತ್ತದೆ. ಕಕ್ಕಡೆ ಮುಳ್ಳೋ ಅಬ್ಬಾ1 ಸುಮಾರು ಎರಡು ಇಂಚು ಉದ್ದ ಇರಬಹುದಾದ ಮುಳ್ಳದು. ತುದಿ ಚೂಪಾಗಿದ್ದು ಬುಡದತ್ತ ಕ್ರಮೇಣ ದಪ್ಪವಾಗಿರುತ್ತದೆ. ಒಂದು ಮುಳ್ಳಿನಲ್ಲಿ ಹಲವು ಮುಳ್ಳುಗಳನ್ನು ಹೊಂದಿದ ಮುಳ್ಳಿನ ಗುಚ್ಛದಂತಿರುತ್ತದೆ. ಪಾದಕ್ಕೆ ಆ ಮುಳ್ಳು ನಾಟಿದರೆ ನೆತ್ತಿಗೆ ಬಂದಂತಾಗುತ್ತದೆ. ಮರದ ಕಾಂಡದಲ್ಲಿರುವ ಆ ಮುಳ್ಳು ರೆಂಬೆಗಳಲ್ಲಿ ವಿರಳ. ಅದರ ಹಣ್ಣು ತಿನ್ನಲು ಬಲು ರುಚಿ. ಆದರೆ ಮುಳ್ಳು? ಕೊಕ್ಕಾರ್ಚಿ ಮುಳ್ಳು ಪೊದೆಯಂತೆ ಬೆಳೆವ ಗಿಡ. ಅದರ ಮೈ ತುಂಬಾ ಮುಳ್ಳೋ ಮುಳ್ಳು. ಗಾಳದ ಮುಳ್ಳಿನಂಥಾ ಮುಳ್ಳು. ಒಮ್ಮೆ ಬಟ್ಟೆಗೆ ಚುಚ್ಚಿ ಕೊಂಡಿತಂದರೆ ಮುಗಿಯಿತು. ಅಲ್ಲಿ ಬಿಡಿಸಿದರೆ ಇಲ್ಲ, ಇಲ್ಲಿ ಬಿಡಿಸಿದರೆ ಅಲ್ಲಿ ಹಿಡಿದು ಕೊಳ್ಳುವ ಜಾತಿ. ಅದಕ್ಕೆ ಕೆಲವರಿಗೆ 'ನೀನೋಳ್ಳೆ ಕೊಕ್ಕಾರ್ಚಿ ಥರಾ ಆಡ್ಬೇಡಾ' ಅಂತ ಹೇಳೋದು. ಇಲ್ಲಿ ಅಣ್ಣುವಿಗೆ ಕೊಕ್ಕಾರ್ಚಿ ಮುಳ್ಳಿನ ಬದಲಿಗೆ ಕಕ್ಕಡೆ ಮುಳ್ಳಿನ 'ತಪ್ಪು ಗುರುತ' ಹಾಕುವ ಶಿಕ್ಷೆ ನಡೆದೇ ಹೋಯಿತು. ಇದ ಕಂಡು ಉಳಿದವರು "ಗುಂಡು ತಪ್ಪಿಸುವುದಿಲ್ಲ" ಎಂದು ಮನದಲ್ಲೇ ಪ್ರತಿಜ್ಞೆಗೈದಿರಬಹುದು.

ಬೇಟೆಗಾರರು ಹೀಗೆ ಮುಂದೆ ಮುಂದೆ ಸಾಗುತ್ತಿದ್ದಂತೆ ನಾಯಿಗಳು ಬೊಗಳಿದವು. ಯಾವುದೋ ಒಂದು ಪ್ರಾಣಿ ಪೊದೆಯನ್ನು 'ಲಟಪಟ' ಮುರಿಯುತ್ತಾ ಬರುತ್ತಿದೆ. ನಾಯಿ ಚೂ ಬಿಡುವವರು ಬಿಲ್ಲುನಿಂತವರು ಎಲ್ಲಿದ್ದಾರೆಂದೂ ತಿಳಿಯದು. ಅಂತೂ ಒಂದು ಅಂದಾಜಿನಲ್ಲಿ ಪ್ರಾಣಿಗಳನ್ನು ಅವರತ್ತ ಅಟ್ಟುತ್ತಾ ಮುಂದೆ ಮುಂದೆ ಬರುತ್ತಿದ್ದಾರೆ. ಹಾಗೆ ಸದ್ದು ಮಾಡುತ್ತಾ 'ಬುಸ್ ಬುಸ್' ಅನ್ನುತ್ತಾ ಹೆಜ್ಜೆ ಹೆಜ್ಜೆಗೆ ಪೊದೆಗೆ ಸಿಕ್ಕಿಕೊಳ್ಳುವ ಕೋಡುಗಳನ್ನು ಬಿಡಿಸಿಕೊಳ್ಳುತ್ತಾ ಬರುತ್ತಿದ್ದ ಪ್ರಾಣಿ ಕಡವೆ. ತನ್ನ ತಲೆಯನ್ನು ಮೇಲೆತ್ತಿ ಆಕಾಶದತ್ತ ಮಾಡಿ ತನ್ನ ಕೋಡುಗಳನ್ನು ಭುಜದ ಮೇಲಿಟ್ಟು ಓಡುತ್ತಿತ್ತು. ಓಡಿ ಬಂದು ಬಯಲಂಚಲ್ಲಿ ನಿಂತಿತು. ಕ್ಷಣದಲ್ಲಿ ಶತ್ರುವಿನ ವಾಸನೆ ಹಿಡಿದು ಮುಂದೆ ಓಡಿತು.

ಚೆಂಗುವಿನ ತಂಡ ಸದ್ದು ಬಂದತ್ತ ಕೋವಿಯನ್ನು ಹಿಡಿದು ಕಾಯುತ್ತಿರಬೇಕಾದರೆ ಈ ಕಡವೆ. ಆನೆ ನಡೆದ ದಾರಿಯಲ್ಲಿ ನಾಗಾಲೋಟದಿಂದ ಓಡಿ ಕಣ್ಮರೆಯಾಯಿತು. ಸ್ವಲ್ಪ ಹೊತ್ತಿನಲ್ಲಿ ಅದೇ ದಿಕ್ಕಿನಲ್ಲಿ ಇನ್ನೆಂಥದ್ದೋ ಒಂದು ಕಡ್ಡಿ ಮುರಿಯುತ್ತಾ ಮಾಂಕು ನಿಂತೆಡೆಗೆ ಬರುತ್ತಿದೆ. ಮಾಂಕು ನೆಲದಲ್ಲಿ ಕುಳಿತಿದ್ದಾನೆ. ಸದ್ದು ಬಂದೆಡೆಗೆ ಕೋವಿಯನ್ನಿಡಿದು ಬೇಟೆ ಕೊತ್ತಿಯನ್ನೆಳೆದು ಟ್ರಿಗರಿನ ಮೇಲೆ ಬೆರಳಿಟ್ಟು ರೆಡಿಯಾಗಿದ್ದಾನೆ. ಎಡಗಣ್ಣನ್ನು ಮುಚ್ಚಿ ಆ ಸದ್ದು ಬರುವೆಡೆಯ ಆಕೃತಿಗಾಗಿ ಒಂದೆರಡು ಎಣಿಸುತ್ತಿದ್ದಾನೆ. "ಗುಂಡು ತಪ್ಪಬಾರದು. ತಪ್ಪಿದರೆ ಮುಳ್ಳು ಕೋಲಿನ ಎಳೆತ ಖಂಡಿತ ಎಂದು ಕೊಳ್ಳುತ್ತಿರಬೇಕಾದರೆ ಕಪ್ಪಾಗಿರುವ ಒಂದು ಆಕೃತಿ ಚಟಪಟ ಸದ್ದು ಮಾಡುತ್ತ ಬಂದೇ ಬಿಟ್ಟಿತು. ಮಾಂಕುವಿನ ಗುಂಡು ಸಿಡಿದು ಗಿರಿಕಾನನಗಳಲ್ಲಿ ಪ್ರತಿಧ್ವನಿಯಾಯಿತು. ಗುಂಡು ಬಡಿದಿದೆ! ಪ್ರಾಣಿ ಎತ್ತಲೂ ಓಡಲಿಲ್ಲ! ಚಟಪಡಿಸಿ ಕ್ಷಣಾರ್ಧದಲ್ಲಿ ಸುಮ್ಮನಾಯಿತು!

'ಸಧ್ಯ ಬಚಾವೆದೆ' ಎನ್ನುತ್ತ ಕೋವಿಯನ್ನು ಮುರಿದು ಮತ್ತೊಂದು ತೋಟವನ್ನು ಲೋಡ್ ಮಾಡಿ ಪ್ರಾಣಿ ಬಿದ್ದಲ್ಲಿಗೆ ಮಾಂಕು ಓಡಿದ. ಅಷ್ಟರಲ್ಲಿ ದೂರದೂರದಲ್ಲಿದ್ದ ನಾಯಿಗಳೂ ಬೇಟೆಗಾರರೂ ಓಡಿಬಂದರು. ಮಾಂಕು ಪ್ರಾಣಿಯತ್ತ ಜಿಗಿದ. ಆದರೆ ಅದು ಮೃಗವಾಗಿರಲಿಲ್ಲ! ಹೃದಯ ವಿದ್ರಾವಕ ಘಟನೆ ನಡೆದು ಹೋಗಿತ್ತು. ನಾಯಿ ಚೂ ಬಿಡುತ್ತಿದ್ದ ಬೋಜು ಕಡವೆಯನ್ನು ಹಿಂಬಾಲಿಸುತ್ತ ಬಂದು ಮಾಂಕುವಿನ ಗುಂಡಿಗೆ ಬಲಿಯಾಗಿದ್ದ.

ಕೂಡು ಬೇಟೆಯನ್ನು ಅಂದಿಗೆ ಆ ತಂಡ ಕೈಬಿಟ್ಟಿತು. ಕೋಟ್ಯಾರ್, ಕಥೇರಿ ಅಲೆದ ಚೆಂಗು ಈಗ ಮೌನಿ!

- ಬಾರಯಂಡ ಜೋಯಪ್ಪ

---

15ನೇ ಪುಟದಿಂದ

| | | |
|---|---|---|
| 28-3-2000 | ಸರ್ವೀಸಸ್ ಕ್ರಾಸ್‌ಕಂಟ್ರಿ ಹೈದರಾಬಾದ್ (ಆಂದ್ರ ಪ್ರದೇಶ) ಮೂರನೇಯ ಸ್ಥಾನ ಕಂಚಿನ ಪದಕ. | |
| 1997 ರಲ್ಲಿ | ತನ್ನ ಸೆಂಟರ್ ಮತ್ತು ಬಟಾಲಿಯನ್‌ನಿಂದ ಪಡೆದ ಹಣ | = 5,000 = cash Award. |
| 1998 ರಲ್ಲಿ | ರಲ್ಲಿ ತನ್ನ ಸೆಂಟರ್ ಮತ್ತು ಬಟಾಲಿಯನ್‌ನಿಂದ ಪಡೆದ ಹಣ | = 35,000 = cash Award. |
| 1999 ರಲ್ಲಿ | ರಲ್ಲಿ ತನ್ನ ಸೆಂಟರ್ ಮತ್ತು ಬಟಾಲಿಯನ್‌ನಿಂದ ಪಡೆದ ಹಣ | = 30,000 = cash Award. |
| 2000 ರಲ್ಲಿ | ರಲ್ಲಿ ತನ್ನ ಸೆಂಟರ್ ಮತ್ತು ಬಟಾಲಿಯನ್‌ನಿಂದ ಪಡೆದ ಹಣ | = 35,000 |

ಸರ್ವೀಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್‌ನಿಂದ = 60,000 ರೂ. ಗಳು
ಆರ್ಮಿ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್‌ನಿಂದ = 35,000 ರೂ. ಗಳು
ಕ್ರಾಸ್ ಕಂಟ್ರಿ 12 ಕಿ.ಮೀ. ಓಟದಲ್ಲಿ ದಾಖಲೆ. 35ನಿಮಿಷ 27 ಸೆಕೆಂಡ್ಸ್ — 15-2-2000 ಹೈದರಬಾದ್ ( ಆಂಧ್ರ ಪ್ರದೇಶ)
ಮೆರಾಥಾನ್ 42ಕಿ.ಮೀ. "" 2 ಗಂಟೆ 18 ನಿಮಿಷ. — 2-10-1999 ಟಾ.ಟಾ. ನಗರ ( ಬಿಹಾರ್)

ಹೊಸೊಕ್ಲು ಟಿ.ಗೋಪಾಲ( ರಾಜ)

---

ತಾಳಿದವನು ಬಾಳಿಯಾನು.

# ಕೈಲ್ ಪೊಳ್ದ್

ಕರ್ನಾಟಕದಲ್ಲಿ ಕೊಡಗು ಒಂದು ಚಿಕ್ಕ ಜಿಲ್ಲೆ. ಇಲ್ಲಿ ಎಲ್ಲಾ ಮತ-ಧರ್ಮದ ಜನರು ಇರುವರು. ಕೊಡಗಿನಲ್ಲಿ ಕೃಷಿಕ ಜನಾಂಗದವರು ಅತಿ ಹೆಚ್ಚು. ಇವರು ವ್ಯವಸಾಯವನ್ನೇ ಮುಖ್ಯ ಕಸುಬಾಗಿ ಮಾಡುತ್ತಿರುವವರು. ಇಲ್ಲಿ ಭತ್ತ, ಕಾಫಿ, ಏಲಕ್ಕಿ, ಕರಿಮೆಣಸು, ಕಿತ್ತಳೆ, ಜೇನು ಹಾಗೂ ಹಲವಾರು ವಾಣಿಜ್ಯ ಬೆಳೆಗಳನ್ನು ಮುಖ್ಯವಾಗಿ ಬೆಳೆಯುತ್ತಾರೆ. ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧ ನದಿಯಾದ ಕಾವೇರಿ ನದಿಯು ಕೊಡಗಿನಲ್ಲಿಯೆ ಹುಟ್ಟಿ ಹರಿಯು ... ರಣ ಕೊಡಗಿಗೆ ಒಂದು ವಿಶೇಷ ಸ್ಥಾನ ಇದೆ.

ಕೊಡಗಿನ ವಿಶೇಷ ಹಬ್ಬಗಳಲ್ಲಿ "ಕೈಲ್ ಮುಹೂರ್ತವೂ ಒಂದು ಇದು ವಿಶೇಷವಾಗಿ ಕೊಡಗಿನ ಗೌಡರು ಹಾಗೂ ಕೊಡವರು ಆಚರಿಸುವ ಒಂದು ನಾಡ ಹಬ್ಬ.

ಕೈಲ್ ಮುಹೂರ್ತ ಎಂದರೇನು?

ಕೈಲ್ ಮುಹೂರ್ತ ಎಂದರೆ ಕೇಲ್ ಮುಹೂರ್ತ ಎನ್ನುವರು. ಕೀಲ್ ಎಂದರ "ಆಯುಧ" ಇದು ರೈತ ಮಿತ್ರರ ಒಂದು ಪ್ರಸಿದ್ಧ ಆಯುಧ ಪೂಜೆ.

ಕೊಡಗಿನ ರೈತ ಬಾಂಧವರು ಸಾಮಾನ್ಯವಾಗಿ ಯುಗಾದಿಯ ಶುಭದಿನದಂದು ಮೊದಲು ಗದ್ದೆಗೆ ಎತ್ತು ಕಟ್ಟುವುದು' ವಾಡಿಕೆ ಯುಗಾದಿಯ ದಿನ ಸಾಧ್ಯವಾಗದೇ ಹೋದರೆ ಬಿಸು ಸಂಕ್ರಮಣದ ದಿನ ಎತ್ತು ಕಟ್ಟುವುದು ಸಹಜ. ಎತ್ತು ಕಟ್ಟುವುದು ಎಂದರೆ ಒಳ್ಳೆಯ ದಿನದಲ್ಲಿ ಶುಭ ಮುಹೂರ್ತದಲ್ಲಿ ನೇಗಿಲು, ನೊಗ, ಗುದ್ದಲಿ, ಕತ್ತಿ ಹೀಗೆ ರೈತನು ಉಪಯೋಗಿಸುವ ಎಲ್ಲಾ ಆಯುಧಗಳನ್ನು ನೀರಿನಲ್ಲಿ ತೊಳೆದು ಉಳುಮೆಗೆ ಬಳಸುವ ಎತ್ತುಗಳನ್ನು ಸಹ ಮೈ ತೊಳೆಸಿ ಆಯುಧ ಹಾಗೂ ಎತ್ತುಗಳಿಗೆ ಗಂಧದ ತಿಲಕವನ್ನಿಟ್ಟು, ಹೂವನ್ನು ಇಟ್ಟು ತಮ್ಮ ತಮ್ಮ ಗದ್ದೆಗಳಲ್ಲಿ ಮೂರು ಸುತ್ತು ಹೂಡಿ ಆ ಬಳಿಕ ಹಣ್ಣುಕಾಯಿ ಪೂಜೆ ಮಾಡಿ ಅಂದಿನ ಆ ಶುಭದಿನದಿಂದ ಕೆಲಸವನ್ನು ರೈತರು ಪ್ರಾರಂಭಿಸುವರು. ಗದ್ದೆ, ತೋಟದ ಕೆಲಸಗಳು ಪ್ರಾರಂಭವಾದ ಮೇಲೆ ಕೆಲಸ ಮಾಡಿ ಮಾಡಿ ಸೋತು ಹೋದ ರೈತರಿಗೆ ಬಂಧು-ಬಳಗ, ನೆಂಟರಿಷ್ಟರ ಮನೆಗೆ ಹೋಗದೆ, ಅವರನ್ನು ನೋಡದೆ ಕೆಲಸವನ್ನು ಮಾಡಿ ಮಾಡಿ ಬೆಂದು ಬೇಸತ್ತು ಹೋಗಿರುವ ಕಾರಣ ಆಟಿ ತಿಂಗಳು ಕಳೆದು ಸೋಣ ತಿಂಗಳಿನಲ್ಲಿ (ಅಂದರೆ ಆಗಸ್ಟ್ 16ರ ನಂತರ ಸೋಣ - ಕೈಲ್ ಮುಹೂರ್ತ ಎಂಬ ಹಬ್ಬವನ್ನು ನೆಂಟರಿಷ್ಟರೊಡಗೂಡಿ ಬಹಳ ವಿಜೃಂಭಣೆಯಿಂದ ಆಚರಿಸುವರು.

ಈ ಹಬ್ಬದ ದಿನವೂ ಸಹ ಬೆಳಿಗ್ಗೆ ಬೇಗನೆ ಎದ್ದು ತಾವು ಇಷ್ಟು ದಿನ ಕೆಲಸಗಳಿಗೆ ಉಪಯೋಗಿಸಿದ ಎಲ್ಲಾ ಆಯುಧಗಳನ್ನು (ನೇಗಿಲು, ನೊಗ, ಗುದ್ದಲಿ, ಕತ್ತಿ ಇತ್ಯಾದಿ) ನೀರಿನಲ್ಲಿ ತೊಳೆದು ಎತ್ತುಗಳನ್ನು ತೊಳೆಯಿಸಿ ಗಂಧದ ತಿಲಕವನ್ನಿಟ್ಟು ಹೂವುಗಳನ್ನು ಇಟ್ಟು ಪೂಜೆ ಮಾಡಿ, ಇಂದಿಗೆ ಗದ್ದೆಕೆಲಸವು ಮುಗಿಯಿತೆಂದು ಎಲ್ಲಾ ಆಯುಧಗಳನ್ನು ತೆಗೆದು ಒಂದು ಕಡೆ ಜೋಪಾನವಾಗಿ ಇಡುತ್ತಾರೆ. ನಂತರ ತೆಗೆಯುವುದು ಮುಂದಿನ ಯುಗಾದಿಯ ಶುಭ ದಿನದಂದು.

ಈ ಹಬ್ಬದಲ್ಲಿ ವಿಶೇಷವಾಗಿ ಹಂದಿ ಮಾಂಸ, ಬಟ್ಟೆಲಿಟ್ಟು (ಇಡ್ಲಿ) ಇವುಗಳನ್ನು ಮಾಡುತ್ತಾರೆ. ಹೊರ ಊರಿನ ಹಾಗೂ ತಮ್ಮ ಊರಿನ ನೆರೆಕರೆಯವರನ್ನು ನೆಂಟರಿಷ್ಟರನ್ನು ಬರಮಾಡಿ ಕೊಂಡು ಬಹಳ ಸಂತೋಷದಿಂದ ಈ ಹಬ್ಬವನ್ನು ಆಚರಿಸುತ್ತಾ ತಮ್ಮ ಕಷ್ಟದ ಕೆಲಸವನ್ನು ಮರೆಯುತ್ತಾರೆ. ವಯಸ್ಸಾದವರು ಸ್ವಲ್ಪ ಸರಾಬನ್ನು ಸಹ ಸೇವಿಸಿ ಆನಂದದಿಂದ ಇರುತ್ತಾರೆ.

ಈ ಹಬ್ಬವನ್ನು ಕೊಡಗಿನಲ್ಲಿ ಎಲ್ಲರೂ ಒಂದೇದಿನ ಆಚರಿಸದೆ ಬೇರೆ ಬೇರೆ ದಿನ 3-4 ಬಾರಿ ಆಚರಿಸುವುದು ಪದ್ಧತಿ. ಆದರೆ ಈಗ ಸರ್ಕಾರವು ಕೊಡಗಿನಲ್ಲಿ ಈ ಹಬ್ಬವನ್ನು ಸೆಪ್ಟಂಬರ್ 3ರಂದು (ಅಂದರೆ ಸೋಣ 18ರಂದು) ಆಚರಿಸಬೇಕೆಂದು ಸರ್ಕಾರಿ ರಜೆಯನ್ನು ಘೋಷಿಸಿರುತ್ತಾರೆ. ಮಡಿಕೇರಿ ತಾಲೋಕಿನ ಭಾಗಮಂಡಲ, ನಾಪೋಕ್ಲು ಇತರೆಡೆ ಸೋಣ 12ರ ಕೈಲ್ ಮುಹೂರ್ತವನ್ನು ಆಚರಿಸುತ್ತಾರೆ. ಗಾಳಿ ಬೀಡು, ಗರ್ವಾಲೆ ಈ ಕಡೆಯವರು ಸೋಣ 8ರ ಹಬ್ಬವನ್ನು ಆಚರಿಸುತ್ತಾರೆ. ಉಳಿದವರು ಸೋಣ 18ರ ಹಬ್ಬವನ್ನು ಆಚರಿಸುತ್ತಾರೆ* ಸೆಪ್ಟಂಬರ್3) ಈ ರೀತಿ ಬೇರೆ ಬೇರೆ ದಿನ ಆ ಬೇರೆ ಬೇರೆ ಕಡೆ ಇರುವ ನೆಂಟರಿಷ್ಟರ ಮನೆಗೆ ಹೋಗಿ ಬರಲು ಅನುಕೂಲವಾಗುತ್ತದೆ. ಇದು ಹಿರಿಯರು ಮಾಡಿದ ಪದ್ಧತಿ.

ಇತ್ತೀಚೆಗೆ ಬೆಂಗಳೂರು ಹಾಗೂ ಮೈಸೂರು ಹಾಸನ, ಡಿಲ್ಲಿಯಂತಹ ನಗರಗಳಲ್ಲಿಯೂ ಈ ಹಬ್ಬವನ್ನು ಆಚರಿಸುವರು! ಏಕೆ ಅವರಿಗೂ ಗದ್ದೆ ತೋಟ ಕೆಲಸ ಮಾಡಿ ಸಾಕಾಗಿರುವುದೆ? ಹಾಗಲ್ಲ, ನಗರಗಳಲ್ಲಿ ಈಗ ಬಹಳ ಮಂದಿ ಕೊಡಗಿನ ಗೌಡ ಜನಾಂಗದವರು ಉದ್ಯೋಗ ವ್ಯಾಪಾರ ನಿಮಿತ್ತ ನಗರಗಳಲ್ಲಿ ವಾಸವಾಗಿರುವರು. ಆದರೆ ಇವರೆಲ್ಲ ಒಂದೇ ದಿನ ಒಂದು ಕಡೆ ಸೇರಲು ಸಾಧ್ಯವಿಲ್ಲ ಕೆಲವು ಸಲ ಮದುವೆ, ಗೃಹ ಪ್ರವೇಶ, ಹಾಗೂ ಇತರೆ ಸಭೆ ಸಮಾರಂಭಗಳಲ್ಲಿ ಸೇರಿದರೂ ಎಲ್ಲ ಗೌಡ ಜನಾಂಗದವರು ಸೇರಲು ಸಾಧ್ಯವಿಲ್ಲ, ಆದಕಾರಣ "ಕೈಲ್ ಮುಹೂರ್ತ" ಎಂಬ ಹಬ್ಬದ ಆಚರಣೆಯೊಂದಿಗೆ ಕೊಡಗಿನ ಎಲ್ಲ ಗೌಡ ಭಾಂಧವರು ಜೊತೆ ಸೇರಿ ತಮ್ಮ ತಮ್ಮ ಪರಿಚಯ ಹಾಗೂ ಇರುವಿಕೆಯನ್ನು ಪರಿಚಯಿಸಿಕೊಂಡು ಈ ಹಬ್ಬವನ್ನು ಬಹಳ ಸಂತೋಷದಿಂದ ಆಚರಿಸುತ್ತಾರೆ.

ಹಾಗೆಯೇ ಇದು ಗೌಡ ಜನಾಂಗದ ಒಗ್ಗಟ್ಟಿಗೂ ಒಂದು ಸದಾವಕಾಶವಾಗುತ್ತದೆ. ಈ ರೀತಿಯಲ್ಲಾದರೂ ಎಲ್ಲಾ ಗೌಡ ಭಾಂಧವರು ಒಟ್ಟು ಸೇರಿ ತಮ್ಮ ಜನಾಂಗದ ಏಳಿಗೆ ಹಾಗೂ ಶ್ರೇಯಸ್ಸಿಗೆ ಕಾರಣ ಕರ್ತರಾಗಿ ಗೌಡ ಜನಾಂಗದ ಅಭಿವದ್ಧಿಗೆ ಸಹಕರಿಸುವುದು ಶುಭ ಚಿಹ್ನೆಯಲ್ಲವೆ.

ಕುಂಟುಪುಣಿ ರಾಮಕೃಷ್ಣ
ಗೋಣಿ ಮರೂರು, ಸೋಮವಾರ ಪೇಟೆ.

ಕೊಡಗು ಸಂಗಾತಿ, ಪಾಕ್ಷಿಕನ್ನ ತಕ್ಕಂಡೊದಕು

## ಸುಳ್ಯದಲ್ಲಿ ಗೌಡ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ಹಾಗೂ ಜನಪ್ರತಿ ನಿಧಿಗಳಿಗೆ ಅಭಿನಂದನಾ ಸಮಾರಂಭ

ಸುಳ್ಯ ತಾಲೂಕು ಮತ್ತು ಕೊಡಗು ಜಿಲ್ಲೆಯ ಪೆರಾಜೆ, ಚೆಂಬು, ಮತ್ತು ಸಂಪಾಜೆ ಗ್ರಾಮ ಪಂಚಾಯತಿಗೆ ಸೀಮಿತಗೊಂಡಂತೆ ಆಯ್ಕೆಗೊಂಡ ಗೌಡ ಜನಾಂಗದ ಜನಪ್ರತಿನಿಧಿಗಳಿಗೆ ಅಭಿನಂದನೆ ಮತ್ತು ಸುಳ್ಯ ತಾಲೂಕಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವೊಂದು ಸುಳ್ಯ ಸಿ.ಎ.ಬ್ಯಾಂಕು ಸಭಾಂಗಣದಲ್ಲಿ ಜರುಗಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ದ.ಕ. ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ರತ್ನಾವತಿ ವಿ. ಗೌಡ ಆಗಮಿಸಿದ್ದರು. ಇವರು ಮಾತನಾಡುತ್ತಾ ಗೌಡ ಮಹಿಳೆಯರು ಸಮಾಜದಲ್ಲಿ ಮುಂದೆ ಬರಬೇಕು ಅಲ್ಲದೆ ಪುರುಷರ ಆದರ್ಶಗಳನ್ನು ಪಾಲಿಸಿಕೊಂಡು ಸ್ವಂತಿಕೆ ಬೆಳೆಸಿಕೊಂಡು ಜನಾಂಗಕ್ಕೆ ಮಾದರಿಯಾಗಬೇಕೆಂದರು.

ಪುತ್ತೂರು ಕ್ಷೇತ್ರದ ಶಾಸಕ ಹಾಗೂ ವಿಧಾನ ಸಭೆಯ ವಿಪಕ್ಷ ಉಪನಾಯಕ ಡಿ.ವಿ. ಸದಾನಂದ ಗೌಡ ಅತಿಥಿ ಸ್ಥಾನದಿಂದ ಮಾತನಾಡುತ್ತಾ ಗೌಡ ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಉತ್ತಮ ಕೆಲಸಗಳನ್ನು ಮಾಡಿ ಜನತೆಯಿಂದ ಪ್ರಶಂಸೆ ಗಳಿಸುವ ಪ್ರವೃತ್ತಿ ಬೆಳೆಸಬೇಕೆಂದರು. ಗೆದ್ದನಂತರ ಅಹಂಕಾರ, ದರ್ಪದಿಂದ ಎಲ್ಲವನ್ನು ಮರೆಯುವಂತಾಗಬಾರದು, ಅಧಿಕಾರವೆನ್ನುವುದು ಕ್ಷಣಿಕ ಎಂದರು.

ಜನಪ್ರತಿನಿಧಿಗಳಿಗೆ ಅಭಿನಂದನೆ ವ್ಯಕ್ತಪಡಿಸಿ ಮಾತನಾಡಿದ ಅರಂತೋಡು ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಕೆ. ಆರ್. ಗಂಗಾಧರ್ ಮಾತನಾಡುತ್ತಾ ಪಂಚಾಯತ್ ರಾಜ್ ವ್ಯವಸ್ಥೆಯ ಯಶಸ್ಸಿಗೆ ಜನಪ್ರತಿನಿಧಿಗಳು ನಿಷ್ಟವಂತರಾಗಿ ದುಡಿಯ ಬೇಕೆಂದರು. ನಮ್ಮ ದೇಶದಲ್ಲಿ ಜನಪ್ರತಿನಿಧಿಗಳು ಅಭಿವೃದ್ಧಿ ಕೆಲಸದ ಕಡೆ ಹೆಚ್ಚಿನ ಗಮನ ನೀಡುತ್ತಿಲ್ಲ. ಸರಕಾರ ವೈಫಲ್ಯವಾದಾಗ ಅಥವಾ ಜನ ವಿರೋಧಿ ನೀತಿ ತಳೆದಾಗ ಕ್ರಾಂತಿಯೆಬ್ಬಿಸಬೇಕು. ಹಾಗಾದಾಗ ಮಾತ್ರ ಸುಧಾರಿತ ಸಮಾಜ ನಿರ್ಮಾಣ ಸಾಧ್ಯವೆಂದರಲ್ಲದೆ ಜನಪ್ರತಿನಿಧಿಗಳು "ಏಡಿಯ" ಪ್ರವೃತ್ತಿ ಬಿಡಬೇಕೆಂದರು.

ಸಮಾರಂಭದ ಅಧ್ಯಕ್ಷತೆಯನ್ನು ಸುಳ್ಯ ಎಕಾಡಮಿ ಆಫ್ ಲಿಬರಲ್ ಎಜ್ಯುಕೇಷನ್ ಸಂಸ್ಥೆಯ ಅಧ್ಯಕ್ಷ ಕುರುಂಜಿ ವೆಂಕಟ್ರಮಣ ಗೌಡ ಮಾತನಾಡುತ್ತಾ ನಮ್ಮ ಜಾತಿ ಬಾಂಧವರು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಅವರನ್ನು ಹೆಚ್ಚು ವಿದ್ಯಾವಂತರನ್ನಾಗಿ ಮಾಡಿ ಎಂದು ಹೆತ್ತವರಿಗೆ ಕಿವಿಮಾತು ಹೇಳಿದರು. ವಿದ್ಯಾವಂತ ಮಗು ಸ್ವಾವಲಂಬಿಯಾದರೆ ಪ್ರತಿಯೊಂದು ಕುಟುಂಬ ಮೇಲೆ ಬರುತ್ತದೆ. ಎಂದರು. ಈಗಾಗಲೇ ಸುಳ್ಯದಲ್ಲಿ ಸ್ಥಾಪಿಸಿದ ವಿದ್ಯಾ ಸಂಸ್ಥೆಗಳ ಪ್ರಯೋಜನವನ್ನು ಪಡೆದುಕೊಳ್ಳಲು ಸಲಹೆ ನೀಡಿದರು.

ಸಮಾರಂಭದಲ್ಲಿ ಚಂದ್ರಾಕೋಲ್ಚಾರು ಪ್ರಾಸ್ತಾವಿಕ ಮಾತನಾಡಿದರು. ಗೌಡಯುವ ಸೇವಾ ಸಂಘದ ಅಧ್ಯಕ್ಷ ಮದುವೆ ಗದ್ದೆ ಬೋಜಪ್ಪಗೌಡ ಸ್ವಾಗತಿಸಿ, ದಿನೇಶ್ ಮಡಪ್ಪಾಡಿ ವಂದಿಸಿದರು.

ಈ ಕಾರ್ಯಕ್ರಮವನ್ನು ಸುಳ್ಯತಾಲೂಕು ಗೌಡ ಯುವ ಸೇವಾ ಸಂಘ ಹಮ್ಮಿಕೊಂಡಿತು.

ಎಂ. ಆರ್. ಗೋಪಾಲ್, ಪೆರಾಜೆ

8ನೇ ಪುಟದಿಂದ

ಈಶ್ವರ ಲಿಂಗ ಕಾಣುತ್ತಿದೆ.

ರೇವತಿಗೆ ಕುತೂಹಲದೊಂದಿಗೆ ಅನುಮಾನ ಸಹ ಬರಲಾರಂಭಿಸಿತು. ಅವಳು ಚುರುಕಾಗಿ ನೋಡುತ್ತಿದ್ದಾಳೆ.

ಗರ್ಭಗುಡಿಯ ಹತ್ತಿರ ಹೆಜ್ಜೆ ಶಬ್ದ !

ಬಾಗಿಲು ತೆರೆದು ಕೊಂಡಿತು.

ರೇವತಿ ಸರ್ರನೆ ನಂದಿ ಕಂಬದ ಹತ್ತಿರ ಬಂದು ಅವಿತು ಕೊಂಡು ನಿಂತಳು.

ಗರ್ಭಗುಡಿಯಿಂದ ಪೂಜಾರಿ ಬಂದನು ! ಬಾಗಿಲನ್ನು ಪುನಹ ಎಳೆದುಕೊಂಡು ಹೊರಗೆ ಹೋದನು !

ಅರೆ.... ಗರ್ಭ ಗುಡಿಯಲ್ಲಿ ಇರಲಿಲ್ಲ ಅವನು ! ಈಗ ದಿಢೀರ್ ಅಂತ ಅಲ್ಲಿಂದ ಹೇಗೆ ಬಂದ?

ಅಲ್ಲಿ ಎಲ್ಲಿ ಅವಿತು ಕೊಂಡಿದ್ದ?

ಪೂಜಾರಿ ಹೊರಗೆ ನಡೆಯುತ್ತಿದ್ದಾನೆ, ಅವನ ಕೈಯಲ್ಲಿ ಸ್ಟೀಲ್ ಡಬ್ಬಿ ಇದೆ? ಅದರ ಮುಚ್ಚಳ ಹಾಕಲಾಗಿದೆ !

ಅದರಲ್ಲಿ ಏನಿದೆ?

ಪೂಜಾರಿ ಅತ್ತ ಹೋದ ಕೂಡಲೇ ರೇವತಿ ಎದ್ದು ಗರ್ಭ ಗುಡಿಯನ್ನು ಪ್ರವೇಶಿಸಿದಳು !

ಇಲ್ಲಿ... ಇಲ್ಲಿ ಏನೋ ರಹಸ್ಯ ಇದೆ !

**(ಮುಂದುವರೆಯುತ್ತದೆ)**

---

## ತಿದ್ದುಪಡಿ.

ಸಂಪುಟ 4 ಸಂಚಿಕೆ15. ತಾಯ್ನಾಡಿಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಕೊಡಗಿನ ಪುತ್ರರು :

ಹಾಗೂ ಕೆ.ಎಂ. ತಿಮ್ಮಯ್ಯ ಅವರ ಸೇವೆ ಅನ್ನು ಜನರಲ್ ಕೊಡೆಂದೇರ ಎಸ್. ತಿಮ್ಮಯ್ಯ ಎಂದು ಓದಿಕೊಳ್ಳುವುದು. ಹಾಗೆಯೇ ಎಸ್. ಆರ್. ಪಳಂಗಪ್ಪ ಅವರು ಭಾಗಮಂಡಲ ಸಮೀಪ ಚೇರಂಗಾಲ ಗ್ರಾಮದವರು. ಚೆಟ್ಟಿಮಾನಿ ಎಂದು ಮುದ್ರಣ ಗೊಂಡಿರುವುದಕ್ಕೆ ವಿಷಾದಿಸುತ್ತೇವೆ. ಜನರಲ್ ಕೆ.ಎಸ್. ತಿಮ್ಮಯ್ಯನವರು ನಿವೃತ್ತಿ ನಂತರ U.N.O. ಸೇನೆಯ ಸೈಪ್ರೆಸ್‌ನಲ್ಲಿದ್ದವರ ಸೇನಾಧಿಪತಿಯಾಗಿ ನೇಮಿಸಲ್ಪಟ್ಟರು. ಸ್ವಲ್ಪ ಸಮಯದ ಮೇಲೆ ಅಲ್ಲಿ ಅವರು ಹೃದಯಾಘಾತದಿಂದ ನಿಧನ ಹೊಂದಿದರು.

**ಸಂಪಾದಕಿ**

---

## ನಗೆಹನಿ

ನಾನ್ ಒಂದ್ ಸಲ ಬೆಂಗ್ಳೂರಿಗೆ ಹೋಗಿರ್‌ಕನ ನನ್ನ ಸ್ನೇಹಿತ ಮಾರಪ್ಪ ಸೈಕಲ್ ಮೇಲೆ ಹೋಗ್ತಾ ಇದ್ದದ್ ಕಂಡ್ ನಾನ್ ಏ ಮಾರಾ, ಏ ಮಾರಾ ತೇಳಿ ಕರ್ದೆ. ತಕ್ಷಣ ನನ್ನ ಹತ್ತಿರ ನಿಂತಿದ್ದ ದಢೂತಿ ಸಿಂಗ್‌ಜಿ ಸಿಕ್ಕ್ ಗಾಬರಿಯಿಂದ ಅರೆ ಕೌನ್ ಮಾರಾ ಕಿಸ್‌ಕೋ ಮಾರಾ ಕ್ಯಾ ಮಾರಾ ಪಕೋಡೊ ಪಕೋಡೊ ಅಂತ ಬೊಬ್ಬೆ ಹೊಡ್ದ್‌ದನ್ನ ಕಂಡ್ ಪಕ್ಕಲಿ ಇದ್ದ ಜನ ಎಲ್ಲಾ ಹೊಟ್ಟೆ ಹುಣ್ಣಾಗುವಂತೆ ನಗ್ತಾ ಇದ್ದೊ. ಪೆಚ್ಚಾದ ಸಿಂಗ್‌ಜಿಗೆ ಹಿಂದಿಲೇ ವಿಷಯ ತಿಳಿಸಿದಾಗ ಆತ ಮತ್ತು ಪೆಚ್ಚಾತ್

ಕಾಶಿಪಳಂಗಪ್ಪ, ಮಡಿಕೇರಿ

---

ಗಂಡಸರ ಕೈಯಲ್ಲಿ ಹಣ ನಿಲ್ಲದು, ಹೆಂಗಸರ ಬಾಯಲ್ಲಿ ಗುಟ್ಟು ನಿಲ್ಲದು.

## 1 ನೇ ವರ್ಷದ ಪುಣ್ಯ ಸ್ಮರಣೆ



ಬಿದ್ರುಪಣೆ ಎಂ. ಯಂಕಪ್ಪ, ಕಟ್ಟೆಮಾಡು
ಜನನ : 1927 ಮರಣ : 10-9-1999

ನೀವು ನಮ್ಮನ್ನು ಅಗಲಿ ತಾರೀಕು 10-9-2000 ಕ್ಕೆ ೧ವರ್ಷ ಸಂದರೂ ನಿಮ್ಮ ಸವಿ ನೆನಪು ಹಾಗೂ ನಿಮ್ಮ ಆಶೀರ್ವಾದಗಳು ನಮ್ಮಲ್ಲಿ ಸದಾ ಹಚ್ಚಹಸುರಾಗಿದೆ. ನಿಮ್ಮ ತ್ಯಾಗ, ಪ್ರೀತಿ, ವಾತ್ಸಲ್ಯಗಳಿಂದ ಕೂಡಿದ ಆದರ್ಶ ಜೀವನ ನಮಗೆ ಮಾರ್ಗದರ್ಶನವಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಆ ಭಗವಂತನು ಚಿರಶಾಂತಿ ಕರುಣಿಸಲೆಂದು ಮನಪೂರ್ವಕ ಪ್ರಾರ್ಥಿಸುವ,

**ಪತ್ನಿ : ಜಾನಕಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು,**
**ಮೊಮ್ಮಕ್ಕಳು, ಮರಿ ಮಕ್ಕಳು ಹಾಗೂ ಅಪಾರ ಬಂಧು ಬಳಗದವರು.**

**ಪ್ರಕಟಣೆ :** ಬಿದ್ರುಪಣೆ ಕಮಲ ಜನಾರ್ಧನ, ಗೀತಾಕುಮಾರಿ
ಮೋಹನ್ ಕುಮಾರ್, ಮೈಸೂರು. ✆ : 581048

---

## ೧ ನೇ ವರ್ಷದ ಚಿರಸ್ಮರಣೆ



**ಪಾಂಡನ ಜಿ.ಸೋಮಪ್ಪ,**
ಜನನ : 14-11-1918, ಮರಣ : 14-09-1999

ನೀವು ನಮ್ಮನ್ನು ಅಗಲಿ ೧ ವರ್ಷ ಸಂದರೂ ನಿಮ್ಮ ಸವಿ ನೆನಪುಗಳು ಹಚ್ಚಹಸಿರಾಗಿರುತ್ತದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಕಾಲ ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ಪತ್ನಿ : **ಚೆಣ್ಣಮ್ಮ**, ಮಗ : **ಚಂದ್ರಶೇಖರ**
**ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿ ಮಕ್ಕಳು.**

ವಿಳಾಸ : ಮನೆ ನಂ.: 21-4(1)
ಗುಡ್ಡೆಮನೆ ಅಪ್ಪಯ್ಯ ಗೌಡ ರಸ್ತೆ,
ಜೂನಿಯರ್ ಕಾಲೇಜು ಮುಂಭಾಗ, ಮಡಿಕೇರಿ - 571 201.

---

## ಚಿರಸ್ಮರಣೆ

ನೀವು ನಮ್ಮನ್ನಗಲಿ ಒಂದು ವರುಷ ಸಂದರೂ ಸದಾ ನಿಮ್ಮ ಸವಿನೆನಪು ನಮ್ಮಲ್ಲಿ ಹಚ್ಚ ಹಸರಾಗಿ ಉಳಿದಿದೆ. ನಿಮ್ಮ ದಿವ್ಯಾತ್ಮಕ್ಕೆ ಆ ಭಗವಂತನು ಚಿರಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸುವ.
**ಮಗ :** ಯಾಧವ್, **ಸೊಸೆ :** ಜಾನಕಿ, **ಮೊಮ್ಮಕ್ಕಳು :** ಭಾನುಪ್ರಕಾಶ್, ಗಿರೀಶ್, ಚೇತನ್, ಬವನ್, ತೇಜಸ್ವಿನಿ, ಯತೀಶ್, ಹರೀಶ್, ತ್ರಿಶೂಲ್, ಮಿಥುನ್, ಗಗನ್, ಭವನ್, ಕವನ್ ಸಚಿನ್, ಮತ್ತು ಮನೆಯವರು.
**ಪ್ರಕಟಣೆ :** ಕೊಳಂಬೆ ಭಾನುಪ್ರಕಾಶ್ ಯಾಧವ್, ಮೈಸೂರು



**ಕೊಳಂಬೆ ಚಂದ್ರಮ್ಮ ರಾಮಪ್ಪ**
ಮರಣ : 25-9-1999

---

**ಪ್ರಕಟಣೆ :** ನಮ್ಮ ಅರೆಭಾಷೆ ಮತ್ತು ಗೌಡರ ಸಂಸ್ಕೃತಿ ಸಂಪ್ರದಾಯಗಳ ವಿಷಯವಾಗಿ 2 ಪುಟಗಳಿಗೆ ಮೀರದಂತೆ ಲೇಖನಗಳನ್ನು ಕಳುಹಿಸಿದರೆ ಉತ್ತಮವೆನಿಸಿದವುಗಳನ್ನು ಪ್ರಕಟಿಸಲಾಗುವುದು.

— ಸಂಪಾದಕಿ

---

## 3ನೇ ವರ್ಷದ ಸ್ಮರಣೆ


ನೀನು ನನ್ನನ್ನಗಲಿ ಮೂರು ವರ್ಷ ಕಳೆದರು ಸದಾ ನಿನ್ನನ್ನು ನೆನಸುತ್ತಿರುವ,

ನಿನ್ನ ಪತಿ : ಎಂ. ರಾಮೇಗೌಡ
ಮುಖ್ಯೋಪಾಧ್ಯಾಯರು, ವಿಶ್ವೇಶ್ವರಯ್ಯ ಪ್ರೌಢಶಾಲೆ, ಕ್ಯಾತನಹಳ್ಳಿ,
ಪಾಂಡವಪುರ ತಾ|| ಮಂಡ್ಯ ಜಿಲ್ಲೆ.



**ಕೊಡಗನ ಚಂದ್ರಮ್ಮ**
ಜನನ : 13-4-1943 ಮರಣ : 25-9-1997

# ಸಂತಾಪ ಸೂಚನೆ



ಎಡಿಕೇರಿ ಉತ್ತಯ್ಯ

ಪಪ್ಪಾ ನೀವು ತಾ|| 9-7-2000 ರಂದು ನಮ್ಮನ್ನೆಲ್ಲಾ ಅಗಲಿ ವೈಕುಂಠವಾಸಿಯಾದಿರಿ. ನಿಮ್ಮ ಅಗಲಿಕೆ ನಮ್ಮ ಸಂಸಾರಕ್ಕೆ ತುಂಬಲಾರದ ನಷ್ಟ. ನೀವು ಮಾಡಿರುವ ಜನಸೇವೆ, ಸರ್ಕಾರಸೇವೆ ನಿಮಗೆ ಸ್ವರ್ಗಕ್ಕೆ ದಾರಿಯಾಗಿರುತ್ತದೆ. ನಾವು ಎಲ್ಲರೂ ನೀವು ತೋರಿದ ಹಾದಿಯಲ್ಲಿಯೇ ನಡೆದು ಹೆಸರನ್ನು ಸದಾ ಹಸಿರಾಗಿರುವಂತೆ ಮಾಡುತ್ತೇವೆ. ನಿಮ್ಮ ಆತ್ಮಕ್ಕೆ ಸದಾ ಶಾಂತಿಯನ್ನು ಕೋರುವ

**ಪತ್ನಿ :** ಎಡಿಕೇರಿ ಸೀತವ್ವ ಉತ್ತಯ್ಯ

**ಮಕ್ಕಳು, ಅಳಿಯಂದಿರು :** ಕೋಳಿಬೈಲು ಕಮಲ ದೇವಯ್ಯ, ಕೊಪ್ಪತ್ತಡ್ಕ ಪಾರ್ವತಿ ಶೇಷಪ್ಪ, ಹೊನ್ನುಕೋಟಿ ದಮಯಂತಿ ಬೆಳ್ಯಪ್ಪ, ಮಹದೇವಪುರ ರಾಮೇಗೌಡ ಭಾಗಿರಥಿ , ಕೊಂಪುಳಿ ರಾಣಿ ಪೆಮ್ಮಯ್ಯ, ಕುದುಕುಳಿ ರಾಧ ದಾಮೋದರ

**ಮೊಮ್ಮಕ್ಕಳು :** ಪಾಡಿಚೆಟ್ಟಿರ ಅಮ್ಮಿ ಯತೀಶ್, ಪೆರ್ಮುಂಡ ರೇಖಾ ಬಾಲಚಂದ್ರ, ದುಮ್ಮೆಗೌಡನ ವೀಣಾ ಚಂದ್ರ, ಕೊಪ್ಪತ್ತಡ್ಕ ಸುಗುಣ ಭಾಗ್ಯ, ಚರಣ್, ಗಾಯಿ, ನೀನಾ, ಕೌಶಿ, ಕಾವ್ಯ, ಮಂಜು, ಪೂಜಾ, ಭವನ್, ಚೈತ್ರ

**ಮರಿಮಕ್ಕಳು :** ಪ್ರಜ್ಞ, ಲಾವಣ್ಯಾ, ರೋಹನ್, ಚಂದನ.

**ಪ್ರಕಟಣೆ :** ಕುದುಕುಳಿರಾಧ ದಾಮೋದರ್
ಗಣೇಶ್ ನಿಲಯ - 911, 33877
ಗಣೇಶ್ ಗ್ಯಾಸ್ ಏಜೆನ್ಸಿ - 911, 33322
ಗಣೇಶ್ ಎಂಟರ್ ಪ್ರೈಸಸ್ - 911, 32480
ಹೆಬ್ಬಗೋಡಿ, ಬೆಂಗಳೂರು - 561 229.

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.